ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

ಶನಿವಾರ, ಡಿಸೆಂಬರ್ 16, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 214 RNI : 27369/75

janathavani@mac.com
www.janathavani.com
08192 254736 91642 99999

## ರೈತರ ಸಾಲದ ಬಡ್ಡಿ, ಚಕ್ರಬಡ್ಡಿ ಮನ್ನಾ

### ಸಹಕಾರಿ ಬ್ಯಾಂಕ್‌ಗಳಲ್ಲಿ ಸಾಲ ಪಡೆದ ಕೃಷಿಕರಿಗೆ ನೆರವು ಘೋಷಿಸಿದ ಸಿಎಂ

ಬೆಳಗಾವಿ, ಡಿ. 15 - ರಾಜ್ಯದಲ್ಲಿ ತೀವ್ರ ಬರಗಾಲದಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದರೂ ಕೃಷಿ ಸಾಲ ಮನ್ನಾ ಸಾಧ್ಯವಿಲ್ಲ. ಆದರೆ, ಸಹಕಾರಿ ಬ್ಯಾಂಕ್‌ಗಳಲ್ಲಿ ಕೃಷಿಕರು ಪಡೆದಿರುವ ಸಾಲದ ಮೇಲಿನ ಬಡ್ಡಿ ಮತ್ತು ಚಕ್ರ ಬಡ್ಡಿ ಮನ್ನಾ ಮಾಡುವುದಾಗಿ ವಿಧಾನಸಭೆಯಲ್ಲಿಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ ಮಾಡಿದ್ದಾರೆ.



ಬಿ.ಎಸ್.ಯಡಿಯೂರಪ್ಪ ಅಧಿಕಾರಕ್ಕೆ ಬರುವ ಮುನ್ನ ಜನರಿಗೆ ಭರವಸೆ ನೀಡಿದಂತೆ ಕಾಂಗ್ರೆಸ್ ಕಳೆದ ಚುನಾವಣೆಯಲ್ಲಿ ಕೃಷಿ ಸಾಲ ಮನ್ನಾ ಮಾಡುವ ಭರವಸೆ ನೀಡಿರಲಿಲ್ಲ.

ಆದರೂ ರೈತರ ಸಂಕಷ್ಟ ಅರಿತು ಒಂದು ಬಾರಿಗೆ ಅನ್ವಯವಾಗುವಂತೆ ಸಹಕಾರಿ ಬ್ಯಾಂಕ್‌ಗಳಲ್ಲಿ ಪಡೆದಿರುವ ಸಾಲದ ಮೇಲಿನ ಬಡ್ಡಿಗಳನ್ನು ಮನ್ನಾ ಮಾಡುವುದಾಗಿ ತಿಳಿಸಿದರು.

ಬೆಳಗಾವಿಯಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದ ಕೊನೆಯ ದಿನವಾದ ಇಂದು ಉತ್ತರ ಕರ್ನಾಟಕಕ್ಕೆ ಒಂದಷ್ಟು ಕೊಡುಗೆಗಳನ್ನು ಪ್ರಕಟಿಸಿ, ಕೃಷಿಕನಿಗೆ ಸದ್ಯಕ್ಕೆ ಇಷ್ಟು ಮಾತ್ರ ಸರ್ಕಾರದಿಂದ ಮಾಡಲು ಸಾಧ್ಯ ಎಂದರು. ಸಹಕಾರಿ ಬ್ಯಾಂಕ್‌ಗಳಲ್ಲಿ ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲದ ಅಸಲನ್ನು ಕಟ್ಟಿದರೆ ಸಾಕು ಉಳಿದದ್ದನ್ನು ಸರ್ಕಾರ ಭರಿಸಲಿದೆ ಎಂದವರು ಹೇಳಿದರು.

ರಾಜ್ಯದ ಬಹುಭಾಗ ಬರಕ್ಕೆ ಸಿಲುಕಿ ರೈತರು ಕಂಗಾಲಾಗಿದ್ದಾರೆ, ಕೇಂದ್ರ ಸರ್ಕಾರದಿಂದ ನಮಗೆ ಯಾವುದೇ ನೆರವು ದೊರೆತಿಲ್ಲ, ದೆಹಲಿಯಲ್ಲಿ ಕುಳಿತಿರುವ ಪುಣ್ಯಾತ್ಮರು ನಮಗೆ ಭೇಟಿಗೂ ಅವಕಾಶ ನೀಡಿಲ್ಲ ಎಂದು ತಿಳಿಸಿದರು. ಹಾಗೆಂದು ನಾವೇನು ಕೈಕಟ್ಟಿ ಕುಳಿತಿಲ್ಲ, ಪರಿಹಾರ ಕಾರ್ಯಗಳ ಜೊತೆಗೆ ರೈತರ ನೆರವಿಗೂ ಬಂದಿದ್ದೇವೆ.

2018ರ ಚುನಾವಣೆಯಲ್ಲಿ ಬಿಜೆಪಿಯವರು ತಮ್ಮ ಪ್ರಣಾಳಿಕೆಯಲ್ಲಿ ಸಹಕಾರಿ ಸಂಘಗಳಲ್ಲಿನ ಒಂದು ಲಕ್ಷದವರೆಗಿನ ರೈತರ ಬೆಳೆ ಸಾಲ ಮನ್ನಾ ಮಾಡಲಾಗುವುದು ಎಂದು ಹೇಳಿದ್ದರು.

ಯಡಿಯೂರಪ್ಪನವರು ಮುಖ್ಯಮಂತ್ರಿ ಆಗಿದ್ದಾಗ ರೈತರು ಮತ್ತು ರಾಜ್ಯ ಕಂಗಾಲಾಗಿತ್ತು, ಅಂತಹ ಸಂದರ್ಭದಲ್ಲೂ ತಾವು ನೀಡಿದ್ದ ಭರವಸೆಯನ್ನು ಈಡೇರಿಸಲಿಲ್ಲ. ಈ ಬಗ್ಗೆ ಪ್ರಶ್ನೆ ಮಾಡಿದರೆ ಹಣ ಮುದ್ರಿಸುವ ಯಂತ್ರ ಇಲ್ಲ ಎಂದು ಕಿಡಿ ಕಾರಿದ್ದರು. ಜೊತೆಗೆ ಖಜಾನೆಯಲ್ಲಿ ಹಣವಿಲ್ಲ ಎಂದು ತಿಳಿಸಿದ್ದರು. (3ನೇ ಪುಟಕ್ಕೆ)

## ಹೊಸ ಜಾತಿ ಗಣತಿಗೆ ವೀರಶೈವ ಸಭಾ ಒತ್ತಾಯ

### ಶಾಸಕ ಶಾಮನೂರು ಶಿವಶಂಕರಪ್ಪ ನೇತೃತ್ವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಮನವಿ

ಬೆಳಗಾವಿ, ಡಿ. 15 – ವೈಜ್ಞಾನಿಕ ಹಾಗೂ ವಾಸ್ತವಾಂಶ ಆಧರಿಸಿ ಹೊಸದಾಗಿ ಜಾತಿ ಗಣತಿ ಮಾಡುವಂತೆ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಅವರ ನೇತೃತ್ವದ ನಿಯೋಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದೆ.


ಈ ಸಂದರ್ಭದಲ್ಲಿ ಸಚಿವರುಗಳಾದ ಎಂ.ಬಿ. ಪಾಟೀಲ್, ಈಶ್ವರ್ ಖಂಡ್ರೆ, ಲಿಂಗಾಯತ ವೀರಶೈವ ಮಹಾಸಭಾ ಉಪಾಧ್ಯಕ್ಷರಾದ ಅಥಣಿ ವೀರಣ್ಣ, ಅಣಬೇರು ರಾಜಣ್ಣ ಮತ್ತಿತರರು ಉಪಸ್ಥಿತರಿದ್ದರು.



8 ವರ್ಷಗಳ ಹಿಂದೆ ನಡೆಸಲಾದ ಕಾಂತರಾಜ್ ಆಯೋಗದ ಸಾಮಾಜಿಕ – ಆರ್ಥಿಕ ಸಮೀಕ್ಷೆ ಹಲವು ವೈರುಧ್ಯ ಹಾಗೂ ಲೋಪಗಳಿಂದ ಕೂಡಿದೆ. ಹೊಸದಾಗಿ ವೈಜ್ಞಾನಿಕವಾಗಿ ಸಮೀಕ್ಷೆ ನಡೆಸಬೇಕು. ನಾವು ಜಾತಿ ಗಣತಿಯ ವಿರೋಧಿಗಳಲ್ಲ ಎಂದು ಮನವಿಯಲ್ಲಿ ಹೇಳಲಾಗಿದೆ.

ಆರ್ಥಿಕ, ಸಾಮಾಜಿಕ ಸಮೀಕ್ಷೆ ನಡೆದಾಗ ನಮ್ಮ ವೀರಶೈವ ಲಿಂಗಾಯತ ಸಮುದಾಯದ ಬಹುಪಾಲು ಜನರು ತಮಗೆ ಲಭಿಸುವ ಮೀಸಲಾತಿಯಲ್ಲಿ ಅನ್ಯಾಯವಾಗುತ್ತದೆ ಎಂಬ ಭಯದಿಂದ ವೀರಶೈವ ಅಥವಾ ಲಿಂಗಾಯತ ಎಂದು ಬರೆಸದೆ ತಮ್ಮ ಒಳಪಂಗಡಗಳನ್ನು ನಮೂದಿಸಿದ್ದಾರೆ ಎಂದೂ (4ನೇ ಪುಟಕ್ಕೆ)

manipalhospitals
LIFE'S ON



ಮಣಿಪಾಲ್ ಆಸ್ಪತ್ರೆ ಯಶವಂತಪುರ, ಬೆಂಗಳೂರಿನ ಪ್ರಖ್ಯಾತ ವಾಸ್ಕ್ಯುಲರ್ ಶಸ್ತ್ರಚಿಕಿತ್ಸಾ ತಜ್ಞರು ಪ್ರತಿ ತಿಂಗಳ ಮೂರನೇ ಭಾನುವಾರದಂದು ಆರೈಕೆ ಆಸ್ಪತ್ರೆ, ದಾವಣಗೆರೆಯಲ್ಲಿ ಸಮಾಲೋಚನೆಗೆ ಲಭ್ಯವಿರುತ್ತಾರೆ

ಭಾನುವಾರ, 17ನೇ ಡಿಸೆಂಬರ್, 2023
ಬೆಳಗ್ಗೆ 10:00 ಘಂಟೆಯಿಂದ ಮಧ್ಯಾಹ್ನ 1:00 ಘಂಟೆಯವರೆಗೆ
ಆರೈಕೆ ಆಸ್ಪತ್ರೆ
ಹದಡಿ ರಸ್ತೆ, ಸ್ಟೇಡಿಯಂ ಎದುರು, ದಾವಣಗೆರೆ

ಡಾ. ರಾಜೇಂದ್ರ ಪ್ರಸಾದ್ ಬಿ
ಎಂಬಿಬಿಎಸ್, ಎಂ.ಎಸ್, ಡಿಎನ್‌ಬಿ (ರಕ್ತನಾಳ ಶಸ್ತ್ರಚಿಕಿತ್ಸೆ), ಎಫ್‌ವಿಇಎಸ್ (ಆಸ್ಟ್ರಿಯಾ)
ಸಲಹೆಗಾರರು - ವಾಸ್ಕ್ಯುಲರ್ ಮತ್ತು ಎಂಡೋವಾಸ್ಕ್ಯುಲರ್ ಸರ್ಜರಿ
ಮಣಿಪಾಲ್ ಆಸ್ಪತ್ರೆ ಯಶವಂತಪುರ, ಬೆಂಗಳೂರು.

ಈ ಸಮಸ್ಯೆಗಳ ಕುರಿತು ತಜ್ಞರೊಂದಿಗೆ ಸಲಹೆ ಪಡೆಯಿರಿ

ಉಬ್ಬಿರುವ ರಕ್ತನಾಳಗಳು । ಕೈ ಮತ್ತು ಕಾಲುಗಳ ಊತ ಮತ್ತು ನೋವು । ಮಧುಮೇಹ ಕಾಲು । ಡಯಾಲಿಸಿಸ್ । ವಾಸಿಯಾಗದ ಗಾಯಗಳು । ಕಾಲು ಬೆರಳುಗಳ ಬಣ್ಣ ಬದಲಾವಣೆ । ಗ್ಯಾಂಗ್ರೀನ್ ಮತ್ತು ಇನ್ನೂ ಅನೇಕ ಸಮಸ್ಯೆಗಳು

Manipal Hospital Yeshwanthpur
Brigade Gateway, #26/4, 80 Feet, Dr. Rajkumar Road, Malleshwaram West, Bengaluru 560 055, Karnataka.
P 080 6165 6262

ನಿಮ್ಮ ಅಪಾಯಿಂಟ್ಮೆಂಟ್‌ಗಾಗಿ ಕರೆ ಮಾಡಿ!
Harishkumar
+91 80505 60580

## ನೀರಾವರಿ ಯೋಜನೆಗಳಿಗೆ ಸರ್ವ ಪಕ್ಷ ನಿಯೋಗಕ್ಕೆ ಸಿದ್ಧ

### ಭೇಟಿಗೆ ಅವಕಾಶವನ್ನೇ ನೀಡದ ಪ್ರಧಾನಿ: ಸಿದ್ದರಾಮಯ್ಯ ಆರೋಪ

ಬೆಳಗಾವಿ, ಡಿ. 15 - ರಾಜ್ಯದ ನೀರಾವರಿ ಯೋಜನೆಗಳಿಗೆ ಕೇಂದ್ರ ಸರ್ಕಾರದ ಅನುದಾನ ಮತ್ತು ತೀರುವಳಿಗಳನ್ನು ಪಡೆಯಲು ಸರ್ವಪಕ್ಷ ನಿಯೋಗ ಕೊಂಡೊಯ್ಯಲು ಸರ್ಕಾರ ಸಿದ್ಧವಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನಸಭೆಯಲ್ಲಿಂದು ತಿಳಿಸಿದ್ದಾರೆ.

ಸುಪ್ರೀಂಕೋರ್ಟ್ ನಿರ್ಧಾರದಂತೆ ಸಾಮಾನ್ಯ ವರ್ಷಗಳಲ್ಲಿ 177.25 ಟಿಎಂಸಿ ತಮಿಳುನಾಡಿಗೆ ಕೊಡಬೇಕು ಎಂದು ತೀರ್ಪು ನೀಡಿದೆ. ಸಂಕಷ್ಟದ ಪರಿಸ್ಥಿತಿಯಲ್ಲಿ ಎರಡೂ ರಾಜ್ಯಗಳೂ ನೀರು ಹಂಚಿಕೊಳ್ಳಬೇಕು ಎಂದು ತಿಳಿಸಿದೆ.

ಮೇಕೆದಾಟು ಯೋಜನೆಯು ಕುಡಿಯುವ ನೀರು, ವಿದ್ಯುತ್ ಉತ್ಪಾದನೆ ಮಾಡುವ ಸಲುವಾಗಿ ರೂಪಿಸಿರುವ ಯೋಜನೆ. ಅಣೆಕಟ್ಟು, ಬ್ಯಾಲೆನ್ಸಿಂಗ್ ರಿಸರ್ವ್‌ಯರ್ ಕರ್ನಾಟಕದ ವ್ಯಾಪ್ತಿಯಲ್ಲಿಯೇ ನಿರ್ಮಿಸುವುದರಿಂದ ತಮಿಳುನಾಡಿಗೆ ಏನೂ ಹಾನಿಯಿಲ್ಲ. ಬದಲಿಗೆ ಅನುಕೂಲವಾಗುತ್ತದೆ. ತಮಿಳುನಾಡು, ಕೇರಳ, ಆಂಧ್ರದ ಜೊತೆ ಮಾತುಕತೆ ವಿಫಲವಾಗಿ ನ್ಯಾಯಮಂಡಳಿಯು 193 ಟಿಎಂಸಿ ನೀರು ಕೊಡಬೇಕು ಎಂದು ತೀರ್ಪು ನೀಡಿತ್ತು. ನಂತರ 177.25 ಟಿಎಂಸಿಯನ್ನು ತಮಿಳುನಾಡಿಗೆ ಬಿಡುಗಡೆ ಮಾಡಬೇಕು ಎಂದು (3ನೇ ಪುಟಕ್ಕೆ)

## ಬಾಲಕಿ ಅತ್ಯಾಚಾರ : ಬಿಜೆಪಿ ಶಾಸಕನಿಗೆ 25 ವರ್ಷ ಜೈಲು

ಸೋನಭದ್ರ (ಉತ್ತರ ಪ್ರದೇಶ), ಡಿ. 15 – ಒಂಭತ್ತು ವರ್ಷಗಳ ಹಿಂದೆ ಬಾಲಕಿ ಮೇಲೆ ಅತ್ಯಾಚಾರ ಎಸಗಿದ ಪ್ರಕರಣದಲ್ಲಿ ಉತ್ತರ ಪ್ರದೇಶದ ಬಿಜೆಪಿ ಶಾಸಕ ರಾಮದುಲಾರ್ ಗೊಂಡ್‌ಗೆ ಸ್ಥಳೀಯ ಜನಪ್ರತಿನಿಧಿಗಳ ನ್ಯಾಯಾಲಯ 25 ವರ್ಷಗಳ ಕಠಿಣ ಜೈಲು ಶಿಕ್ಷೆ ವಿಧಿಸಿದೆ. ಇದರಿಂದಾಗಿ ಗೊಂಡ್ ವಿಧಾನಸಭೆಯಿಂದ ಅನರ್ಹಗೊಳ್ಳುವುದು ನಿಶ್ಚಿತವಾಗಿದೆ.

ಶಾಸಕನಿಗೆ 10 ಲಕ್ಷ ರೂ.ಗಳ ದಂಡ ಸಹ ವಿಧಿಸಲಾಗಿದೆ. ಇದನ್ನು ಅತ್ಯಾಚಾರ ಸಂತ್ರಸ್ತೆಯ ಪುನರ್ವಸತಿಗೆ ಬಳಸಲಾಗುವುದು. ಸಂತ್ರಸ್ತೆ ಈಗ ಮದುವೆಯಾಗಿದ್ದು, ಎಂಟು ವರ್ಷದ ಹೆಣ್ಣು ಮಗು ಹೊಂದಿದ್ದಾರೆ.

2014ರಲ್ಲಿ ಈ ಘಟನೆ ನಡೆದಿತ್ತು. ಸಂತ್ರಸ್ತೆಯ ಸಹೋದರ ಈ ಬಗ್ಗೆ ಪ್ರಕರಣ ದಾಖಲಿಸಿದ್ದರು. ಆ ಸಂದರ್ಭದಲ್ಲಿ ಗೊಂಡ್ ಶಾಸಕ ಸ್ಥಾನ ಹೊಂದಿರಲಿಲ್ಲ.

## ಬೆಳಗಾವಿ ಪ್ರಕರಣ : ಸಂತ್ರಸ್ತ ಮಹಿಳೆಗೆ 5 ಲಕ್ಷ ರೂ. ಪರಿಹಾರ

ಬೆಳಗಾವಿ, ಡಿ. 15 - ಬೆಳಗಾವಿಯ ವಂಟಮೂರಿಯಲ್ಲಿ ಮಹಿಳೆಯೊಬ್ಬರನ್ನು ಬೆತ್ತಲೆಗೊಳಿಸಿ ಹಲ್ಲೆ ನಡೆಸಿದ ಪ್ರಕರಣದ ಸಂತ್ರಸ್ತೆಗೆ ರಾಜ್ಯ ಸರ್ಕಾರ 5 ಲಕ್ಷ ರೂಪಾಯಿ ಪರಿಹಾರ ಘೋಷಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಐದು ಲಕ್ಷ ರೂಪಾಯಿ ಪರಿಹಾರ ಘೋಷಿಸಿದ್ದಾರೆ ಎಂದು ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದ್ದಾರೆ.

## ಕಬ್ಬಿನಿಂದ ಎಥೆನಾಲ್ ಉತ್ಪಾದಿಸಲು ಅನುಮತಿ

ನವದೆಹಲಿ, ಡಿ. 15 – ಕಬ್ಬಿನ ಹಾಲಿನಿಂದ ಎಥೆನಾಲ್ ಉತ್ಪಾದನೆ ನಿಷೇಧಿಸುವ ಆದೇಶವನ್ನು ಕೇಂದ್ರ ಸರ್ಕಾರ ವಾಪಸ್ ಪಡೆದಿದೆ. ಕಬ್ಬಿನ ಹಾಲು ಹಾಗೂ ಬಿ - ಹೆವಿ ಮೊಲಾಸಿಸ್ ಮೂಲಕ ಎಥೆನಾಲ್ ಉತ್ಪಾದಿಸಬಹುದು. ಆದರೆ, 17 ಲಕ್ಷ ಟನ್ ಸಕ್ಕರೆಯನ್ನು ಮಾತ್ರ ಈ ಉದ್ದೇಶಕ್ಕೆ ಬಳಸಬೇಕು ಎಂದು ಮಿತಿ ಹಾಕಲಾಗಿದೆ.

## ‘ಕೆ.ಎಸ್.ಆರ್.ಟಿ.ಸಿ.’ ಹೋರಾಟ ರಾಜ್ಯ ಸಾರಿಗೆಗೆ ಗೆಲುವು

ಬೆಂಗಳೂರು, ಡಿ. 15 – ರಾಜ್ಯ ಸಾರಿಗೆ ಸಂಸ್ಥೆಯ ‘ಕೆ.ಎಸ್.ಆರ್.ಟಿ.ಸಿ.’ ಎಂಬ ಹೆಸರಿನ ಹಕ್ಕುಸ್ವಾಮ್ಯದ ಸುದೀರ್ಘ ಕಾನೂನು ಹೋರಾಟದಲ್ಲಿ ಜಯ ಗಳಿಸಿದೆ.



ಕರ್ನಾಟಕ ಹಾಗೂ ಕೇರಳ ಎರಡೂ ರಾಜ್ಯಗಳ ಸರ್ಕಾರಿ ಸಾರಿಗೆ ಸಂಸ್ಥೆಗಳು ‘ಕೆ.ಎಸ್.ಆರ್.ಟಿ.ಸಿ.’ ಎಂಬ ಸಂಕ್ಷಿಪ್ತ ಹೆಸರಿಗಾಗಿ ದಶಕಗಳಿಂದ ಕಾನೂನು ಹೋರಾಟ ನಡೆಸಿದ್ದವು.

ಕೆ.ಎಸ್.ಆರ್.ಟಿ.ಸಿ.ಯ ವಿನ್ಯಾಸ, ಚಿಹ್ನೆ ಹಾಗೂ ಪೇಟೆಂಟ್‌ಗಾಗಿ ಕರ್ನಾಟಕ ಸಾರಿಗೆ ಸಂಸ್ಥೆಯು ಪೇಟೆಂಟ್‌ಗಳ ಪ್ರಧಾನ ನಿಯಂತ್ರಕರ ಬಳಿ ಅರ್ಜಿ ದಾಖಲಿಸಿತ್ತು. ಈ ಬಗ್ಗೆ ಮದ್ರಾಸ್ ಹೈಕೋರ್ಟ್‌ನಲ್ಲಿ ಪ್ರಕರಣವನ್ನೂ ದಾಖಲಿಸಲಾಗಿತ್ತು.

ಈ ಬಗ್ಗೆ ತೀರ್ಪು ನೀಡಿರುವ ಹೈಕೋರ್ಟ್, ಕರ್ನಾಟಕ ಸಾರಿಗೆ ಸಂಸ್ಥೆಯು ಕೆ.ಎಸ್.ಆರ್.ಟಿ.ಸಿ. (4ನೇ ಪುಟಕ್ಕೆ)

## ಜಗಳೂರು ತಾ. ಅಭಿವೃದ್ಧಿಗಾಗಿ ಸರ್ಕಾರದ ಗಮನ ಸೆಳೆದ ಶಾಸಕ

ಜಗಳೂರು, ಡಿ.15- ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಅಭಿವೃದ್ಧಿಗೆ ರಾಜ್ಯ ಸರ್ಕಾರದಿಂದ 3.60 ಕೋಟಿ ರೂಪಾಯಿ ಅನುದಾನ ದೊರೆಯಲಿದೆ. ನಂಜುಂಡಪ್ಪ ವರದಿ ಅನ್ವಯ ಜಗಳೂರು ತಾಲ್ಲೂಕು ಅತಿ ಹಿಂದುಳಿದ ತಾಲ್ಲೂಕಿನ ಪಟ್ಟಿಯಲ್ಲಿದ್ದು ಕ್ಷೇತ್ರದಲ್ಲಿ ಆಸ್ಪತ್ರೆ ಸೇರಿದಂತೆ ಹಲವು ಮೂಲ ಸೌಕರ್ಯಗಳ ಅಭಿವೃದ್ಧಿಗೆ ನೆರವು ನೀಡಬೇಕೆಂದು ಶಾಸಕರು ಸದನದಲ್ಲಿ ಒತ್ತಾಯಿಸಿದರು.



**ತಾ.ಸಾರ್ವಜನಿಕ ಆಸ್ಪತ್ರೆ ಅಭಿವೃದ್ಧಿಗೆ 3.60 ಕೋಟಿ ರೂ. ಅನುದಾನ ಭರವಸೆ**

ಬೆಳಗಾವಿಯ ವಿಧಾನಸಭಾ ಅಧಿವೇಶನದಲ್ಲಿ ಕ್ಷೇತ್ರದ ಶಾಸಕ ಬಿ. ದೇವೇಂದ್ರಪ್ಪ ಅವರು ತಾಲ್ಲೂಕಿನ ಸಾರ್ವಜನಿಕ ಆಸ್ಪತ್ರೆಯ ದುಃಸ್ಥಿತಿ ಮತ್ತು ಅಭಿವೃದ್ಧಿಗಾಗಿ ಸರ್ಕಾರದ ಗಮನ ಸೆಳೆಯುವ ಪ್ರಯತ್ನ ಮಾಡಿದರು. ಸುಮಾರು 60 ವರ್ಷಗಳ ಹಳೆಯದಾಗಿರುವ ಸಾರ್ವಜನಿಕ ಆಸ್ಪತ್ರೆ ಕಟ್ಟಡ ತುಂಬಾ ಶಿಥಿಲವಾಗಿದ್ದು, ಮಳೆ ಬಂದರೆ ಸೋರುತ್ತಿದೆ. ಸಾರ್ವಜನಿಕರಿಗೆ ತುಂಬಾ ತೊಂದರೆ ಉಂಟಾಗಿದೆ. ತಜ್ಞ ವೈದ್ಯರು ಇಲ್ಲ, ಡಯಾಲಿಸಿಸ್ ಕೇಂದ್ರಕ್ಕೆ ಸಮರ್ಪಕ ಸೌಲಭ್ಯಗಳಿಲ್ಲ. ಇದರಿಂದಾಗಿ ರೋಗಿಗಳು ಪರದಾಡುವ ಪರಿಸ್ಥಿತಿ (3ನೇ ಪುಟಕ್ಕೆ)

## ವ್ಯಾಪಾರಿಗೆ ಬೆದರಿಕೆ, ಅನ್ಸಾರಿಗೆ ಜೈಲು ಶಿಕ್ಷೆ

ವಾರಣಾಸಿ, ಡಿ. 15 – ಕಲ್ಲಿದ್ದಲು ವ್ಯಾಪಾರಿಗೆ ಬೆದರಿಕೆ ಹಾಕಿದ ಪ್ರಕರಣದಲ್ಲಿ ಉತ್ತರ ಪ್ರದೇಶದ ಭೂಗತ ಹಾಗೂ ರಾಜಕಾರಣಿ ಮುಕ್ತಾರ್ ಅನ್ಸಾರಿಗೆ ನ್ಯಾಯಾಲಯ ಐದೂವರೆ ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ.

ಮಹಾವೀರ ಪ್ರಸಾದ್ ರಂಗುಟ ಹಾಗೂ ಅವರ ವಕೀಲ ವಿಧಾನ ಚಂದ್ರ ಯಾದವ್‌ರಿಗೆ ಬೆದರಿಕೆ ಹಾಕಿದ ರಾಜಕಾರಣಿಗೆ ಜನಪ್ರತಿನಿಧಿಗಳ ನ್ಯಾಯಾಲಯ 10 ಸಾವಿರ ರೂ.ಗಳ ದಂಡವನ್ನೂ ವಿಧಿಸಿದೆ.

ಅನ್ಸಾರಿ ಐದು ಬಾರಿ ಮೌ ಕ್ಷೇತ್ರದಿಂದ ಶಾಸಕ ಸ್ಥಾನಕ್ಕೆ ಆಯ್ಕೆಯಾಗಿದ್ದರೂ, 2022ರಲ್ಲಿ ಚುನಾವಣೆಗೆ ಸ್ಪರ್ಧಿಸಿರಲಿಲ್ಲ. ಅನ್ಸಾರಿ ಮಗ ಅಬ್ಬಾಸ್ ಅನ್ಸಾರಿ ಈ ಕ್ಷೇತ್ರದಿಂದ ಸ್ಪರ್ಧಿಸಿ ಗೆಲುವು ಸಾಧಿಸಿದ್ದರು.

ಹೊಸ ವರ್ಷದ ಉತ್ಸುಕತೆಯನ್ನು ಹಾಗೂ ಖುಷಿಯನ್ನು ದ್ವಿಗುಣಗೊಳಿಸಿ
ನಿಮ್ಮ ಅಚ್ಚು ಮೆಚ್ಚಿನ ಹ್ಯುಂಡಾಯ್ ಕಾರಿನೊಂದಿಗೆ
ನಿಮ್ಮ ಕೆ.ಜೆ ಹ್ಯುಂಡಾಯ್‌ನಲ್ಲಿ ಮಾತ್ರ



100% ಆನ್ ರೋಡ್ ಫೈನಾನ್ಸ್‌ನಲ್ಲಿ ಲಭ್ಯವಿದೆ

ಪಡೆಯಿರಿ ₹55 555 ದಿಂದ ₹2 55 555 ದವರೆಗೆ ಬಂಪರ್ ಉಳಿತಾಯ. ವಿವಿಧ ಮಾಡೆಲ್ ಹಾಗು ವೇರಿಯಂಟ್‌ಗಳ ಮೇಲೆ.

3 YEAR Unlimited** Kilometer Warranty
UPTO 7 YEARS Extended Warranty^
ಜನವರಿ 2024 ರಿಂದ ಬೆಲೆ ಏರಿಕೆಯ ಮೊದಲು ಖರೀದಿಸಿ
HYUNDAI

K J HYUNDAI
371/271, Avaragere, P B Road, **Davangere**, Ph: 7022042241, 7022001205, 7022001207, 9148005999.
BVKS Layout, Bheemasamudra Main Road, **Chitradurga**-577501, Ph: 9980759983, 7022001208, 7022426017, 9629868009, 7022898488.
NH-13, Holalkere Road, **Channagiri** - 577213, Ph: 6366508866, 7022898487, 9148004999.
**Ranebennur** – Coming soon

Lowest cost of maintenance##
my Hyundai app
Hyundai Promise Certified Pre-Owned Car
To know more, WhatsApp us on 8447228019

*Terms & Conditions apply. Benefits include cash discount, exchange bonus and benefits for government or corporate employees, whichever is applicable. **3-year warranty or upto 1 00 000 km whichever is earlier for Grand i10 NIOS, AURA, i20 & i20 N line. 3-year unlimited km warranty is applicable for VENUE, VENUE N Line, CRETA, ALCAZAR, TUCSON, VERNA, KONA Electric and IONIQ 5. ^Upto 7 years extended warranty is applicable only for petrol variants. #Available in selected models only. ##CRETA (Petrol) and the new VENUE (Petrol) has lowest average yearly periodic maintenance service cost in its segment of ₹ 3 608 and ₹ 3 056 respectively for 5 years in Delhi. Source: Cardekho.com. HMIL reserves the right to withdraw/modify the scheme without prior notice. Visit your nearest Hyundai dealership for more details. Hyundai urges you to follow traffic rules – these are meant to keep you safe on roads. Offer for i20 and i20 N Line is for pre facelift model and for the old model stocks available only. 100% on road finance available for Salaried class and is at the sole discretion of financier. All offers mentioned is for car deliveries during December 2023.

# ಅರಿವಿನಿಂದ ಮಾತ್ರ ಏಡ್ಸ್ ತಡೆ ಸಾಧ್ಯ




**ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕದ ಜಿಲ್ಲಾ ಕಾರ್ಯಕ್ರಮ ಅಧಿಕಾರಿ ಡಾ. ಪಿ.ಡಿ. ಮುರಳಿಧರ್**

ದಾವಣಗೆರೆ, ಡಿ. 15 – ಏಡ್ಸ್ ರೋಗಕ್ಕೆ ಯಾವುದೇ ಮದ್ದಿಲ್ಲ. ಅರಿವು ಹಾಗೂ ಪರೀಕ್ಷೆಯಿಂದ ಆರೋಗ್ಯ ಸ್ಥಿತಿ ಖಚಿತ ಪಡಿಸಿಕೊಳ್ಳುವ ಮೂಲಕ ಇದರ ಹರಡುವಿಕೆ ತಡೆಯಬಹುದು ಎಂದು ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕದ ಜಿಲ್ಲಾ ಕಾರ್ಯಕ್ರಮ ಅಧಿಕಾರಿ ಡಾ. ಪಿ.ಡಿ. ಮುರಳಿಧರ್ ಹೇಳಿದರು.

ನಗರದ ಮೋತಿ ವೀರಪ್ಪ ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ತಾಲ್ಲೂಕು ಮಟ್ಟದ ವಿಶ್ವ ಏಡ್ಸ್ ತಡೆ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಹೆಚ್.ಐ.ವಿ. ಒಂದು ವೈರಸ್ ಆಗಿದೆ. ಈ ವೈರಸ್ ಸೋಂಕಿಗೆ ಸಿಲುಕಿ ಕಾಯಿಲೆ ಪೂರ್ಣ ಹಂತಕ್ಕೆ ಬಂದಾಗ ಅದನ್ನು ಏಡ್ಸ್ ಎಂದು ಕರೆಯಲಾಗುತ್ತದೆ. ಏಡ್ಸ್‌ನ ಶೇ.90 ಪ್ರಕರಣಗಳಿಗೆ ಅಸುರಕ್ಷಿತ ಲೈಂಗಿಕತೆಯೇ ಕಾರಣ ಎಂದವರು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಏಡ್ಸ್ ಪ್ರತಿಬಂಧಕ ಘಟಕದ ಮೇಲ್ವಿಚಾರಕ ಎ.ಪಿ. ಜಗದೀಶ್, 2030ರ ವೇಳೆಗೆ ಭಾರತ ಹೆಚ್.ಐ.ವಿ. ಮುಕ್ತವಾಗಬೇಕು ಎಂಬುದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಗುರಿಯಾಗಿದೆ. ಈ ಗುರಿ ಸಾಧಿಸಲು ಸಮುದಾಯಗಳ ಶ್ರಮ ಬಹು ಮುಖ್ಯ. ವಿದ್ಯಾರ್ಥಿ ಸಮುದಾಯ ಏಡ್ಸ್ ಕುರಿತು ಜಾಗೃತಿ ಹೊಂದಬೇಕು ಎಂದು ಹೇಳಿದರು.

ಏಡ್ಸ್ ರೋಗಿಗಳ ಬಗ್ಗೆ ಕಳಂಕ ತೋರುವುದು ಇಲ್ಲವೇ ತಾರತಮ್ಯ ಮಾಡುವುದು ಅಪರಾಧ. ಇಂತಹ ಕೃತ್ಯ ಎಸಗುವವರಿಗೆ 2 ವರ್ಷ ಜೈಲು ಹಾಗೂ 10 ಲಕ್ಷ ರೂ.ಗಳ ದಂಡ ವಿಧಿಸಲು ಕಾಯ್ದೆಯಲ್ಲಿ ಅವಕಾಶ ಇದೆ ಎಂದವರು ಹೇಳಿದರು.

ಮೋತಿ ವೀರಪ್ಪ ಕಾಲೇಜಿನ ಪ್ರಾಂಶುಪಾಲ ಪಂಚಾಕ್ಷರಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ವೇದಿಕೆಯ ಮೇಲೆ ಜಿಲ್ಲಾ ಪಂಚಾಯ್ತಿ ಕಾನೂನು ಸಲಹೆಗಾರ ಮನೋಹರ್ ಮಹೇಂದ್ರಕರ್, ತಾಲ್ಲೂಕು ಆರೋಗ್ಯಾಧಿಕಾರಿ ಡಾ. ದೇವರಾಜ ಪಾಂಡುರಂಗ ಪಟಗೆ, ಚಿಗಟೇರಿ ಜಿಲ್ಲಾ ಆಸ್ಪತ್ರೆಯ ರಕ್ತನಿಧಿ ಕೇಂದ್ರದ ವೈದ್ಯಾಧಿಕಾರಿ ಡಾ. ಡಿ.ಹೆಚ್. ಗೀತಾ, ವೈದ್ಯಕೀಯ ಅಧಿಕಾರಿ ಡಾ. ವೆಂಕಟೇಶ್, ತಾಲ್ಲೂಕು ಆರೋಗ್ಯ ಶಿಕ್ಷಣಾಧಿಕಾರಿ ಹೆಚ್. ಉಮಾಪತಿ ಮತ್ತಿತರರು ಉಪಸ್ಥಿತರಿದ್ದರು.

# ಸರ್ಕಾರಿ ಕಚೇರಿಗಳಲ್ಲಿ ಪಾರದರ್ಶಕವಾಗಿ ಕಾರ್ಯನಿರ್ವಹಿಸಲು ಡಿಸಿ ಡಾ.ವೆಂಕಟೇಶ್ ಸೂಚನೆ



ದಾವಣಗೆರೆ, ಡಿ.15- ಸರ್ಕಾರಿ ಕಚೇರಿಗಳಲ್ಲಿ ಅಧಿಕಾರಿಗಳು ಉತ್ತಮ ಹಾಗೂ ಪಾರದರ್ಶಕವಾಗಿ ಕಾರ್ಯ ನಿರ್ವಹಿಸುವುದರ ಜೊತೆಗೆ ಸಾರ್ವಜನಿಕ ಸ್ನೇಹ ಪರವಾಗಿ ಕೆಲಸ ಮಾಡಬೇಕೆಂದು ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ ತಿಳಿಸಿದರು.

ಶುಕ್ರವಾರ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಜರುಗಿದ ಮಾಹಿತಿ ಹಕ್ಕು ಅಧಿನಿಯಮ 2005ರ ಕುರಿತ ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ದೇಶದಲ್ಲಿ ಮಾಹಿತಿ ಹಕ್ಕು 2005 ರಲ್ಲಿ ಹೊಸ ಕ್ರಾಂತಿಯೇ ಶುರು ಮಾಡಿದ್ದು, ಇದರ ಮೂಲ ಉದ್ದೇಶ ಮಾಹಿತಿ ಹಕ್ಕಿನ ಕಾಯ್ದೆಗಳನ್ನು ಜಾರಿಗೆ ತಂದು, ಸರ್ಕಾರಿ ಕಚೇರಿಗಳ ಆಡಳಿತದಲ್ಲಿ ಪಾರದರ್ಶಕತೆಯನ್ನುಕಾಪಾಡಿಕೊಳ್ಳುವುದಾಗಿದೆ.ಯಾವುದೇ ಅಧಿಕಾರಿ, ಆರ್‌ಟಿಐ ಕಾರ್ಯಕರ್ತರು ಹಾಗೂ ಸಾರ್ವಜನಿಕರು ಕಚೇರಿಗಳಿಗೆ ಬಂದು ಸಂಪೂರ್ಣ ಮಾಹಿತಿ ಕೇಳುವ ಮತ್ತು ಪಡೆದುಕೊಳ್ಳುವಂತಹ ಹಕ್ಕಿದೆ.

ಆರ್.ಟಿ.ಐ ಕಾರ್ಯಕರ್ತರು ಸರ್ಕಾರಿ ಕಚೇರಿಗಳಿಗೆ ಮಾಹಿತಿ ಪಡೆಯಲು ಬಂದಾಗ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು ಯಾವುದೇ ಆತಂಕಕ್ಕೆ ಒಳಗಾಗದೇ ಇಲಾಖಾವಾರು ಸಮರ್ಪಕ ಮಾಹಿತಿಯನ್ನು ಒದಗಿಸಬೇಕು. ಕ್ರಮಬದ್ಧವಾಗಿ ತಮ್ಮ ಕಚೇರಿಗಳಲ್ಲಿ ಮಾಹಿತಿಯ ದಾಖಲೆಗಳನ್ನು ನಿರ್ವಹಿಸಬೇಕು.

ಅಧಿಕಾರಿಗಳು ತಮ್ಮ ಕಚೇರಿಗಳಲ್ಲಿ 4.1ಎ ನಲ್ಲಿ ಕ್ರಮಬದ್ಧವಾಗಿ ಯಾವ ದಾಖಲೆಗಳನ್ನು ಸಾರ್ವಜನಿಕರಿಗೆ ಒದಗಿಸಲು ಅವಕಾಶವಿರುತ್ತದೆ ಎಂಬುದನ್ನು ತಿಳಿದುಕೊಂಡು ಮಾಹಿತಿ ನೀಡಬೇಕಾಗುತ್ತದೆ ಎಂದರು.

ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿ ವೆಂಕಟರಮಣಪ್ಪ.ಬಿ ಮಾಹಿತಿ ಹಕ್ಕು ಅಧಿನಿಯಮಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳೊಂದಿಗೆ ವಿಚಾರ ವಿನಿಮಯ ಹಾಗೂ ಉಪನ್ಯಾಸ ನೀಡಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುರೇಶ್ ಬಿ. ಇಟ್ನಾಳ್, ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಉಮಾ ಪ್ರಶಾಂತ್, ಅಪರ ಜಿಲ್ಲಾಧಿಕಾರಿ ಪಿ.ಎನ್ ಲೋಕೇಶ್, ಜಿಲ್ಲಾ ಪಂಚಾಯತ್ ಯೋಜನಾಧಿಕಾರಿ ಮಲ್ಲಾನಾಯ್ಕ್, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಜಯಕುಮಾರ್, ಎಂ. ಸಂತೋಷ್, ಉಪ ವಿಭಾಗಾಧಿಕಾರಿ ದುರ್ಗಾಶ್ರೀ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಅಂಧನ ಬಾಳಿಗೆ ಬೆಳಕಾದ ಆಶಾ



**ಹರಪನಹಳ್ಳಿ**

ಹರಪನಹಳ್ಳಿ, ಡಿ. 16 - ತಾಲ್ಲೂಕಿನ ಕೆರೆಗುಡಿಹಳ್ಳಿ ಗ್ರಾಮದ ಅಂಧ ವಿಕಲಚೇತನ ವ್ಯಕ್ತಿ ಪಿ.ಎಸ್. ಅಶೋಕ ಮತ್ತು ಆಶಾ ಇವರ ವಿವಾಹ ನೆರವೇರಿತು. ಜಗಳೂರು ತಾಲ್ಲೂಕಿನ ಶೆಟ್ಟಿಗೊಂಡನಹಳ್ಳಿ ಗ್ರಾಮದ ವಧು ಆಶಾ ವಿಕಲಚೇತನ ಪಿ.ಎಸ್. ಅಶೋಕ್ ಇವರನ್ನು ಕೈಹಿಡಿದಿದ್ದಾರೆ.

ಅಶೋಕ ಪಿಯುಸಿ ಮಾಡಿದ್ದು ಹೊಲ ಮನೆಯ ಸಣ್ಣ ಪುಟ್ಟ ಕೆಲಸ ಮಾಡುತ್ತಿದ್ದಾನೆ. ಆಶಾ ಸಹ ಎಸ್ಸೆಸ್ಸೆಲ್ಸಿ ಓದಿದ್ದು, ಇಬ್ಬರು ಪರಸ್ಪರ ಒಪ್ಪಿಗೆಯಿಂದ ಬಂಧು-ಬಳಗದವರ ನಡುವೆ ಮದುವೆ ವಿಜೃಂಭಣೆಯಿಂದ ನೆರವೇರಿತು.

ಈ ಸಂದರ್ಭದಲ್ಲಿ ವಧು-ವರರಿಗೆ ಶುಭ ಹಾರೈಸಿದ ಎಂ.ಆರ್.ಡಬ್ಲ್ಯೂ. ಆರ್. ಧನರಾಜ್ ಸಾಮಾನ್ಯ ಯುವಕ-ಯುವತಿ ವಿಕಲಚೇತನರನ್ನು ವಿವಾಹ ನೀಡುವ 50 ಸಾವಿರ ರೂಪಾಯಿಗಳನ್ನು ವಿವಾಹ ಪ್ರೋತ್ಸಾಹ ಧನವನ್ನು ಜಿಲ್ಲಾ ವಿಕಲಚೇತನರ ಕಲ್ಯಾಣ ಅಧಿಕಾರಿಗಳ ಮೂಲಕ ಒದಗಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ, ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ವೀರೇಶ್ ಸದಸ್ಯ ಎಸ್. ಸುರೇಶ್, ಕೆ.ಪಿ. ರಂಜಿತಾ, ವಿಆರ್‌ಡಬ್ಲ್ಯೂ ಹೊಸಕೋಟೆ ಪಿ.ಎಸ್. ಲೋಕೇಶ್, ಸರೋಜಮ್ಮಗೊರವಪ್ಪ, ಬಂಧು ಬಳಗದವರು ಹಾಗೂ ಊರಿನ ಗ್ರಾಮಸ್ಥರು ಹಾಜರಿದ್ದರು.

## ಕರ್ನಾಟಕ ಚುನಾವಣೆ : ಬಿಜೆಪಿ ವೆಚ್ಚ 196 ಕೋಟಿ

ನವದೆಹಲಿ, ಡಿ. 15 – ಕರ್ನಾಟಕ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಬಿಜೆಪಿ ಕೇಂದ್ರ ಕಚೇರಿ 341.65 ಕೋಟಿ ರೂ.ಗಳನ್ನು ಪಡೆದುಕೊಂಡಿತ್ತು. ಈ ಪೈಕಿ 196.7 ಕೋಟಿ ರೂ.ಗಳನ್ನು ಚುನಾವಣೆಗೆ ಖರ್ಚು ಮಾಡಲಾಗಿದೆ ಎಂದು ಚುನಾವಣಾ ಆಯೋಗಕ್ಕೆ ಮಾಹಿತಿ ನೀಡಲಾಗಿದೆ.

ಜಾಹೀರಾತು, ಮೆಸೇಜ್, ವೆಬ್‌ಸೈಟ್ ಹಾಗೂ ಟಿವಿ ವಾಹಿನಿಗಳಿಗೆ 78.10 ಕೋಟಿ ರೂ. ಖರ್ಚು ಮಾಡಲಾಗಿತ್ತು. 14.21 ಕೋಟಿ ರೂ.ಗಳನ್ನು ಸಮಾವೇಶಕ್ಕೆ ಖರ್ಚು ಮಾಡಲಾಗಿತ್ತು. ಅಭ್ಯರ್ಥಿಗಳಿಗೆ ನೀಡಲಾದ ಹಾಗೂ ರಾಜ್ಯ ಘಟಕದ ಮೂಲಕ ಖರ್ಚು ಮಾಡಲಾದ ಹಣ 34 ಕೋಟಿ ರೂ. ಎಂದು ತಿಳಿಸಲಾಗಿದೆ.

## ರಾಣೇಬೆನ್ನೂರಿನಲ್ಲಿ ಇಂದು ಪ್ರಗತಿ ಪರಿಶೀಲನಾ ಸಭೆ



ಶಾಸಕ ಪ್ರಕಾಶ ಕೋಳಿವಾಡ ಅಧ್ಯಕ್ಷತೆಯಲ್ಲಿ ಇಂದು ತಾಪಂ ಸಭಾ ಭವನದಲ್ಲಿ ಬೆಳಿಗ್ಗೆ ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆ ನಡೆಯಲಿದೆ ಎಂದು ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಸುಮಲತಾ ತಿಳಿಸಿದ್ದಾರೆ.

# ಸರ್ಕಾರಿ ಬಸ್ ಸೌಲಭ್ಯ ಕಲ್ಪಿಸಲು ಒತ್ತಾಯಿಸಿ ವಿದ್ಯಾರ್ಥಿಗಳ ಮನವಿ




ಜಗಳೂರು, ಡಿ. 15 - ತಾಲ್ಲೂಕಿನ ಗೌಡಗೊಂಡನಹಳ್ಳಿ ಗ್ರಾಮದ ವಿದ್ಯಾರ್ಥಿಗಳು ಸರ್ಕಾರಿ ಬಸ್ಸು ಸೌಲಭ್ಯ ಕಲ್ಪಿಸಲು ಒತ್ತಾಯಿಸಿ ಪಟ್ಟಣದ ತಾಲ್ಲೂಕು ಕಛೇರಿಗೆ ಆಗಮಿಸಿ ಮನವಿ ಪತ್ರ ಸಲ್ಲಿಸಿದರು.

ಕರುನಾಡ ನವ ನಿರ್ಮಾಣ ವೇದಿಕೆ ರಾಜ್ಯಾಧ್ಯಕ್ಷ ಜೆ. ಮಹಾಲಿಂಗಪ್ಪ ಮಾತನಾಡಿ, ಸ್ವಾತಂತ್ರ್ಯ ಬಂದು 75 ವರ್ಷಗಳು ಸಂದಿದರು ಇಂದೂ ಸಹ ಶಾಲಾ-ಕಾಲೇಜುಗಳಿಗೆ ತೆರಳುವ ವಿದ್ಯಾರ್ಥಿಗಳು ಸುಮಾರು ಮೂರು, ನಾಲ್ಕೂ ಕಿಲೋ ಮೀಟರ್ ನಡೆದುಕೊಂಡು ಬಂದು ವಿದ್ಯಾಭ್ಯಾಸ ಮಾಡುವ ಶೋಚನಿಯ ಸ್ಥಿತಿ ನಿರ್ಮಾಣವಾಗಿರುವುದು ದುರಂತ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಾವಿರಾರು ಜನ ವಿದ್ಯಾರ್ಥಿಗಳು ಪದವಿ ಪೂರ್ವ,ಪದವಿ, ವೃತ್ತಿಪರ ಶಿಕ್ಷಣ ಪಡೆಯಲು ಪ್ರತಿನಿತ್ಯ ಜಗಳೂರು ಪಟ್ಟಣಕ್ಕೆ ಆಗಮಿಸುತ್ತಿದ್ದು ಸರಿಯಾದ ಸಮಯಕ್ಕೆ ಸಾರಿಗೆ ವ್ಯವಸ್ಥೆ ಇಲ್ಲದೇ ವಿದ್ಯಾರ್ಥಿಗಳು ಶಿಕ್ಷಣದಿಂದ ವಿಮುಖರಾಗುತ್ತಿದ್ದಾರೆ. ಇನ್ನಾದರು ಕೆ. ಎಸ್.ಆರ್.ಟಿ.ಸಿ. ಅಧಿಕಾರಿಗಳು ಕೇವಲ ಜಗಳೂರು ದಾವಣಗೆರೆ ಮಾರ್ಗದಲ್ಲಿ ಬಸ್ಸುಗಳನ್ನು ಸಂಚಾರ ಮಾಡಿಸುವ ಜೊತೆಗೆ ಗ್ರಾಮೀಣ ಭಾಗಕ್ಕೆ ಸೇವೆಯನ್ನು ಒದಗಿಸಬೇಕೆಂದು ಒತ್ತಾಯ ಮಾಡಿದರು. ಗಾಣಗಟ್ಟೆ ಮಾರ್ಗದಲ್ಲಿ ಸಂಚಾರ ಮಾಡುವ ಸರ್ಕಾರಿ ಬಸ್ಸನ್ನು ಗೌರಿಪುರ, ಕ್ಯಾಸೇನಹಳ್ಳಿ, ತುಂಬಿನಕಟ್ಟೆ, ಮರಿಕಟ್ಟೆ, ಗೌಡಗೊಂಡನಹಳ್ಳಿ ಮುಖಾಂತರ ಬಸ್ಸು ಸಂಚಾರ ಮಾಡಲು ವ್ಯವಸ್ಥೆ ಮಾಡಬೇಕೆಂದು ಅವರು ಒತ್ತಾಯ ಮಾಡಿದರು.

ಈ ಸಂದರ್ಭದಲ್ಲಿ ಜಯಂತೆ, ಪಾತಲಿಂಗಪ್ಪ, ಮಧು-ಅಜ್ಜಯ್ಯ. ಮಂಜುನಾಥ್, ಮನು, ಸಂಜನ, ಮೇಘನ, ಲತಾ, ಲಕ್ಷ್ಮಿ, ರಮ್ಯ, ರೇಖಾ, ಮೇಘನ, ಚಂದನ, ಮಧು ಮತ್ತಿತರು ಚೇತನ ಮುಂತಾದವರು ಇದ್ದರು.

# ಪ್ರತ್ಯೇಕ ರಾಜ್ಯ ಬೇಡಿಕೆ ಸಲ್ಲದು : ಸಿಎಂ

ಬೆಳಗಾವಿ, ಡಿ. 15 - ಸರ್ಕಾರ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಬದ್ಧವಾಗಿದ್ದು, ಪ್ರತ್ಯೇಕ ರಾಜ್ಯದ ಬೇಡಿಕೆ ಸಲ್ಲದು ಹಾಗೂ ಅದು ತಾರತಮ್ಯ ನಿವಾರಣೆಗೆ ಪರಿಹಾರವೂ ಅಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನ ಪರಿಷತ್ತಿನಲ್ಲಿಂದು ತಿಳಿಸಿದ್ದಾರೆ.

ಉತ್ತರ ಕರ್ನಾಟಕದ ಮೇಲಿನ ಚರ್ಚೆಗೆ ಉತ್ತರ ನೀಡಿದ ಮುಖ್ಯಮಂತ್ರಿಗಳು, ಪ್ರತ್ಯೇಕ ಕರ್ನಾಟಕಕ್ಕೆ ಒತ್ತಾಯ ಮಾಡುವುದು ಏಕೀಕರಣಕ್ಕೆ ಹೋರಾಡಿ, ಪ್ರಾಣ ತ್ಯಾಗ ಮಾಡಿದವರಿಗೆ ನಾವು ಮಾಡುವ ಅವಮಾನವಾಗಿದೆ. ಏಕೀಕರಣಕ್ಕಾಗಿ ಬಹಳ ಜನ ಹೋರಾಡಿದರು. ಭಾಷಾವಾರು ಪ್ರಾಂತ್ಯ ರಚನೆ ಆಗುವಾಗಲೂ ಹೋರಾಟ ಮಾಡಿದವರಿದ್ದಾರೆ. ಹೈದರಾಬಾದ್ ಕರ್ನಾಟಕಕ್ಕೆ 371ಗೆ ತಿದ್ದುಪಡಿ ಮಾಡಿ 371ಜೆ ಪರಿಚ್ಛೇದಕ್ಕಾಗಿ ಮಲ್ಲಿಕಾರ್ಜುನ ಖರ್ಗೆ, ಧರ್ಮಸಿಂಗ್, ವೈಜನಾಥ್ ಪಾಟೀಲ್ ಮುಂತಾದವರು ಹೋರಾಡಿದರು. ನಾನು ಹಿಂದೆ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ 2014 ಮತ್ತು 2017 ರಲ್ಲಿ ಉತ್ತರ ಕರ್ನಾಟಕದ ಬಗ್ಗೆ ಚರ್ಚೆಯಾಗಿತ್ತು. ಒಮ್ಮೆ ಈ ಬಗ್ಗೆ ಎರಡು ಗಂಟೆಗಳಿಗೂ ಹೆಚ್ಚು ಕಾಲ ಉತ್ತರ ನೀಡಿದ್ದೆ ಎಂದು ಸ್ಮರಿಸಿದರು.

ಅಭಿವೃದ್ಧಿಗಾಗಿ ಮೀಸಲಿಟ್ಟ ಅನುದಾನ ಖರ್ಚಾಗಿ ಅಭಿವೃದ್ಧಿಯಾಗಬೇಕು. ಕಿತ್ತೂರು ಕರ್ನಾಟಕದ 5 ತಾಲ್ಲೂಕುಗಳು ಸೇರಿದಂತೆ ಅತಿ ಹಿಂದುಳಿದ, ಅತ್ಯಂತ ಹಿಂದುಳಿದ ತಾಲ್ಲೂಕುಗಳಿಗೂ ಅನುದಾನ ಕೊಡಲಾಗುವುದು, ಕಲ್ಯಾಣ ಕರ್ನಾಟಕಕ್ಕೆ 2013-14 ರಿಂದ ಈವರೆಗೆ 14,877.36 ಕೋಟಿ ರೂ.ಗಳು ಮೀಸಲಿಡಲಾಗಿದೆ. ಬಿಡುಗಡೆಯಾಗಿದ್ದು 10,280 ಕೋಟಿ ರೂ. ಹಾಗೂ 8,330 ಕೋಟಿ ರೂ. ವೆಚ್ಚವಾಗಿದೆ.

ಮುಂದಿನ ವರ್ಷದಿಂದ 5,000 ಕೋಟಿ ರೂ.ಗಳನ್ನು ಕಲ್ಯಾಣ ಕರ್ನಾಟಕಕ್ಕೆ ನೀಡಲಾಗುವುದು. ಮುಂಬೈ ಕರ್ನಾಟಕದ ಹಿಂದುಳಿದ ತಾಲ್ಲೂಕುಗಳಿಗೂ ಅನುದಾನ ನೀಡಲಾಗುವುದು ಎಂದರು.

# ಸೈನ್ಯದ ಫ್ಯೂಜ್ ಖರೀದಿಗಾಗಿ ಬಿ.ಇ.ಎಲ್. ಜೊತೆ 5,300 ಕೋಟಿ ರೂ. ಒಪ್ಪಂದ

ನವದೆಹಲಿ, ಡಿ. 15 - ಭಾರತೀಯ ಸೈನ್ಯಕ್ಕೆ ಹತ್ತು ವರ್ಷಗಳ ಅವಧಿಗೆ ಎಲೆಕ್ಟ್ರಾನಿಕ್ ಫ್ಯೂಜ್‌ಗಳ ಖರೀದಿಗಾಗಿ ಸರ್ಕಾರಿ ಸ್ವಾಮ್ಯದ ಭಾರತ್ ಎಲೆಕ್ಟ್ರಾನಿಕ್ಸ್ ಕಂಪನಿಯ (ಬಿ.ಇ.ಎಲ್.) ಜೊತೆ 5,300 ಕೋಟಿ ರೂ.ಗಳ ಒಪ್ಪಂದ ಮಾಡಿಕೊಳ್ಳಲಾಗಿದೆ.

ಫಿರಂಗಿಗಳಲ್ಲಿ ಈ ಫ್ಯೂಜ್‌ಗಳು ಪ್ರಮುಖ ಪಾತ್ರ ವಹಿಸುತ್ತವೆ. ಇವುಗಳು ಫಿರಂಗಿಗಳ ಸೈನಿಕ ಕಾರ್ಯಾಚರಣೆಯಲ್ಲಿ ಸುಸ್ಥಿರವಾದ ಶಕ್ತಿ ಒದಗಿಸುತ್ತವೆ.

ಮುಂದಿನ ಹತ್ತು ವರ್ಷಗಳ ಅವಧಿಗೆ ಫ್ಯೂಜ್‌ಗಳ ಪೂರೈಕೆಗಾಗಿ ರಕ್ಷಣಾ ಸಚಿವಾಲಯವು ಭಾರತ್ ಎಲೆಕ್ಟ್ರಾನಿಕ್ಸ್ ಜೊತೆ 5,336.25 ಕೋಟಿ ರೂ.ಗಳ ಒಪ್ಪಂದ ಮಾಡಿಕೊಂಡಿದೆ. ಈ ಕ್ರಮ ದೇಶೀಯವಾಗಿ ಶಸ್ತ್ರಗಳ ಉತ್ಪಾದನೆಗೂ ಉತ್ತೇಜನ ನೀಡಲಿದೆ.

## ನಗರದಲ್ಲಿ ಇಂದು ಅಯ್ಯಪ್ಪಸ್ವಾಮಿ ಪಡಿಪೂಜೆ



ಎಂ.ಸಿ.ಸಿ 'ಬಿ' ಬ್ಲಾಕ್ ಬಿಐಇಟಿ ರಸ್ತೆಯಲ್ಲಿರುವ ಶ್ರೀ ಅಯ್ಯಪ್ಪಸ್ವಾಮಿ ಮಂಡಲ ಪೂಜೆ, ದೀಪೋತ್ಸವ ಹಾಗೂ ಅನ್ನ ಸಂತರ್ಪಣೆ ಕಾರ್ಯಕ್ರಮವು ಇಂದು ನಡೆಯಲಿದೆ. ಬೆಳಿಗ್ಗೆ 5.30 ಕ್ಕೆ ಪಂಚ ದೇವರಿಗೆ ಪಂಚಾಮೃತ, ಶ್ರೀ ಅಯ್ಯಪ್ಪಸ್ವಾಮಿ ತುಪ್ಪದ ಅಭಿಷೇಕ, ಸಹಸ್ರ ನಾಮಾವಳಿ, ಪುಷ್ಪಾರ್ಚನೆ ಅಲಂಕಾರ, ಮಂತ್ರಪುಷ್ಪ, ಅಷ್ಟವರ್ಧನ ಮಹಾಗಣಪತಿ ಹೋಮ, ಮಹಾಮಂಗಳಾರತಿ ನಡೆಯಲಿದೆ. ನಂತರ ಮಧ್ಯಾಹ್ನ 1 ಗಂಟೆಗೆ ಅನ್ನ ಸಂತರ್ಪಣೆ ನಡೆಯಲಿದೆ. ಸಂಜೆ 5 ಕ್ಕೆ ಶ್ರೀ ಅಯ್ಯಪ್ಪಸ್ವಾಮಿ ಭವ್ಯ ಮೆರವಣಿಗೆ, ದೀಪಾರಾಧನೆ, ಪಡಿಪೂಜೆ ಮಂಗಳಾರತಿ ನಡೆಯಲಿದೆ.

## ಮಧ್ಯಪ್ರದೇಶ : ಅಕ್ರಮ ಮಾಂಸದ ಅಂಗಡಿ, ಆರೋಪಿಗಳ ಮನೆಗಳು ಧ್ವಂಸ

ಭೂಪಾಲ್, ಡಿ. 15 – ಮಧ್ಯಪ್ರದೇಶದ ಉಜ್ಜೈನಿಯಲ್ಲಿ ಹತ್ತು ಅಕ್ರಮ ಮಾಂಸದ ಅಂಗಡಿಗಳು ಹಾಗೂ ಭೂಪಾಲದಲ್ಲಿ ಮೂವರು ಆರೋಪಿಗಳ ಮನೆಗಳನ್ನು ಬುಲ್ಡೋಜರ್ ಮೂಲಕ ಧ್ವಂಸಗೊಳಿಸಲಾಗಿದೆ.

ಮುಖ್ಯಮಂತ್ರಿಯಾಗಿ ಮೋಹನ್ ಯಾದವ್ ಅವರು ಅಧಿಕಾರ ವಹಿಸಿಕೊಂಡ ನಂತರ ಈ ಕ್ರಮ ತೆಗೆದುಕೊಳ್ಳಲಾಗಿದೆ. ಉಜ್ಜೈನಿಯಲ್ಲಿ ಬಹಿರಂಗ ಮಾಂಸ ಮಾರಾಟದ ವಿರುದ್ಧ ಕ್ರಮ ತೆಗೆದುಕೊಳ್ಳಲು ಆದೇಶ ಹೊರಡಿಸಲಾಗಿದೆ.

ಉಜ್ಜೈನಿಯ ನಾಗಝರಿಯಲ್ಲಿ ನಿಯಮ ಉಲ್ಲಂಘಿಸಿದ ಮಾಂಸದ ಅಂಗಡಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿದೆ. ಉಳಿದ ಅಂಗಡಿಗಳನ್ನು ಮುಚ್ಚಬೇಕು ಇಲ್ಲವೇ ಕ್ರಮ ಎದುರಿಸಬೇಕು ಎಂದು ತಿಳಿಸಲಾಗಿದೆ.

ಭೂಪಾಲದಲ್ಲಿ ಬಿಜೆಪಿ ಪದಾಧಿಕಾರಿಯೊಬ್ಬರ ಮೇಲೆ ಹಲ್ಲೆ ನಡೆಸಿದ ಮೂವರು ಆರೋಪಿಗಳ ಮನೆಗಳನ್ನು ಧ್ವಂಸಗೊಳಿಸಲಾಗಿದೆ. ಈ ಮನೆಗಳನ್ನು ಅಕ್ರಮವಾಗಿ ಜಮೀನು ಒತ್ತುವರಿ ಮಾಡಿಕೊಂಡು ನಿರ್ಮಿಸಲಾಗಿತ್ತು.

## ನಗರದಲ್ಲಿ ಇಂದು ಉತ್ಸವ ಕಾರ್ಯಕ್ರಮ

ಶ್ರೀ ಕನ್ನಿಕಾಪರಮೇಶ್ವರಿ ದೇವಸ್ಥಾನ ಡೈಮಂಡ್ ಜ್ಯೂಬ್ಲಿ ವಿದ್ಯಾಪೀಠದ ಬಿ.ಎಸ್.ವಿ.ಜೆ. ಇಂಗ್ಲಿಷ್ ನರ್ಸರಿ ಅಂಡ್ ಹೈಯರ್ ಪ್ರೈಮರಿ ಸ್ಕೂಲ್ ಮತ್ತು ಕೆವಿಎಸ್ ಆಂಗ್ಲ ಮಾಧ್ಯಮ ಪ್ರೌಢಶಾಲೆಗೆ 'ಉತ್ಸವ- 2023' ಕಾರ್ಯಕ್ರಮವನ್ನು ಇಂದು ಸಂಜೆ 4 ಗಂಟೆಗೆ ಚನ್ನಗಿರಿ ವಿರೂಪಾಕ್ಷಪ್ಪ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ. ಎಸ್.ಕೆ.ಪಿ. ವಿದ್ಯಾಪೀಠದ ಅಧ್ಯಕ್ಷ ಆರ್.ಎಸ್. ನಾರಾಯಣಸ್ವಾಮಿ ಅಧ್ಯಕ್ಷತೆ ವಹಿಸುವರು. ಡಿಡಿಪಿಐ ಜಿ. ಕೊಟ್ರೇಶ್, ಹರಿಹರ ಕಂದಾಯ ಇಲಾಖೆ ಅಧಿಕಾರಿ ಹೆಚ್.ಎಲ್. ಆನಂದ್, ಸಿ.ಆರ್. ವಿರೂಪಾಕ್ಷಪ್ಪ, ಆರ್. ಎಲ್. ಪ್ರಭಾಕರ್, ಆರ್.ಜಿ. ಶ್ರೀನಿವಾಸಮೂರ್ತಿ, ನಾಗರಾಜ್ ವಿ. ಕಾಸಲ್, ಜೆ.ವಿ. ಗೋಪಲಕೃಷ್ಣ, ಕೆ. ಆನಂದರಾಮ್ ಶೆಟ್ಟಿ, ಕಾಸಲ್ ಬಿ. ಸತೀಶ್,ಬಿ.ವಿ. ಗಂಗಪ್ಪಶೆಟ್ಟಿ, ಬಿ.ಎನ್. ಮಂಜುನಾಥ್, ಡಾ.ಡಿ.ಪಿ. ಕುಮಾರ್ ಮತ್ತಿತರರು ಭಾಗವಹಿಸಲಿದ್ದಾರೆ.

# ಹರಿಹರದ ಶ್ರೀ ಗ್ರಾಮ ದೇವತೆ ಊರಮ್ಮ ದೇವಸ್ಥಾನದಲ್ಲಿ ಸಂಭ್ರಮದ ಕಾರ್ತಿಕೋತ್ಸವ





ಹರಿಹರ, ಡಿ. 15 - ನಗರದ ಹೊಸ ಭರಂಪುರ ಬಡಾವಣೆಯ ಶ್ರೀ ಗ್ರಾಮ ದೇವತೆ ಊರಮ್ಮದೇವಿಗೆ ಕಾರ್ತಿಕ ಮಹೋತ್ಸವ ನಿಮಿತ್ಯ ಊರಮ್ಮ ದೇವಿಗೆ ಬೆಳಗ್ಗೆ ವಿಶೇಷ ಅಭಿಷೇಕ, ಅಲಂಕಾರ, ಮಹಾಮಂಗಳಾರತಿ ಸೇರಿದಂತೆ ವಿವಿಧ ಬಗೆಯ ಪೂಜಾ ಕಾರ್ಯಗಳು ನಡೆದು, ಸಂಜೆ ದೇವಿಯ ಮೂರ್ತಿಯನ್ನು ಮಹಿಳೆಯರ ಆರತಿ ಕಳಸಗಳ ಮೂಲಕ ಡೊಳ್ಳು, ಸಮಾಳ, ಡ್ರಮ್ ಸೆಟ್ ಹಾಗೂ ವಿವಿಧ ಕಲಾ ಮೇಳಗಳೊಂದಿಗೆ ಅದ್ಧೂರಿಯಾಗಿ ಮೆರವಣಿಗೆಯ ತದನಂತರ ಮಹಾ ದೀಪೋತ್ಸವ ನಡೆಯಿತು.

ಈ ಸಂದರ್ಭದಲ್ಲಿ ಕಸಬಾ ಗೌಡ್ರು ಲಿಂಗರಾಜ್ ಪಾಟೀಲ್, ಗೌಡ್ರು ಪುಟ್ಟಪ್ಪ, ಬಣಕಾರ ಸಿದ್ದಪ್ಪ, ಗ್ರಾಮದೇವತೆ ದೇವಸ್ಥಾನ ಸಮಿತಿಯ ಅಧ್ಯಕ್ಷ ಪೂಜಾರ್ ಈರಣ್ಣ, ಗೌರವ ಅಧ್ಯಕ್ಷ ಪಾಲಕ್ಷಪ್ಪ, ಪ್ರಧಾನ ಕಾರ್ಯದರ್ಶಿ ಕೆ.ಬಿ. ರಾಜಶೇಖರ, ಉಪಾಧ್ಯಕ್ಷ ಬೆಣ್ಣೆ ರೇವಣಸಿದ್ದಪ್ಪ, ಖಜಾಂಚಿ ಸುರೇಶ್ ಚಂದಪೂರ್, ಗುತ್ಯಪ್ಪ, ನಿರ್ದೇಶಕ ಎಂ. ಚಿದಾನಂದ ಕಂಚಿಕೇರಿ, ಪರಮೇಶ್ವರಪ್ಪ ದಾವಣಗೆರೆ ಶಿವಾನಂದಪ್ಪ, ಹಾವನೂರು ಈರಣ್ಣ, ಸುರೇಶ್ ಹಣಿಗಿ ,ರಾಘು ಚೌಗಲೆ, ಮಜ್ಜಿಗೆ ಚಂದ್ರಪ್ಪ, ಸಿಂಗಾಡಿ ಸಿದ್ದಪ್ಪ, ಹರಪನಹಳ್ಳಿ ಬಸವರಾಜ್, ಅರ್ಚಕರು ನಾಗರಾಜ್, ಶೇಖಪ್ಪ ಕಣದಾಳ ಕರಿಬಸಪ್ಪ ಕಂಚಿಕೇರಿ, ಬೆಣ್ಣೆ ಸಿದ್ದೇಶ್, ಎಂ. ಸಾಗರ್, ಬಣಕಾರ್ ಮಹಾಂತೇಶ್, ರವಿಕುಮಾರ್ ಮಡಿವಾಳ, ಹಾವನೂರು ಶಂಭು, ಡಿಶ್ ಸ್ವಾಮಿ ಶಂಭುಲಿಂಗಯ್ಯ ರುದ್ರೇಶ್, ಸದಾಶಿವಯ್ಯ, ಮುರುಗೇಶ್, ಹುಲಿಕಟ್ಟಿ ಉಮೇಶ್, ಗಿರೀಶ್, ಕೆ.ಬಿ. ಚಂದ್ರಶೇಖರ್, ಹಾಲೇಶ್ ನಾಗೇನಹಳ್ಳಿ, ಶಿವಾಜಿ, ನಿಕ್ಕಿಲ್ ಪೂಜಾರ್, ಬೆಣ್ಣೆ ಪುಟ್ಟ, ಹಾಲೇಶ್ ಹಣಿಗಿ, ರಾಘವೇಂದ್ರ, ನಾಗರಾಜ್ ಪೂಜಾರ್, ಶಿವಾಜಿ, ರಾಖೇಶ್ ಮಾಗಿ, ಬೆಣ್ಣೆ ಹನುಮಂತಪ್ಪ, ವಿಜಯಕುಮಾರ್, ಬಾಸಿಂಗದರ್ ಅಜಯ್, ವಿಜಯ್ ಇತರರು ಹಾಜರಿದ್ದರು.

**ಹದಿನಾಲ್ಕನೇ ವರ್ಷದ ಪುಣ್ಯಸ್ಮರಣೆ**



ದಿ|| ಶ್ರೀಮತಿ ಪಿ. ಶಶಿಕಲಾ
ಜನನ : 10.9.1957, ಮರಣ : 16.12.2009

*ನೀವು ನಮ್ಮನ್ನಗಲಿ ಇಂದಿಗೆ ಹದಿನಾಲ್ಕು ವರ್ಷಗಳಾದರೂ ಸಹ ನಿಮ್ಮ ನೆನಪು ನಮ್ಮಲ್ಲಿ ಸದಾ ಅಚ್ಚ ಹಸಿರಾಗಿದೆ. ನೀವು ಹೇಳಿ ಕೊಟ್ಟ ಆದರ್ಶಗಳು, ನಡೆ-ನುಡಿಗಳು, ನಯ-ವಿನಯಗಳೇ ನಮ್ಮ ಜೀವನದ ದಾರಿ ದೀಪವಾಗಿವೆ. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ದಯಪಾಲಿಸಲೆಂದು ಸದಾ ಸ್ಮರಿಸುವ.*

**ಪತಿ : ಪಿ. ಪ್ರಕಾಶ್, ಮಕ್ಕಳಾದ : ರವಿರಾಜ್, ಶೃತಿ ಮತ್ತು ರಾಕೇಶ್**
**ಸೊಸೆಯಂದಿರು : ಕಾವ್ಯಶ್ರೀ, ವಿಜಯಲಕ್ಷ್ಮಿ ಮೊಮ್ಮಕ್ಕಳು : ಖುಷಿ, ಆರ್ವಿ, ಅನರ್ವ್, ಬಂಧು-ಮಿತ್ರರು.**

**ಪೂಜಾರ ಶೇಖರಪ್ಪ ನಿಧನ**




ದಾವಣಗೆರೆ ಸಿಟಿ ಶಾಮನೂರು ಬೀರಲಿಂಗೇಶ್ವರ ದೇವಸ್ಥಾನ ಹತ್ತಿರದ ವಾಸಿ

**ಪೂಜಾರ ಶೇಖರಪ್ಪ** (47 ವರ್ಷ)

ಇವರು ದಿನಾಂಕ 15.12.2023ರ ಶುಕ್ರವಾರ ಸಂಜೆ 6.50 ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 16.12.2023ರ ಶನಿವಾರ ಮಧ್ಯಾಹ್ನ 12ಕ್ಕೆ ಗ್ಲಾಸ್ ಹೌಸ್ ಹತ್ತಿರದ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.


**ದುಃಖತಪ್ತ ಕುಟುಂಬ ವರ್ಗದವರು**
**ಮೊ : 9611480788, 99868 51807, 91649 16661**

## ಬಸಮ್ಮ ರಕ್ಕಸಗಿ ನಿಧನ




ದಾವಣಗೆರೆ ವಿಜಯ ನಗರ ಬಡಾವಣೆ, 2ನೇ ಮೇನ್, 4ನೇ ಕ್ರಾಸ್ ವಾಸಿ ಚಂದ್ರಪ್ಪ ರಕ್ಕಸಗಿ ಇವರ ತಾಯಿಯಾದ ಬಸಮ್ಮ ರಕ್ಕಸಗಿ (85) ಇವರು ದಿನಾಂಕ 15.12.2023ರ ಶುಕ್ರವಾರ ಸಂಜೆ 6.30 ಗಂಟೆಗೆ ನಿಧನರಾದರು.ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 16.12.2023ರ ಶನಿವಾರ ಮಧ್ಯಾಹ್ನ 2ಕ್ಕೆ ಗಾಂಧಿನಗರದ ಹಿಂದೂ ರುದ್ರಭೂಮಿಯಲ್ಲಿ ನೆರವೇರಲಿದೆ.

## ಶೇಖ್ ರಿಯಾಜ್ ಅಹಮ್ಮದ್ ನಿಧನ



ದಾವಣಗೆರೆ ಚಾಮರಾಜಪೇಟೆ ಮುಖ್ಯ ರಸ್ತೆ ವಾಸಿ ಅನ್ವರ್ ರೋಡ್‌ಲೈನ್ಸ್ ಮಾಲೀಕರಾದ ಶೇಖ್ ರಿಯಾಜ್ ಅಹಮ್ಮದ್ (54) ಇವರು ದಿನಾಂಕ 15.12.2023ರ ಶುಕ್ರವಾರ ಸಂಜೆ 5 ಗಂಟೆಗೆ ನಿಧನರಾದರು. ಪತ್ನಿ, ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 16.12.2023ರ ಶನಿವಾರ ಬೆಳಿಗ್ಗೆ 11.30ಕ್ಕೆ ಹಳೇ ಪಿ.ಬಿ. ರಸ್ತೆಯ ಖಬರಸ್ಥಾನದಲ್ಲಿ ನೆರವೇರಲಿದೆ.

## ಪೂಜಾರ್ ಮಂಜುನಾಥ್ ನಿಧನ



ದಾವಣಗೆರೆ ದಾವಲ್ ಪೇಟೆ, ಚೌಡೇಶ್ವರಿ ದೇವಸ್ಥಾನದ ಹತ್ತಿರದ ವಾಸಿ ತೊಗಟವೀರ ಕ್ಷತ್ರಿಯ ಸಮಾಜದ ಕುಲಬಾಂಧವರಾದ, ಸುಜಾತ ಅಡಿಕೆ ಚಿಟ್ ಮಾಲೀಕರಾದ ಪೂಜಾರ್ ಮಂಜುನಾಥ (69) ಇವರು ದಿನಾಂಕ : 15.12.2023ರ ಶುಕ್ರವಾರ ಮಧ್ಯಾಹ್ನ 2.30ಕ್ಕೆ ಗಂಟೆಗೆ ನಿಧನರಾದರು. ಪತ್ನಿ ನಾಲ್ಕು ಜನ ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆ ದಿನಾಂಕ : 16.12.2023ರ ಶನಿವಾರ ಮಧ್ಯಾಹ್ನ 12 ಗಂಟೆಗೆ ಪಿ.ಬಿ. ರಸ್ತೆಯಲ್ಲಿರುವ ವೈಕುಂಠಧಾಮದಲ್ಲಿ ನೆರವೇರಿಸಲಾಗುವುದು.

# ನಗರದಲ್ಲಿ ಇಂದು ಹೇಮರಡ್ಡಿ ಮಲ್ಲಮ್ಮ ಸಮಾಜದ ಬಾಲಕರ ವಿದ್ಯಾರ್ಥಿ ನಿಲಯದ ಉದ್ಘಾಟನೆ

ದಾವಣಗೆರೆ, ಡಿ. 15- ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಸಮಾಜದಿಂದ ನಗರದ ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಬಾಲಕರ ವಿದ್ಯಾರ್ಥಿ ನಿಲಯದ ಉದ್ಘಾಟನಾ ಸಮಾರಂಭವು ನಾಳೆ ದಿನಾಂಕ 16ರಂದು ನಡೆಯಲಿದೆ ಎಂದು ಸಮಾ ಜದ ಅಧ್ಯಕ್ಷ ಡಾ.ಕೊಟ್ರೇಶ್ ಬಿದ್ರಿ ತಿಳಿಸಿದ್ದಾರೆ.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಳಿಗ್ಗೆ 11 ಗಂಟೆಗೆ ನಡೆಯುವ ಉದ್ಘಾಟನಾ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಶ್ರೀಶೈಲ ಪೀಠದ ಜಗದ್ಗುರು ಡಾ.ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮೀಜಿ, ಶಿರಹಟ್ಟಿ ಭಾವೈಕ್ಯತಾ ಮಹಾ ಸಂಸ್ಥಾನ ಪೀಠದ ಜಗದ್ಗುರು ಫಕೀರ ದಿಂಗಾಲೇಶ್ವರ ಮಹಾಸ್ವಾಮೀಜಿ ವಹಿಸಲಿದ್ದಾರೆ ಎಂದು ಹೇಳಿದರು.

ಸರ್ವೋಚ್ಛ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿ ಶಿವರಾಜ ವಿ.ಪಾಟೀಲ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್, ಸಣ್ಣ ಕೈಗಾರಿಕಾ ಸಚಿವ ಶರಣಬಸಪ್ಪ ದರ್ಶನಾಪುರ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಹೆಚ್.ಕೆ. ಪಾಟೀಲ್, ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ, ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಶಾಮನೂರು ಶಿವಶಂಕರಪ್ಪ ಸೇರಿದಂತೆ ವಿವಿಧ ಸಚಿವರು, ಶಾಸಕರುಗಳು, ಅಧಿಕಾರಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಸಮಾಜದ ಉಪಾಧ್ಯಕ್ಷ ನೀಲಕಂಠಪ್ಪ, ಬಿ.ಜಿ. ಶಂಕರ್ ಪಾಟೀಲ್, ಖಜಾಂಚಿ ಜೆ.ಬಿ. ಲೋಕೇಶ್, ಕಾರ್ಯದರ್ಶಿ ಜಗದೀಶ್ ಇತರರು ಉಪಸ್ಥಿತರಿದ್ದರು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಸಾಮಾಜಿಕ ಸುವ್ಯವಸ್ಥೆಯ ಸಾಕಾರದಲ್ಲಿ ಗೃಹರಕ್ಷಕರ ಪಾತ್ರ ಗಣನೀಯ

## ಗೃಹರಕ್ಷಕರ ಜಿಲ್ಲಾ ಕ್ರೀಡಾಕೂಟ ಸಮಾರೋಪದಲ್ಲಿ ಪತ್ರಕರ್ತ ಹೆಚ್.ಬಿ.ಮಂಜುನಾಥ



ದಾವಣಗೆರೆ, ಡಿ.15- ದೇಶದ ಗಡಿ ರಕ್ಷಣೆಯಲ್ಲಿ ಸೈನಿಕರ ಪ್ರಾಮುಖ್ಯತೆ, ದೇಶದೊಳಗೆ ಕಾನೂನು, ಶಿಸ್ತು, ಶಾಂತಿ ಪಾಲನೆಯಲ್ಲಿ ಪೊಲೀಸರ ಪಾತ್ರ ಹೇಗೋ ಹಾಗೆಯೇ ಸಾಮಾಜಿಕ ಸುವ್ಯವಸ್ಥೆಯ ಸಾಕಾರದಲ್ಲಿ ಗೃಹರಕ್ಷಕರ ಸೇವೆಯೂ ಪೂರಕವಾಗಿದೆ ಎಂದು ಹಿರಿಯ ಪತ್ರಕರ್ತ ಹೆಚ್.ಬಿ.ಮಂಜುನಾಥ ಅಭಿಪ್ರಾಯಪಟ್ಟರು.

ನಗರದ ಜಿಲ್ಲಾ ಗೃಹರಕ್ಷಕ ದಳದ ಕಚೇರಿಯ ಆವರಣದಲ್ಲಿ ಇಂದು ಏರ್ಪಾಡಾಗಿದ್ದ ಗೃಹ ರಕ್ಷಕರ ಜಿಲ್ಲಾ ಮಟ್ಟದ ಕ್ರೀಡಾಕೂಟದ ಸಮಾರೋಪ ಹಾಗೂ ಬಹುಮಾನ ವಿತರಣಾ ಸಮಾರಂಭದ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಕ್ರೀಡೆ, ಸಾಹಿತ್ಯ, ಕಲೆ, ಸಂಗೀತ ಇವುಗಳಿಗೆ ದೇಶ ದೇಶಗಳ ನಡುವಿನ ವೈರತ್ವ ಮರೆಸಿ, ಬಾಂಧವ್ಯ ಬೆಸೆಯುವ ಸಾಮರ್ಥ್ಯವಿದೆ. ಕ್ರೀಡಾಕೂಟಗಳಲ್ಲಿ ಭಾಗವಹಿಸುವುದರಿಂದ ದೈಹಿಕ ಸಾಮರ್ಥ್ಯದ ಪ್ರಕಟಣೆಯೊಂದಿಗೆ ಮಾನಸಿಕ ಸ್ವಾಸ್ಥ್ಯವೂ ಲಭ್ಯವಾಗುತ್ತದೆ ಎಂದರಲ್ಲದೇ 1940 ರಲ್ಲಿ ಇಂಗ್ಲೆಂಡ್ ಮತ್ತು ಜರ್ಮನಿ ನಡುವೆ ಸಮರ ನಡೆಯುತ್ತಿದ್ದಾಗ ಬ್ರಿಟನ್ ಸೈನ್ಯದ ಸಹಕಾರಕ್ಕೆ ಸ್ವಯಂ ಪ್ರೇರಣೆಯಿಂದ ಸಾರ್ವಜನಿಕರು ಬರುವಂತೆ ಸೇನೆಯ ಕಾರ್ಯದರ್ಶಿ ಆಂಥೋನಿ ಈಡನ್ ಕರೆ ಕೊಟ್ಟಿದ್ದು, 'ಲೋಕಲ್ ಡಿಫೆನ್ಸ್ ವಾಲೆಂಟಿಯರ್ಸ್' ಹುಟ್ಟಿಗೆ ಕಾರಣವಾಗಿದ್ದು, ಮುಂದೆ ಇದೇ 'ಹೋಂ ಗಾರ್ಡ್' ಎಂಬ ಹೆಸರನ್ನು ಪಡೆದದ್ದು, ನಮ್ಮ ದೇಶದಲ್ಲೂ ರೂಢಿಗೆ ಬಂದದ್ದು ಪ್ರಸ್ತುತ ನಮ್ಮ ದೇಶದಲ್ಲಿ ಸುಮಾರು 5,74,000 ಹೋಮ್ ಗಾರ್ಡ್‌ಗಳು ಕಾರ್ಯನಿರ್ವಹಿಸುತ್ತಿದ್ದು, 1962ರ ಹೋಮ್ ಗಾರ್ಡ್ ಕಾಯ್ದೆ 35ರಂತೆ ನಮ್ಮ ರಾಜ್ಯದಲ್ಲೂ ಸುಮಾರು 420 ಘಟಕಗಳಲ್ಲಿ ಗೃಹರಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ.

ಪ್ರಕೃತಿ ವಿಕೋಪ, ಸಾಂಕ್ರಾಮಿಕ ರೋಗ, ಬೃಹತ್ ಸಭೆ ಸಮಾವೇಶ, ಉತ್ಸವ ಜಾತ್ರೆಗಳು ಮುಂತಾದ ಸಂದರ್ಭಗಳಲ್ಲೆಲ್ಲಾ ಪೊಲೀಸರ ಜೊತೆಗೆ ಸಹಕಾರಿಯಾಗಿ ಕಾರ್ಯನಿರ್ವಹಿಸುವ ಗೃಹ ರಕ್ಷಕರು, ಅಭಿನಂದನಾರ್ಹರು ಎಂದು ಮಂಜುನಾಥ್ ಹೇಳಿದರು.

ಅಧ್ಯಕ್ಷ ಸ್ಥಾನದಿಂದ ಮಾತನಾಡಿದ ಜಿಲ್ಲಾ ಗೃಹರಕ್ಷಕ ದಳದ ಕಮಾಂಡೆಂಟ್ ಡಾ. ಎಸ್.ಹೆಚ್.ಸುಜಿತ್ ಕುಮಾರ್, ಉತ್ಸವ, ಜಾತ್ರೆ ಹಬ್ಬಗಳಲ್ಲಿ ಸಾರ್ವಜನಿಕರು ಸಂಭ್ರಮಿಸುವಾಗಲೂ ಶಾಂತಿ ಸುವ್ಯವಸ್ಥೆಯ ಕಾಪಾಡುವಿಕೆಯಲ್ಲಿ ತೊಡಗಿಕೊಳ್ಳುವ ಗೃಹರಕ್ಷಕ ದಳದವರು, ತ್ಯಾಗ ಮತ್ತು ಸೇವಾ ಮನೋಭಾವದವರು ಎಂದರಲ್ಲದೇ ಜಿಲ್ಲೆಯ ಕ್ರೀಡಾಕೂಟದಲ್ಲಿ ವಿಜಯಿಗಳಾದವರು ರಾಜ್ಯಮಟ್ಟದಲ್ಲೂ ಜಯಶೀಲರಾಗಲೆಂದು ಹಾರೈಸಿದರು.

ಕಾರ್ಯಕ್ರಮವನ್ನು ಅಂಬರೀಶ್ ನಿರೂಪಿಸಿದರು. ಆಶಾ ಪ್ರಾರ್ಥಿಸಿದರು. ಶೋಭಾ ಸ್ವಾಗತಿಸಿದರು. ಸರಸ್ವತಿ, ಮನ್ಸೂರ್ ಅಹಮದ್, ತಿಪ್ಪೇಸ್ವಾಮಿ ಮುಂತಾದವರು ಉಪಸ್ಥಿತರಿದ್ದರು. ವಿಜಯಲಕ್ಷ್ಮಿ ವಂದಿಸಿದರು.

# ಬಸವ ಪುತ್ಥಳಿ ನಿರ್ಮಾಣ ಯೋಜನೆಯಲ್ಲಿ ಹಣ ದುರುಪಯೋಗ ಆಗಿಲ್ಲ : ಬಸವಪ್ರಭು ಶ್ರೀ ಸ್ಪಷ್ಟನೆ



ಚಿತ್ರದುರ್ಗ, ಡಿ. 15 - ಐತಿಹಾಸಿಕ ನಗರ ಚಿತ್ರದುರ್ಗ ಜಿಲ್ಲೆಯನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸುವಂತಾಗಲೆಂಬ ಮಹತ್ವಾಕಾಂಕ್ಷೆಯೊಂದಿಗೆ ಶ್ರೀ ಮುರುಘಾಮಠದಿಂದ ಅನುಷ್ಠಾನಗೊಳ್ಳುತ್ತಿರುವ ಬಸವ ಪುತ್ಥಳಿ ನಿರ್ಮಾಣ ಯೋಜನೆಯಲ್ಲಿ ಯಾವುದೇ ಹಣದ ದುರುಪಯೋಗ ಆಗಿರುವುದಿಲ್ಲ ಎಂದು ಶ್ರೀ ಬಸವಪ್ರಭು ಸ್ವಾಮಿಗಳು ಸ್ಪಷ್ಟಪಡಿಸಿದರು.

ಶ್ರೀಮಠದಲ್ಲಿ ಶುಕ್ರವಾರ ಕರೆಯಲಾಗಿದ್ದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಶ್ರೀಗಳು, ಚಿತ್ರದುರ್ಗ ಜಿಲ್ಲೆಯ ಅಭಿವೃದ್ಧಿಗಾಗಿ ಮುರುಘಾ ಶರಣರು 220 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಈ ಯೋಜನೆಗೆ ಚಾಲನೆ ನೀಡಿದ್ದಾರೆ. ಐತಿಹಾಸಿಕ ಚಿತ್ರದುರ್ಗ ಅಂತರರಾಷ್ಟ್ರೀಯ ಪ್ರವಾಸಿ ತಾಣಗಳಲ್ಲೊಂದಾಗಬೇಕು. ಅದರೊಟ್ಟಿಗೆ ಸಾವಿರಾರು ಉದ್ಯೋಗಗಳನ್ನು ಸೃಷ್ಟಿಸಬೇಕೆಂಬುದು ಶ್ರೀಗಳವರ ಆಶಯವಾಗಿದೆ. ಆದರೆ ಹಿರಿಯ ರಾಜಕಾರಣಿಯೊಬ್ಬರು ಜಿಲ್ಲಾಧಿಕಾರಿಗಳಿಗೆ ದೂರು ನೀಡಿದ್ದಾರೆ. ಹಾಗೆಯೇ ಜಿಲ್ಲಾಡಳಿತ ಐವರ ಸಮಿತಿ ರಚಿಸಿದೆ. ತಪಾಸಣೆಗೆ ಬರುವ ಅಧಿಕಾರಿಗಳಿಗೆ ಸಂಪೂರ್ಣ ಸಹಕಾರ ನೀಡಲಾಗುವುದು. ಕಳೆದ ಒಂದು ವರ್ಷದಿಂದ ಕಾರಣಾಂತರಗಳಿಂದ ಪುತ್ಥಳಿ ಕಾಮಗಾರಿ ನಿಂತಿದ್ದು, ಈಗ ಮತ್ತೆ ಚಾಲನೆ ನೀಡಲಾಗುವುದು ಎಂದು ಮಾಹಿತಿ ನೀಡಿದರು.

ಕೆ.ಸಿ. ನಾಗರಾಜ್, ಜಿತೇಂದ್ರ ಎನ್.ಹುಲಿಕುಂಟೆ ಗೋಷ್ಠಿಯಲ್ಲಿದ್ದರು.

# ಸಾಲದ ಬಡ್ಡಿ, ಚಕ್ರಬಡ್ಡಿ ಮನ್ನಾ

(1ನೇ ಪುಟದಿಂದ) ಆದರೆ, ಇಂದು ನಾವು ಭರವಸೆ ನೀಡದಿದ್ದರೂ ರೈತರಿಗೆ ಸಣ್ಣ ಪ್ರಮಾಣದಲ್ಲಿ ನೆರವಿಗೆ ಬಂದಿದ್ದೇವೆ, ಇದನ್ನು ಸದುಪಯೋಗ ಪಡಿಸಿಕೊಳ್ಳಿ ಎಂದರು.

ಉತ್ತರ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ಅಷ್ಟಸೂತ್ರಗಳನ್ನು ಘೋಷಿಸಿದ್ದು, ನಮ್ಮ ಸರ್ಕಾರ ಯಾವ ಪ್ರದೇಶವನ್ನೂ ತಾರತಮ್ಯದಿಂದ ನೋಡುವ ಪ್ರಶ್ನೆಯೇ ಇಲ್ಲ ಎಂದು ಸ್ಪಷ್ಟಪಡಿಸಿದರು.

ಡಿ.ಎಂ.ನಂಜುಂಡಪ್ಪ ವರದಿಯ ಅನುಷ್ಠಾನ ಹಾಗೂ ಅದರ ಫಲಶೃತಿಯನ್ನು ಅಧ್ಯಯನ ಮಾಡಲು ನುರಿತ ಅರ್ಥಶಾಸ್ತ್ರಜ್ಞರೊಬ್ಬರ ಅಧ್ಯಕ್ಷತೆಯಲ್ಲಿ ಹೈಪವರ್ ಕಮಿಟಿಯನ್ನು ರಚಿಸಲಾಗುವುದು ಎಂದರು.

ವರದಿಯನ್ನಾಧರಿಸಿ ಉತ್ತರ ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಮೂಲಕ ಇದುವರೆಗೆ 61,330 ಕೋಟಿ ರೂ. ಅನುದಾನ ಒದಗಿಸಿದೆ. ಸುಮಾರು 42,000 ಕೋಟಿ ರೂ. ಖರ್ಚು ಮಾಡಿದೆ. ನಂಜುಂಡಪ್ಪನವರ ವರದಿಯನ್ನಾಧರಿಸಿ ನೀಡಲಾಗುವ ವಿಶೇಷ ಅಭಿವೃದ್ಧಿ ಯೋಜನೆಯಡಿಯೇ 32,433.43 ಕೋಟಿ ರೂ. ಖರ್ಚು ಮಾಡಲಾಗಿದೆ ಎಂದು ಹೇಳಿದರು.

ಇದರ ಜೊತೆಯಲ್ಲಿ ಬಯಲು ಸೀಮೆ ಅಭಿವೃದ್ಧಿ ಮಂಡಳಿಯಿಂದಲೂ ಅನುದಾನಗಳನ್ನು ಒದಗಿಸಲಾಗಿದೆ. ಇಷ್ಟೆಲ್ಲಾ ಮಾಡಿದರೂ ಮಾನವ ಅಭಿವೃದ್ಧಿ ಸೂಚ್ಯಂಕವು ನಿರೀಕ್ಷಿತ ಮಟ್ಟದಲ್ಲಿ ಸುಧಾರಿಸುತ್ತಿಲ್ಲ.

ಶಿಕ್ಷಣ, ಆರೋಗ್ಯ, ಆದಾಯ ಗಳಿಕೆ ಮುಂತಾದವುಗಳಲ್ಲಿ ಹಿನ್ನಡೆಯನ್ನು ಈ ಜಿಲ್ಲೆಗಳು ಅನುಭವಿಸುತ್ತಿವೆ. ವಿಶೇಷವಾಗಿ ನಂಜುಂಡಪ್ಪನವರ ವರದಿಯ ಅನುಷ್ಠಾನ ಹಾಗೂ ಅದರ ಫಲಶೃತಿ ಅಧ್ಯಯನ ಮಾಡಲು ಖ್ಯಾತ ಅರ್ಥಶಾಸ್ತ್ರಜ್ಞರೊಬ್ಬರ ಅಧ್ಯಕ್ಷತೆಯಲ್ಲಿ ಉನ್ನತ ಹಂತದ ಸಮಿತಿಯನ್ನು ರಚಿಸಲಾಗುವುದು ಎಂದರು.

ಉತ್ತರ ಕರ್ನಾಟಕದಲ್ಲಿ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸುವ ಮೂಲಕ ಆರ್ಥಿಕತೆಗೆ ಉತ್ತೇಜನ ನೀಡಲು ಹಾಗೂ ಸ್ಥಳೀಯರಿಗೆ ಉದ್ಯೋಗ ಒದಗಿಸುವ ಸಲುವಾಗಿ ಬೆಳಗಾವಿ ಸಮೀಪ ಸುಮಾರು 2,000 ಎಕರೆ ಪ್ರದೇಶದಲ್ಲಿ ಹೊಸ ಕೈಗಾರಿಕಾ ಪ್ರದೇಶ, 500 ಎಕರೆ ಪ್ರದೇಶದಲ್ಲಿ ಫೌಂಡ್ರಿ ಕ್ಲಸ್ಟರ್ ಅನ್ನು ಸ್ಥಾಪಿಸಲಾಗುವುದು ಹಾಗೂ ಜಿಲ್ಲೆಯಲ್ಲಿ ಏರೋಸ್ಪೇಸ್ ಆಧಾರಿತ ಕೈಗಾರಿಕೆಗಳ ಬೆಳವಣಿಗೆಗೆ ವಿಶೇಷ ಒತ್ತು ನೀಡಲಾಗುವುದು ಎಂದೂ ಮುಖ್ಯಮಂತ್ರಿ ಹೇಳಿದರು.

ಧಾರವಾಡ ಜಿಲ್ಲೆಯಲ್ಲಿ ಕೈಗಾರಿಕಾ ಕ್ಲಸ್ಟರ್ ಸ್ಥಾಪಿಸಲಾಗುತ್ತಿದ್ದು, ಈಗಾಗಲೇ 19 ಘಟಕಗಳು 1255 ಕೋಟಿ ರೂ. ಬಂಡವಾಳ ಹೂಡಿಕೆ ಮಾಡುತ್ತಿದ್ದು, ಸುಮಾರು 2,450 ಜನರಿಗೆ ಉದ್ಯೋಗ ದೊರೆಯುವ ನಿರೀಕ್ಷೆ ಇದೆ. ಧಾರವಾಡದ ಸಮೀಪ ಸುಮಾರು 3,000 ಎಕರೆ ಪ್ರದೇಶದಲ್ಲಿ ಹೊಸ ಕೈಗಾರಿಕಾ ಪ್ರದೇಶ ಸ್ಥಾಪಿಸಲಾಗುತ್ತದೆ ಎಂದು ಸಿದ್ದರಾಮಯ್ಯ ತಿಳಿಸಿದರು.

ರಾಯಚೂರಿನಲ್ಲಿ ಹತ್ತಿ ಉತ್ಪಾದನೆಯು ಹೆಚ್ಚಿರುವುದರಿಂದ ಈ ಜಿಲ್ಲೆಯಲ್ಲಿ ಆರ್ಥಿಕ ಅಭಿವೃದ್ಧಿ ಹಾಗೂ ಸ್ಥಳೀಯರಿಗೆ ಉದ್ಯೋಗಾವಕಾಶ ಕಲ್ಪಿಸುವ ದೃಷ್ಟಿಯಿಂದ ಹತ್ತಿ ಆಧಾರಿತ ಕೈಗಾರಿಕೆಗಳ ಸ್ಥಾಪನೆಗೆ ವಿಶೇಷ ಒತ್ತು ನೀಡಲಾಗುವುದು.

ವಿಜಯಪುರದಲ್ಲಿ ಉತ್ಪಾದನಾ ಕ್ಲಸ್ಟರ್ ಅನ್ನು ಅಂದಾಜು 1,500 ಎಕರೆ ಪ್ರದೇಶದಲ್ಲಿ ಸ್ಥಾಪಿಸಲಾಗುವುದು.

ಉತ್ತರ ಕರ್ನಾಟಕವು ಸಮೃದ್ಧ ಪ್ರವಾಸೋದ್ಯ ಮಗಳ ತಾಣವಾಗಿದೆ, ಐತಿಹಾಸಿಕ ಮಹತ್ವವಿರುವ ಈ ತಾಣಗಳು ಅಂತರ ರಾಷ್ಟ್ರೀಯವಾಗಿಯೂ ಮಹತ್ವ ಪಡೆದಿವೆ. ಇದಕ್ಕೆ ಸಾಕಷ್ಟು ಮಹತ್ವ ನೀಡದೆ ಹಿನ್ನಡೆಯನ್ನು ಅನುಭವಿಸುತ್ತಿದೆ.

ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ ಪ್ರವಾಸೋದ್ಯಮವನ್ನು ಅಭಿವೃದ್ಧಿ ಮಾಡಲು ಸಮಗ್ರ ಕ್ರಿಯಾಯೋಜನೆ ರೂಪಿಸಿ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಕ್ರಮ ವಹಿಸುತ್ತೇವೆ ಎಂದರು.

# ಗಮನ ಸೆಳೆದ ಶಾಸಕ

(1ನೇ ಪುಟದಿಂದ) ಉಂಟಾಗಿದ್ದು, ಸರ್ಕಾರ ತಕ್ಷಣ ಸ್ಪಂದಿಸಬೇಕು ಎಂದು ಶಾಸಕರು ವಿಧಾನಸಭೆಯಲ್ಲಿ ಪ್ರಸ್ತಾಪಿಸಿದರು.

ಶಾಸಕರ ಪ್ರಸ್ತಾವನೆಗೆ ಉತ್ತರಿಸಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ತಾಲ್ಲೂಕು ಕೇಂದ್ರದ ಆಸ್ಪತ್ರೆಗಳ ಅಭಿವೃದ್ಧಿಗೆ ಸರ್ಕಾರ ಮುಂದಾಗಿದ್ದು, ಜಗಳೂರು ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ಮೂಲ ಸೌಕರ್ಯ ಅಭಿವೃದ್ಧಿಗಾಗಿ 3.60 ಕೋಟಿ ರೂಪಾಯಿಗಳ ಕ್ರಿಯೆ ಯೋಜನೆ ಸಿದ್ಧವಾಗಿದ್ದು ಅನುದಾನ ಮಂಜೂರು ಮಾಡುವ ಮೂಲಕ ಆಸ್ಪತ್ರೆಯ ಸಮಗ್ರ ಅಭಿವೃದ್ಧಿಗೆ ಸರ್ಕಾರ ಕ್ರಮ ಕೈಗೊಳ್ಳಲಿದೆ ಎಂದು ಉತ್ತರಿಸಿದರು.

# ನ್ಯಾಯಾಂಗ ನಿಂದನೆ: ನಿವೃತ್ತ ಐಪಿಎಸ್ ಅಧಿಕಾರಿಗೆ ಶಿಕ್ಷೆ

ಚೆನ್ನೈ, ಡಿ. 15 – ಭಾರತೀಯ ಕ್ರಿಕೆಟ್ ತಂಡದ ಮಾಜಿ ನಾಯಕ ಮಹೇಂದ್ರ ಸಿಂಗ್ ಧೋನಿ ದಾಖಲಿಸಿದ್ದ ನ್ಯಾಯಾಂಗ ನಿಂದನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಐ.ಪಿ.ಎಸ್. ನಿವೃತ್ತ ಅಧಿಕಾರಿ ಜಿ. ಸಂಪತ್ ಕುಮಾರ್ ಅವರಿಗೆ ಮದ್ರಾಸ್ ಹೈಕೋರ್ಟ್ ಹದಿನೈದು ದಿನಗಳ ಸರಳ ಸೆರೆವಾಸದ ಶಿಕ್ಷೆ ವಿಧಿಸಿದೆ.

ನ್ಯಾಯಮೂರ್ತಿಗಳಾದ ಎಸ್. ಎಸ್. ಸುಂದರ್ ಹಾಗೂ ಸುಂದರ್ ಮೋಹನ್ ಅವರನ್ನು ಒಳಗೊಂಡ ಪೀಠ ಈ ಆದೇಶ ಹೊರಡಿಸಿದೆ.

ಧೋನಿ ಐ.ಪಿ.ಎಲ್.ನಲ್ಲಿ ಬೆಟ್ಟಿಂಗ್ ಹಗರಣದಲ್ಲಿ ಸಿಲುಕಿರುವುದಾಗಿ ಸಂಪತ್ ಆರೋಪಿಸಿದ್ದರು. ನಂತರ ಸುಪ್ರೀಂ ಕೋರ್ಟ್ ಹಾಗೂ ನ್ಯಾಯಾಂಗದ ವಿರುದ್ಧ ಆರೋಪಗಳನ್ನೂ ಮಾಡಿದ್ದರು. ಈ ಬಗ್ಗೆ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲಾಗಿತ್ತು.

# ವಿನಯ ಮಾರ್ಗ ಟ್ರಸ್ಟ್‌ನಿಂದ ನಾಡಿದ್ದು ಬೃಹತ್ ಪಾದಯಾತ್ರೆ, ಗ್ರಾಮ ವಾಸ್ತವ್ಯ



ದಾವಣಗೆರೆ, ಡಿ. 15- ವಿನಯ ಮಾರ್ಗ ಟ್ರಸ್ಟ್ ವತಿಯಿಂದ ಇದೇ ದಿನಾಂಕ 18 ರಿಂದ ಜನವರಿ 12 ರವರೆಗೆ ದಾವಣಗೆರೆ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮಗಳಲ್ಲಿ 'ವಿನಯ ನಡಿಗೆ, ಹಳ್ಳಿಯ ಕಡೆಗೆ' ಬೃಹತ್ ಪಾದಯಾತ್ರೆ ಹಾಗೂ ಗ್ರಾಮ ವಾಸ್ತವ್ಯ ಕಾರ್ಯಕ್ರಮವನ್ನು ಹಮ್ಮಿಕ್ಕೊಳ್ಳಲಾಗಿದೆ ಎಂದು ಇನ್‌ಸೈಟ್ಸ್ ಐಎಎಸ್ ಸಂಸ್ಥೆಯ ಸಂಸ್ಥಾಪಕ ನಿರ್ದೇಶಕ ಜಿ.ಬಿ. ವಿನಯ್ ಕುಮಾರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ದಾವಣಗೆರೆ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಎಂಟು ವಿಧಾನಸಭಾ ಕ್ಷೇತ್ರಗಳ ಹಳ್ಳಿಗಳಲ್ಲಿ ಪಾದಯಾತ್ರೆ ಮತ್ತು ಆಯ್ದ ಹಳ್ಳಿಗಳಲ್ಲಿ ಗ್ರಾಮ ವಾಸ್ತವ್ಯ ಮಾಡಲಾಗುವುದು ಎಂದರು.

ಜಗಳೂರು ವಿಧಾನಸಭಾ ಕ್ಷೇತ್ರದ ಗಡಿಭಾಗದ 'ಚಿಕ್ಕ ಉಜ್ಜಯಿನಿ' ಗ್ರಾಮದಿಂದ ಪಾದಯಾತ್ರೆಗೆ ಚಾಲನೆ ನೀಡಲಾಗುವುದು. 25 ದಿನಗಳ ಬಳಿಕ ದಾವಣಗೆರೆ ತಾಲ್ಲೂಕು ಹದಡಿ ಗ್ರಾಮದಲ್ಲಿ ಮುಕ್ತಾಯಗೊಳ್ಳಲಿದೆ. ಪ್ರತಿ ವಿಧಾನಸಭಾ ಕ್ಷೇತ್ರದ 20 ರಿಂದ 30 ಹಳ್ಳಿಗಳಲ್ಲಿ ಪಾದಯಾತ್ರೆ ಸಂಚರಿಸಲಿದೆ ಎಂದು ಹೇಳಿದರು. ಜನಪ್ರತಿನಿಧಿಗಳು, ಮುಖಂಡರು, ಯುವಕರು, ಮಹಿಳೆಯರು, ವಿವಿಧ ಸಂಘಟನೆಗಳ ಪದಾಧಿಕಾರಿಗಳು, ಅಭಿಮಾನಿಗಳು ಭಾಗವಹಿಸಲಿದ್ದಾರೆ.

ಪಾದಯಾತ್ರೆ ಮುಕ್ತಾಯವಾಗುವವರೆಗೂ ನಿತ್ಯ ರಾತ್ರಿ ವಾಸ್ತವ್ಯ ಮಾಡುವ ಹಳ್ಳಿಗಳಲ್ಲಿ ಬಹಿರಂಗ ಸಭೆ ನಡೆಸುವ ಮೂಲಕ ಗ್ರಾಮೀಣ ಮೂಲಭೂತ ಸಮಸ್ಯೆಗಳು ಮತ್ತು ಕ್ಷೇತ್ರದ ಅಭಿವೃದ್ಧಿ ಬಗ್ಗೆ ಸಮಗ್ರ ಸಮಾಲೋಚನೆ ನಡೆಸಲಾಗುವುದು ಎಂದರು.

ಬರುವ ದಿನಗಳಲ್ಲಿ 'ಮಾದರಿ ಸಂಸದ' ಎಂಬ ವಿಚಾರ ಕುರಿತು ಪ್ರಬಂಧ ಸ್ಪರ್ಧೆ ಏರ್ಪಡಿಸುವ ಯೋಚನೆ ಇದೆ. ದೊಡ್ಡ ಮೊತ್ತದ ನಗದು ಬಹುಮಾನ ನೀಡುವ ಉದ್ದೇಶ ಸಹ ಇದೆ ಎಂದು ತಿಳಿಸಿದರು.

ಜಿಲ್ಲೆಯಲ್ಲಿನ ಕಾಂಗ್ರೆಸ್ ಪಕ್ಷದ ಮುಖಂಡರು, ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಮೂಲಕ ಕ್ಷೇತ್ರಗಳಲ್ಲಿ ಸಂಚರಿಸುವ ಕೆಲಸವನ್ನು ಮಾಡುತ್ತಿದ್ದೇನೆ. ಕ್ಷೇತ್ರ ಸುತ್ತಲು ವರಿಷ್ಠರು ಸೂಚಿಸಿದ್ದು, ಸಮೀಕ್ಷೆಯಲ್ಲಿ ನನ್ನ ಹೆಸರು ಮುಂಚೂಣಿಗೆ ಬಂದರೆ, ಟಿಕೆಟ್ ನೀಡುವುದಾಗಿ ಹೇಳಿದ್ದಾರೆಂದು ವಿಶ್ವಾಸ ವ್ಯಕ್ತಪಡಿಸಿದರು.

ಪ್ರಾಥಮಿಕ ಸಮೀಕ್ಷಾ ವರದಿಯಲ್ಲಿ ಜಿಲ್ಲೆಯಿಂದ ಮೂವರು ಆಕಾಂಕ್ಷಿಗಳ ಹೆಸರುಗಳು ಇದ್ದು, ಅದರಲ್ಲಿ ನನ್ನ ಹೆಸರೂ ಸಹ ಇದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ವಿನಯ ಮಾರ್ಗ ಟ್ರಸ್ಟ್‌ನ ಮುಖಂಡರಾದ ಸುರೇಶ್, ಹಾಲೇಕಲ್ ಎಸ್.ಟಿ. ಅರವಿಂದ್, ಬಿ. ನಿಂಗರಾಜ್, ಎಸ್. ಶರತ್‌ಕುಮಾರ್, ಕಲ್ಲೇಶ್ ಮತ್ತಿತರರಿದ್ದರು.

# 'ವಿಷ್ಣು ಪುಣ್ಯಭೂಮಿ' ಬೆಂಗಳೂರಿನಲ್ಲಿಯೇ ಸ್ಥಾಪಿಸಬೇಕು



ದಾವಣಗೆರೆ, ಡಿ.15- ಸಾಹಸ ಸಿಂಹ ವಿಷ್ಣುವರ್ಧನ್ ಪುಣ್ಯಭೂಮಿಯನ್ನು ಬೆಂಗಳೂರಿನಲ್ಲಿಯೇ ಸ್ಥಾಪಿಸಬೇಕೆಂದು ಒತ್ತಾಯಿಸಿ ನಾಡಿದ್ದು ದಿನಾಂಕ 17 ರಂದು ಬೆಳಿಗ್ಗೆ 9 ರಿಂದ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಯಲಿರುವ ಬೃಹತ್ ಪ್ರತಿಭಟನೆಯಲ್ಲಿ ದಾವಣಗೆರೆ ಜಿಲ್ಲೆಯಿಂದಲೂ ಅಭಿಮಾನಿಗಳು ಭಾಗವಹಿಸಲಿದ್ದಾರೆಂದು ಡಾ. ವಿಷ್ಣುವರ್ಧನ್ ಅಭಿಮಾನಿಗಳ ಸಂಘದ ಪದಾಧಿಕಾರಿ ಕೊಂಡಜ್ಜಿ ರಾಜಶೇಖರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ವಿಷ್ಣುವರ್ಧನ್ ಅವರು ವಂಶವೃಕ್ಷ ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದ್ದು, ನಾಗರಹಾವು ಚಿತ್ರದಲ್ಲಿ ಪೂರ್ಣ ಪ್ರಮಾಣದ ನಾಯಕರಾಗಿ ಹೊರಹೊಮ್ಮಿದ್ದಾರೆ ಎಂದರು.

ರಾಜ್ಯ, ದೇಶ, ವಿದೇಶಗಳಲ್ಲೂ ವಿಷ್ಣು ಅಭಿಮಾನಿಗಳಿದ್ದಾರೆ. ಸಾಹಸ ಸಿಂಹ ಡಾ. ವಿಷ್ಣುವರ್ಧನ್ ಬೆಂಗಳೂರಿನಲ್ಲಿ ನಿಧನರಾದ ಹಿನ್ನೆಲೆಯಲ್ಲಿ ಅವರ 'ಪುಣ್ಯಭೂಮಿ' ನಮ್ಮ ಬೆಂಗಳೂರಿನಲ್ಲಿಯೇ ಆಗಬೇಕೆಂಬ ಹಲವಾರು ಅಭಿಮಾನಿಗಳು ಪ್ರತಿಭಟನೆ ನಡೆಸುತ್ತಿದ್ದಾರೆ.

ಈ ಪ್ರತಿಭಟನೆಗೆ ದಾವಣಗೆರೆ ಅಖಿಲ ಕರ್ನಾಟಕ ಡಾ. ವಿಷ್ಣುವರ್ಧನ್ ಸಂಘ, ಡಾ. ವಿಷ್ಣು ಸೇನೆ, ಡಾ. ರಾಜ್‌ಕುಮಾರ್ ಅಭಿಮಾನಿಗಳ ಸಂಘ, ಡಾ. ಶಿವರಾಜ್ ಕುಮಾರ್ ಅಭಿಮಾನಿಗಳ ಸಂಘ, ಪುನೀತ್ ಅಭಿಮಾನಿಗಳ ಸಂಘ, ಕ್ರೇಜಿಸ್ಟಾರ್ ರವಿಚಂದ್ರನ್ ಅಭಿಮಾನಿಗಳ ಸಂಘ, ಚಾಲೆಂಜಿಂಗ್ ಸ್ಟಾರ್ ದರ್ಶನ್ ಅಭಿಮಾನಿಗಳ ಸಂಘ, ರೆಬೆಲ್‌ಸ್ಟಾರ್ ಅಂಬರೀಶ್ ಅಭಿಮಾನಿಗಳ ಸಂಘ ಸೇರಿದಂತೆ, ವಿವಿಧ ಕನ್ನಡ ಪರ ಸಂಘಟನೆಗಳ ಅಧ್ಯಕ್ಷರು, ಪದಾಧಿಕಾರಿಗಳು, ಸದಸ್ಯರು, ಅಭಿಮಾನಿಗಳು ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದ್ದಾರೆ ಎಂದರು.

ವಿಷ್ಣು ಕೇವಲ ಕನ್ನಡ ಮಾತ್ರವಲ್ಲದೇ ತೆಲುಗು, ಹಿಂದಿ, ತಮಿಳು, ಮಲಯಾಳಂ ಸೇರಿದಂತೆ ಹಲವು ಭಾಷೆಗಳ ಚಿತ್ರಗಳಲ್ಲಿ ಅಭಿನಯಿಸಿ, ಎಲ್ಲರ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದಿದ್ದಾರೆ. ಕನ್ನಡ ನಾಡು, ನುಡಿ, ಭಾಷೆಗಾಗಿ ಎಲ್ಲ ಹಿರಿಯ ನಟರೊಂದಿಗೆ ಗೋಕಾಕ್ ವರದಿ ಜಾರಿಗೆ ಬರಲಿ ಎಂದು ಕನ್ನಡ ಚಳವಳಿಗಳಲ್ಲಿ ಭಾಗವಹಿಸಿ, ರಾಜ್ಯಾದ್ಯಂತ ಬೃಹತ್ ರ್‍ಯಾಲಿ ಮೂಲಕ ಹೋರಾಟ ಮಾಡುತ್ತಾ ಬಂದಿದ್ದರು ಎಂದು ಹೇಳಿದರು.

ಬೆಂಗಳೂರಿನ ಅಭಿಮಾನ್ ಸ್ಟುಡಿಯೋದಲ್ಲಿ ಡಾ. ವಿಷ್ಣುವರ್ಧನ್ ಪುಣ್ಯಭೂಮಿ ಇದ್ದು, ಕೆಲವರು ಸ್ಥಳಾಂತರ ಮಾಡಬೇಕೆಂದು ಹೋರಾಟ ನಡೆಸಿದರು. ಶ್ರೀಮತಿ ಭಾರತಿ ವಿಷ್ಣುವರ್ಧನ್ ಕೂಡ ಹೋರಾಟಕ್ಕೆ ವಿರೋಧ ವ್ಯಕ್ತಪಡಿಸಿದ್ದರು. ಇದರಿಂದ ಲಕ್ಷಾಂತರ ವಿಷ್ಣು ಅಭಿಮಾನಿಗಳ ಮನಸ್ಸಿಗೆ ನೋವಾಗಿದೆ ಎಂದರು.

ಈ ಹಿನ್ನೆಲೆಯಲ್ಲಿ ಡಾ. ವಿಷ್ಣುವರ್ಧನ್ ಅವರ ಪುಣ್ಯಭೂಮಿ ನಮ್ಮ ಕನ್ನಡ ನಾಡಿನ ಬೆಂಗಳೂರಿನಲ್ಲಿಯೇ ಆಗಬೇಕು. ಸರ್ಕಾರ ಈ ವಿಚಾರವನ್ನು ಬಗ್ಗೆ ಗಂಭೀರವಾಗಿ ಪರಿಗಣಿಸಿ, ಮುಂದೆ ಆಗಬಹುದಾದ ಕೆಲಸಗಳಿಗೆ ಸಹಾಯ ಮಾಡಬೇಕೆಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಎಂ.ಮನು, ಜಿ.ಹೆಚ್. ತಿಮ್ಮೇಶ್, ಯೋಗೀಶ್, ಚಂದ್ರು, ಸತೀಶ್, ವಿಜಯಕುಮಾರ್, ರಂಗನಾಥ್ ಮತ್ತಿತರರಿದ್ದರು.

# ಸದನದಲ್ಲಿ ಮುಂದುವರೆದ ಗದ್ದಲ, ನಡೆಯದ ಕಲಾಪ

ನವದೆಹಲಿ, ಡಿ. 15 – ಸಂಸತ್ತಿನ ಭದ್ರತೆ ಉಲ್ಲಂಘನೆಯಾದ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಷಾ ಹೇಳಿಕೆ ನೀಡಬೇಕು ಎಂದು ಒತ್ತಾಯಿಸಿ, ಸಂಸತ್ತಿನ ಉಭಯ ಸದನಗಳಲ್ಲಿ ಪ್ರತಿಪಕ್ಷಗಳು ಪ್ರತಿಭಟನೆ ನಡೆಸಿವೆ. ಇದರಿಂದಾಗಿ ಶುಕ್ರವಾರ ಯಾವುದೇ ಕಲಾಪ ನಡೆಸಲು ಸಾಧ್ಯವಾಗಲಿಲ್ಲ. ಲೋಕಸಭೆಯಲ್ಲಿ ಪ್ರತಿಪಕ್ಷಗಳ ಸದಸ್ಯರು ಆರಂಭದಿಂದಲೇ ಗದ್ದಲ ನಡೆಸಿದರು. ಮೊದಲು ಮಧ್ಯಾಹ್ನಕ್ಕೆ ಕಲಾಪ ಮುಂದೂಡಲಾಯಿತು. ನಂತರ ಕಲಾಪವನ್ನು ಮರು ದಿನಕ್ಕೆ ಮುಂದೂಡಲಾಗಿದೆ. ರಾಜ್ಯಸಭೆಯಲ್ಲೂ ಸಹ ಇದೇ ಪರಿಸ್ಥಿತಿ ಇತ್ತು.

# ಲೇಬರ್ ಕಾಲೋನಿಯಲ್ಲಿ ದೀಪೋತ್ಸವ



ದಾವಣಗೆರೆ, ಡಿ.15- ಶ್ರೀ ಸ್ವಾಮಿ ಅಯ್ಯಪ್ಪ ಶಬರಿಮಲೈ ಸೇವಾ ಸಮಿತಿ ವತಿಯಿಂದ ನಗರದ ಲೇಬರ್ ಕಾಲೋನಿಯಲ್ಲಿರುವ ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನದಲ್ಲಿ ಮೊನ್ನೆ ಗಣ ಹೋಮ, ಪೂರ್ಣಾಹುತಿ, ಬಾಳೆ ಮಂಟಪ ಸ್ಥಾಪನೆ ಮತ್ತು ದೀಪೋತ್ಸವದೊಂದಿಗೆ ಸ್ವಾಮಿಯ ಮೆರವಣಿಗೆ ಕಾರ್ಯಕ್ರಮಗಳು ಭಕ್ತಿಯಿಂದ ನೆರವೇರಿದವು. ನಂತರ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.

# ಸರ್ವ ಪಕ್ಷ ನಿಯೋಗಕ್ಕೆ ಸಿದ್ಧ

(1ನೇ ಪುಟದಿಂದ) ಸುಪ್ರೀಂಕೋರ್ಟ್ ಹೇಳಿದೆ. ಅದ ರಂತೆ ನಡೆದುಕೊಳ್ಳುತ್ತೇವೆ ಎಂದು ಹೇಳಿದರು. ಉತ್ತರ ಕನಾಟಕ ಅಭಿವೃದ್ಧಿಗೆ ನಡೆದ ಚರ್ಚೆಗೆ ಸಂಬಂಧಿಸಿದಂತೆ ಸುದೀರ್ಘ ಉತ್ತರ ನೀಡಿ ಮಾತನಾಡಿದ ಅವರು ಕೃಷ್ಣಾ, ಕಾವೇರಿ ಕೊಳ್ಳದ ನೀರಾವರಿ ಯೋಜನೆಗಳ ಅಭಿವೃದ್ಧಿ, ಬರಗಾಲಕ್ಕೆ ಪರಿಹಾರ ಕೇಳುವ ಸಂಬಂಧ ಪ್ರಧಾನಿ ನರೇಂದ್ರ ಮೋದಿ ಅವರ ಬಳಿಗೆ ನಿಯೋಗ ಕೊಂಡೊಯ್ಯಲು ಸರ್ಕಾರ ಸಿದ್ಧ ಎಂದರು. ನೀವು (ಬಿಜೆಪಿ) ಪ್ರಭಾವ ಬೀರಿ ಪ್ರಧಾನಿ ಅವರ ಸಮಯಾವಕಾಶ ಕೊಡಿಸಿ, ಅವರ ಮುಂದೆ ನಮ್ಮ ಸಂಕಷ್ಟಗಳನ್ನು ಹೇಳಿ, ಪರಿಹಾರ ಪಡೆದುಕೊಳ್ಳೋಣ ಎಂದರು.

ನೀರಾವರಿ ಕೃಷ್ಣಾ ಭಾಗ್ಯ ಜಲ ನಿಗಮ 3ನೇ ಹಂತದಲ್ಲಿ 130 ಟಿಎಂಸಿ ನೀರು ಬಳಸಬೇಕು ಎಂಬ ಆದೇಶವಿದ್ದರೂ, ಅಫಿಡೆವಿಟ್ ಹಾಕಿಲ್ಲ. 2ನೇ ಟ್ರಿಬ್ಯುನಲ್ ಬ್ರಿಜೇಶ್ ಕುಮಾರ್ ವರದಿ ಕೊಟ್ಟು 13 ವರ್ಷಗಳಾಯಿತು. 13 ವರ್ಷಗಳಿಂದ ಗೆಜೆಟ್ ಅಧಿಸೂಚನೆ ಆಗಿಲ್ಲ. ಇದು ಆಗದೇ ಆಲಮಟ್ಟಿ ಜಲಾಶಯದ ಎತ್ತರವನ್ನು ೩524 ಮೀಟರ್‌ಗೆ ಏರಿಸಲಾಗುವುದಿಲ್ಲ. ಈ ಬಗ್ಗೆ ಒತ್ತಾಯಿಸಲು ಸರ್ವಪಕ್ಷ ನಿಯೋಗ ಕರೆದೊಯ್ಯಲು ನಾವು ಸಿದ್ಧರಿದ್ದೇವೆ. ಆದರೆ ಪ್ರಧಾನಿಗಳು ಭೇಟಿಗೆ ಅವಕಾಶವನ್ನೇ ನೀಡುತ್ತಿಲ್ಲ ಎಂದು ಆಕ್ಷೇಪಿಸಿದರು.

ಮಹದಾಯಿ ಕುಡಿಯುವ ನೀರಿನ ಯೋಜನೆಗೆ ಅರಣ್ಯ ಮತ್ತು ಪರಿಸರದ ತೀರುವಳಿಯಾಗಬೇಕು. ಅವರು ಕೊಟ್ಟ ತಕ್ಷಣ ನಾವು ಕೆಲಸ ಪ್ರಾರಂಭ ಮಾಡುತ್ತೇವೆ. ಮಹದಾಯಿ, ಕೃಷ್ಣಾ ಮೇಲ್ದಂಡೆಗೂ ಸರ್ವಪಕ್ಷ ನಿಯೋಗ ಕರೆದೊಯ್ಯಲು ನಾವು ಸಿದ್ದರಿದ್ದೇವೆ ಎಂದರು.

# ರಾಣೇಬೆನ್ನೂರಿನಲ್ಲಿ ಇಂದು ಖನ್ನೂರ್ ವಿದ್ಯಾನಿಕೇತನ ಶಾಲೆ ವಾರ್ಷಿಕೋತ್ಸವ

ರಾಣೇಬೆನ್ನೂರಿನ ತಾಲ್ಲೂಕಿನ ಹುಣಸಿಕಟ್ಟೆ ರಸ್ತೆಯಲ್ಲಿರುವ ಖನ್ನೂರ ವಿದ್ಯಾನಿಕೇತನ ಶಾಲೆಯ ವಾರ್ಷಿಕೋತ್ಸವ 'ಖನ್ನೂರ ಕಲರವ-2023-24' ಕಾರ್ಯಕ್ರಮ ಇಂದು ಸಂಜೆ 4.30 ಕ್ಕೆ ನಡೆಯಲಿದೆ.

ಅಧ್ಯಕ್ಷತೆಯನ್ನು ಎಂ.ಎಂ. ಕನ್ನೂರ್, ಡಾ. ಪ್ರವೀಣ್ ಎಂ. ಖನ್ನೂರ್, ಶ್ರೀಮತಿ ಸುಲೋಚನ ಎಂ. ಖನ್ನೂರ್, ಡಾ. ಶೈಲಶ್ರೀ ಪಿ. ಖನ್ನೂರ್, ಕು. ಸಮೀರ ಜಿ. ಫೆರ್ನಾಂಡೀಸ್, ಕು. ದೀಪ ಬಣಕಾರ್ ವಹಿಸುವರು.

# ನಗರಕ್ಕೆ ನಾಳೆ 'ಭಗೀರಥ ಭಾರತ' ಜನಕಲ್ಯಾಣ ರಥಯಾತ್ರೆ

ದಾವಣಗೆರೆ, ಡಿ. 15- ಜಿಲ್ಲಾ ಭಗೀರಥ ಉಪ್ಪಾರ ಸಂಘದಿಂದ ಶ್ರೀ ಪುರುಷೋತ್ತಮಾನಂದ ಪುರಿ ಸ್ವಾಮೀಜಿಯವರ ಮಾರ್ಗದರ್ಶನದಲ್ಲಿ ನಾಡಿದ್ದು ದಿನಾಂಕ 17 ರ ಭಾನುವಾರ ಬೆಳಿಗ್ಗೆ 10 ಗಂಟೆಗೆ 'ಭಗೀರಥ ಭಾರತ' ಜನಕಲ್ಯಾಣ ರಥಯಾತ್ರೆಗೆ ಅದ್ದೂರಿಯಾಗಿ ಸ್ವಾಗತ ನೀಡಲಾಗುವುದು ಎಂದು ಸಂಘದ ಗೌರವಾಧ್ಯಕ್ಷ ತುರ್ಚಘಟ್ಟದ ಬಸವರಾಜಪ್ಪ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ದೊಡ್ಡಬಾತಿಯಿಂದ ಬೈಕ್ ರ್‍ಯಾಲಿ ಮೂಲಕ ರಥಯಾತ್ರೆಯನ್ನು ಬರಮಾಡಿಕೊಳ್ಳಲಾಗುವುದು. ನಂತರ ನಗರದ ಶ್ರೀ ಬೀರಲಿಂಗೇಶ್ವರ ದೇವಸ್ಥಾನದಿಂದ ಮೆರವಣಿಗೆ ಹೊರಡಲಿದ್ದು ಕುಂಭಮೇಳ, ಜಾನಪದ ಕಲಾತಂಡಗಳು ಮೆರವಣಿಗೆಗೆ ಮೆರಗು ನೀಡಲಿವೆ ಎಂದು ಹೇಳಿದರು.

ಗಾಂಧಿ ವೃತ್ತ, ಅಶೋಕ ರಸ್ತೆ, ಜಯದೇವ ವೃತ್ತದ ಮೂಲಕ ಶಿವಯೋಗಾಶ್ರಮದ ಆವರಣದಲ್ಲಿ ಮೆರವಣಿಗೆ ಮುಕ್ತಾಯಗೊಳ್ಳಲಿದ್ದು, ಇದೇ ವೇಳೆ ಬಹಿರಂಗ ಸಭೆ ನಡೆಸಲಾಗುವುದು ಎಂದರು.

ದೇಶದಲ್ಲಿ ಸುಮಾರು 11 ಕೋಟಿ ಉಪ್ಪಾರ ಜನಸಂಖ್ಯೆ ಇದ್ದು, ಆಯಾ ಪ್ರಾದೇಶಿಕ ಭಾಷೆಗಳಿಗೆ ಅನುಗುಣವಾಗಿ 'ಉಪ್ಪಾರರ' ನ್ನು ವಿವಿಧ ಹೆಸರಿನಿಂದ ಕರೆಯಲ್ಪಡುತ್ತಾರೆ. ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕ ಮತ್ತು ರಾಜಕೀಯವಾಗಿ 'ಉಪ್ಪಾರ' ಸಮಾಜವನ್ನು ಮುನ್ನೆಲೆಗೆ ತರುವ ಸದುದ್ದೇಶದಿಂದ ಈ ರಥಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದರು.

ರಥಯಾತ್ರೆ ಬಿಹಾರ್‌ನಿಂದ ಪ್ರಾರಂಭವಾಗಿ ದೆಹಲಿ, ಪಂಜಾಬ್, ಹರಿಯಾಣ, ಗುಜರಾತ್ ಹಾಗೂ ಮಹಾರಾಷ್ಟ್ರಗಳಲ್ಲಿ ಪ್ರವಾಸ ಮಾಡಿ, ಡಿ. 9 ರಂದು ಕರ್ನಾಟಕ ರಾಜ್ಯದ ಬೀದರ್ ಜಿಲ್ಲೆಗೆ ಆಗಮಿಸಿದ್ದು, ದಾವಣ ಗೆರೆ ಜಿಲ್ಲೆಯನ್ನು ನಾಳೆ ದಿನಾಂಕ 17 ರಂದು ಪ್ರವೇಶ ಮಾಡಲಿದೆ. ಡಾ. ಪುರುಷೋತ್ತಮಾನಂದ ಪುರಿ ಸ್ವಾಮೀಜಿಯವರ ನೇತೃತ್ವದಲ್ಲಿ ರಥಯಾತ್ರೆ ಯನ್ನು ಬರಮಾಡಿಕೊಳ್ಳಲಾಗುವುದು ಎಂದು ಮಾಹಿತಿ ನೀಡಿದರು.

ಇದೇ ವೇಳೆ ಶಾಸಕ ಪುಟ್ಟರಂಗಶೆಟ್ಟಿ ಮೊದಲ್ಗೊಂಡು ರಾಜ್ಯ ಉಪ್ಪಾರ ಸಂಘಗಳ ಪದಾಧಿಕಾರಿಗಳು, ಸದಸ್ಯರು, ಜಿಲ್ಲಾ ಪದಾಧಿಕಾರಿಗಳು, ಸದಸ್ಯರು, ಸಮಾಜ ಬಾಂಧವರು ಉಪಸ್ಥಿತರಿರುವರು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಹದಡಿ ರಮೇಶ್, ಹಾಲೇಶ್, ರಾಜಪ್ಪ, ಗಿರೀಶ್, ಲೋಕೇಶ್, ಎಂ.ಎನ್. ಮಂಜುನಾಥ್ ಉಪಸ್ಥಿತರಿದ್ದರು.


**ಗೌರವಾನ್ವಿತ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ದಾವಣಗೆರೆ.**

**ಅಮಲ್ಜಾರಿ ಅರ್ಜಿ ನಂ.245/2022**

ಡಿಕ್ರಿದಾರರು (D.Hr) ಶ್ರೀ ಗುರು ಚಿಟ್ ಫಂಡ್ಸ್ (ರಿ.) ಮಳಿಗೆ ನಂ.1, 2ನೇ ಮಹಡಿ, ಕುರುಬರ ಹಾಸ್ಟೆಲ್ ಕಾಂಪ್ಲೆಕ್ಸ್, ಹದಡಿ ರಸ್ತೆ, ಜಯದೇವ ಸರ್ಕಲ್ ಹತ್ತಿರ, ದಾವಣಗೆರೆ, ಇವರ ಪರವಾಗಿ ಪಾಲುದಾರರಾದ ಶ್ರೀ ಡಿ.ಎಂ.ಮಲ್ಲಿಕಾರ್ಜುನಸ್ವಾಮಿ ಬಿನ್ ಡಿ.ಎಂ. ನೀಲಕಂಠಯ್ಯ, ವಯಸ್ಸು 38 ವರ್ಷ - ವಿರುದ್ಧ-

ಡಿಕ್ರಿಋಣಿದಾರರು (J.Drs):- ನವೀನ್ ಎ.ಎಸ್. ಮತ್ತು ಇತರರು

ನೋಟಿಸ್‌ದಾರರು :- (ಡಿಕ್ರಿಋಣಿ ನಂ.1) 1. ಶ್ರೀ ನವೀನ್ ಎ.ಎಸ್. ಬಿನ್ ಶರಣಪ್ಪ, ವಯಸ್ಸು 32 ವರ್ಷ, ವ್ಯಾಪಾರಿ, #4665/72, 5ನೇ ಮುಖ್ಯರಸ್ತೆ, 14ನೇ ಕ್ರಾಸ್, ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.

**ಸಿ.ಪಿ.ಸಿ ಆದೇಶ 5 ನಿಯಮ 20 ರ ಅಡಿಯಲ್ಲಿ ತೀರ್ಪುಋಣಿದಾರಿ ನಂ.1 ವಿರುದ್ಧ ಡಿಕ್ರಿದಾರರು ನೀಡಲಾದ ಪತ್ರಿಕಾ ಪ್ರಕಟಣಾ ನೋಟಿಸ್**

ಮೇಲ್ಕಂಡ ಪ್ರಕರಣವನ್ನು ತೀರ್ಪು ಮತ್ತು ಡಿಕ್ರಿ ಆಧಾರದ ಮೇಲೆ ಡಿಕ್ರಿದಾರರು ಹಣ ವಸೂಲಾತಿ ಅಮಲ್ಜಾರಿಯನ್ನು ಕೋರಿ ಪ್ರಕರಣವನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ನೀವು ತೀರ್ಪುಋಣಿಯಾಗಿದ್ದು, ನ್ಯಾಯಾಲಯವು ನಿಮ್ಮ ವಿರುದ್ಧ ನ್ಯಾಯಾಲಯದಿಂದ ಸಮನ್ಸ್ ಹಾಗೂ ನೋಂದಾಯಿತ ಸಮನ್ಸ್ ಅನ್ನು ಅಂಚೆಯ ಮೂಲಕ ಕಳಿಸಿದರೂ ಸಹಾ ಅವು ನಿಮಗೆ ಜಾರಿಯಾಗಿರುವುದಿಲ್ಲ. ಆದ ಕಾರಣ ನಿಮ್ಮ ಹಾಜರಾತಿಗಾಗಿ ದಿನಾಂಕ:17.01.2024 ರಂದು ಬೆಳಿಗ್ಗೆ 11-00 ಗಂಟೆಗೆ ಮುದ್ದತ್ತು ನಿಗದಿಯಾಗಿದ್ದು, ಆ ದಿನ ನೀವು ಖುದ್ದಾಗಿಯಾಗಲೀ ಅಥವಾ ವಕೀಲರ ಮುಖಾಂತರವಾಗಲೀ ಪ್ರಕರಣದಲ್ಲಿ ಹಾಜರಿದ್ದು, ತಕರಾರು ಇದ್ದಲ್ಲಿ ಸಲ್ಲಿಸಬಹುದೆಂದು ಈ ಪತ್ರಿಕಾ ಪ್ರಕಟಣೆ ನೀಡಲಾಗಿದೆ. ತಪ್ಪಿದಲ್ಲಿ ನಿಮ್ಮ ವಿರುದ್ಧ ಏಕಪಕ್ಷೀಯ ತೀರ್ಮಾನ ತೆಗೆದುಕೊಳ್ಳಲಾಗುವುದು ತಿಳಿಯಿರಿ.

ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ ದಿನಾಂಕ: 12/12/2023 ರಂದು ಕೊಡಲ್ಪಟ್ಟಿದೆ.

ಡಿಕ್ರಿದಾರರ ಪರ ವಕೀಲರು
ಸಹಿ/- (ಎಸ್.ರುದ್ರಮುನಿ)
ಸ್ಥಳ: ದಾವಣಗೆರೆ. ದಿನಾಂಕ : 08/12/2023

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು, 2ನೇ ಹೆಚ್ಚುವರಿ ಸಿವಿಲ್
ನ್ಯಾಯಾಧೀಶರ ನ್ಯಾಯಾಲಯ (ಕಿ.ವಿ) ದಾವಣಗೆರೆ.



**ಗೌರವಾನ್ವಿತ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ದಾವಣಗೆರೆ.**

**ಅಮಲ್ಜಾರಿ ಅರ್ಜಿ ನಂ.244/2022**

ಡಿಕ್ರಿದಾರರು (D.Hr) ಶ್ರೀ ಗುರು ಚಿಟ್ ಫಂಡ್ಸ್ (ರಿ.) ಮಳಿಗೆ ನಂ.1, 2ನೇ ಮಹಡಿ, ಕುರುಬರ ಹಾಸ್ಟೆಲ್ ಕಾಂಪ್ಲೆಕ್ಸ್, ಹದಡಿ ರಸ್ತೆ, ಜಯದೇವ ಸರ್ಕಲ್ ಹತ್ತಿರ, ದಾವಣಗೆರೆ, ಇವರ ಪರವಾಗಿ ಪಾಲುದಾರರಾದ ಶ್ರೀ ಡಿ.ಎಂ. ಮಲ್ಲಿಕಾರ್ಜುನಸ್ವಾಮಿ ಬಿನ್ ಡಿ.ಎಂ. ನೀಲಕಂಠಯ್ಯ, ವಯಸ್ಸು 38 ವರ್ಷ - ವಿರುದ್ಧ-

ಡಿಕ್ರಿಋಣಿದಾರರು (J.Drs) : ನವೀನ್ ಎ.ಎಸ್. ಮತ್ತು ಇತರರು

ನೋಟಿಸ್‌ದಾರರು :- (ಡಿಕ್ರಿಋಣಿ ನಂ.1) 1. ಶ್ರೀ ನವೀನ್ ಎ.ಎಸ್. ಬಿನ್ ಶರಣಪ್ಪ, ವಯಸ್ಸು 32 ವರ್ಷ, ವ್ಯಾಪಾರಿ, #4665/72, 5ನೇ ಮುಖ್ಯರಸ್ತೆ, 14ನೇ ಕ್ರಾಸ್, ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.

**ಸಿ.ಪಿ.ಸಿ ಆದೇಶ 5 ನಿಯಮ 20 ರ ಅಡಿಯಲ್ಲಿ ತೀರ್ಪುಋಣಿದಾರಿ ನಂ.1 ವಿರುದ್ಧ ಡಿಕ್ರಿದಾರರು ನೀಡಲಾದ ಪತ್ರಿಕಾ ಪ್ರಕಟಣಾ ನೋಟಿಸ್**

ಮೇಲ್ಕಂಡ ಪ್ರಕರಣವನ್ನು ತೀರ್ಪು ಮತ್ತು ಡಿಕ್ರಿ ಆಧಾರದ ಮೇಲೆ ಡಿಕ್ರಿದಾರರು ಹಣ ವಸೂಲಾತಿ ಅಮಲ್ಜಾರಿಯನ್ನು ಕೋರಿ ಪ್ರಕರಣವನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ನೀವು ತೀರ್ಪುಋಣಿಯಾಗಿದ್ದು, ನ್ಯಾಯಾಲಯವು ನಿಮ್ಮ ವಿರುದ್ಧ ನ್ಯಾಯಾಲಯದಿಂದ ಸಮನ್ಸ್ ಹಾಗೂ ನೋಂದಾಯಿತ ಸಮನ್ಸ್ ಅನ್ನು ಅಂಚೆಯ ಮೂಲಕ ಕಳಿಸಿದರೂ ಸಹಾ ಅವು ನಿಮಗೆ ಜಾರಿಯಾಗಿರುವುದಿಲ್ಲ. ಆದ ಕಾರಣ ನಿಮ್ಮ ಹಾಜರಾತಿಗಾಗಿ ದಿನಾಂಕ:17.01.2024 ರಂದು ಬೆಳಿಗ್ಗೆ 11-00 ಗಂಟೆಗೆ ಮುದ್ದತ್ತು ನಿಗದಿಯಾಗಿದ್ದು, ಆ ದಿನ ನೀವು ಖುದ್ದಾಗಿಯಾಗಲೀ ಅಥವಾ ವಕೀಲರ ಮುಖಾಂತರವಾಗಲೀ ಪ್ರಕರಣದಲ್ಲಿ ಹಾಜರಿದ್ದು, ತಕರಾರು ಇದ್ದಲ್ಲಿ ಸಲ್ಲಿಸಬಹುದೆಂದು ಈ ಪತ್ರಿಕಾ ಪ್ರಕಟಣೆ ನೀಡಲಾಗಿದೆ. ತಪ್ಪಿದಲ್ಲಿ ನಿಮ್ಮ ವಿರುದ್ಧ ಏಕಪಕ್ಷೀಯ ತೀರ್ಮಾನ ತೆಗೆದುಕೊಳ್ಳಲಾಗುವುದು ತಿಳಿಯಿರಿ.

ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ ದಿನಾಂಕ: 12/12/2023 ರಂದು ಕೊಡಲ್ಪಟ್ಟಿದೆ.

ಡಿಕ್ರಿದಾರರ ಪರ ವಕೀಲರು
ಸಹಿ/- (ಎಸ್.ರುದ್ರಮುನಿ)
ಸ್ಥಳ: ದಾವಣಗೆರೆ. ದಿನಾಂಕ : 08/12/2023

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು, 2ನೇ ಹೆಚ್ಚುವರಿ ಸಿವಿಲ್
ನ್ಯಾಯಾಧೀಶರ ನ್ಯಾಯಾಲಯ (ಕಿ.ವಿ) ದಾವಣಗೆರೆ.



**ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ**

**ಪಿ ಅಂಡ್ ಎಸ್.ಸಿ ನಂ. 41 /2022**

**ಅರ್ಜಿದಾರರು :** ಟಿ.ಜಿ.ಎಸ್.ಮುರಿಗೇಂದ್ರಪ್ಪ ಬಿನ್ ಷಣ್ಮುಖಪ್ಪ ವಯಸ್ಸು 58 ವರ್ಷ, ವಾಸ : ಹಿರೇ ತೊಗಲೇರಿ ಗ್ರಾಮ, ಮಾಯಕೊಂಡ ಹೋಬಳಿ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ. -ವಿರುದ್ಧ -

**ಎದುರುದಾರರು :** ಯಾರೂ ಇಲ್ಲ.

**ಉದ್ದೇಶಿತ ಎದುರುದಾರ ನಂ.4 / ನೋಟೀಸ್‌ದಾರರು :** ಟಿ.ಜಿ. ಎಸ್. ಪುಷ್ಪಾವತಿ ಬಿನ್ ಲೇಟ್ ಸದಾಶಿವಪ್ಪ, ವಯಸ್ಸು ಸುಮಾರು 50 ವರ್ಷ, ವಾಸ : ಡೋರ್ ನಂ. 3146/2, 1ನೇ ಮೇನ್, 5ನೇ ಕ್ರಾಸ್, ಎಂ.ಸಿ.ಸಿ ಬಿ-ಬ್ಲಾಕ್, ದಾವಣಗೆರೆ.

**ಹಿಂದೂ ಉತ್ತರಾಧಿಕಾರಿ ಅಧಿನಿಯಮ ಕಲಂ 373 (1) (ಬಿ) ರ ಅಡಿಯಲ್ಲಿ ಉದ್ದೇಶಿತ ಎದುರುದಾರ ನಂ.4 ರವರ ವಿರುದ್ಧ ನೀಡಲಾದ ಪ್ರಕಟಣಾ ನೋಟೀಸು**

ಶ್ರೀಮತಿ ಗೌರವ್ವ ಯಾನೇ ಗೌರಮ್ಮ ಕೋಂ ಲೇಟ್ ಮುರುಗೇಂದ್ರಪ್ಪ ಇವರು ಅರ್ಜಿ ಷೆಡ್ಯೂಲ್ ಸ್ವತ್ತನ್ನು ಅರ್ಜಿದಾರರ ಹೆಸರಿಗೆ ದಾವಣಗೆರೆಯ ಹಿರಿಯ ಉಪ ನೋಂದಣಾಧಿಕಾರಿಗಳವರ ಕಛೇರಿಯಲ್ಲಿ ದಿನಾಂಕ : 08.06.2012 ರಂದು ಮಾಡಿಸಿರುವ 3ನೇ ಪುಸ್ತಕದ ದಸ್ತಾವೇಜು ನಂಬರ್ DVG-3-00077-2012-13 ಆಗಿ ಸಿ.ಡಿ. ನಂಬರ್ DVGD267 ನೇದ್ದರಲ್ಲಿ ನೋಂದಣಿಯಾಗಿರುವ ನೋಂದಾಯಿತ ವಿಲ್ ಯಾನೇ ಮರಣ ಶಾಸನ ಪತ್ರವನ್ನು ಮಾಡಿಸಿಟ್ಟಿದ್ದು ಇರುತ್ತದೆ. ನಂತರ ಸದರಿ ಶ್ರೀಮತಿ ಗೌರವ್ವ ಯಾನೇ ಗೌರಮ್ಮ ಕೋಂ ಲೇಟ್ ಮುರುಗೇಂದ್ರಪ್ಪ ಇವರು ದಿನಾಂಕ:02.11.2013 ರಂದು ಮರಣ ಹೊಂದಿರುತ್ತಾರೆ.

ಕಾರಣ ಮೇಲ್ಕಂಡ ಪ್ರಕರಣದ ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಪ್ರೊಬೇಟ್ ಆದೇಶ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ನೀವು ಉದ್ದೇಶಿತ ಎದುರುದಾರ ನಂ.4 ರವರಾಗಿದ್ದು, ನ್ಯಾಯಾಲಯವು ನಿಮ್ಮ ವಿರುದ್ಧ ನ್ಯಾಯಾಲಯದಿಂದ ಸಮನ್ಸ್ ಅನ್ನು ನೋಂದಾಯಿತ ಅಂಚೆಯ ಮೂಲಕ ಕಳಿಸಿದ್ದರೂ ಸಹಾ ಅವು ನಿಮಗೆ ಜಾರಿಯಾಗಿರುವುದಿಲ್ಲ. ಕಾರಣ ನಿಮ್ಮ ಹಾಜರಾತಿಗಾಗಿ **ದಿನಾಂಕ : 24.01.2024 ರಂದು ಬೆಳಿಗ್ಗೆ 11-00 ಗಂಟೆಗೆ** ಮುದ್ದತ್ತು ನಿಗದಿಯಾಗಿದ್ದು ಆ ದಿನ ನೀವು ಖುದ್ದಾಗಿಯಾಗಲೀ ಅಥವಾ ವಕೀಲರ ಮುಖಾಂತರವಾಗಲೀ ಪ್ರಕರಣದಲ್ಲಿ ಹಾಜರಿದ್ದು, ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ವಿರುದ್ಧ ಏಕಪಕ್ಷೀಯ ತೀರ್ಮಾನ ತೆಗದುಕೊಳ್ಳಲಾಗುವುದು ತಿಳಿಯಿರಿ.

**ಷೆಡ್ಯೂಲ್**

ದಾವಣಗೆರೆ ತಾಲ್ಲೂಕು, ದಾವಣಗೆರೆ ಸಬ್ ರಿಜಿಸ್ಟ್ರಾರ್ ರವರ ಆಫೀಸಿನ ವ್ಯಾಪ್ತಿಗೆ ಒಳಪಟ್ಟ ಮಾಯಕೊಂಡ ಹೋಬಳಿ, ಹಿರೇತೊಗಲೇರಿ ಗ್ರಾಮದ ರೀ ಸರ್ವೆ ನಂ.110/2 ಇದರ ವಿಸ್ತೀರ್ಣ : ಎಕರೆ 3 ಗುಂಟೆ 09, ಆಕಾರ ರೂ.2-52 ಪೈಸೆವುಳ್ಳ ಖುಷ್ಕಿ ಜಮೀನಿನ ಪೈಕಿ ಈ ಹಿಂದೆ ದಿನಾಂಕ : 23.12.2002 ರಂದು ದಾವಣಗೆರೆ ಸಬ್ ರಿಜಿಸ್ಟ್ರಾರ್‌ವರ ಆಫೀಸಿನ 1ನೇ ಪುಸ್ತಕದ, 2952 ನೇ ಸಂಪುಟದ, 9127 ನೇ ನಂಬರಾಗಿ ರಿಜಿಸ್ಟ್ರಾಗಿರುವ ಕ್ರಯಪತ್ರದ ಮೂಲಕ ಎಕರೆ-01 ಗುಂಟೆ 25 ವುಳ್ಳ ಖುಷ್ಕಿ ಜಮೀನನ್ನು ಮಾರಾಟ ಮಾಡಿ ಉಳಿದ ಜಮೀನಿನ ವಿಸ್ತೀರ್ಣ ಎಕರೆ-1. ಗುಂಟೆ-24 (1-24) ವುಳ್ಳ ಖುಷ್ಕಿ ಜಮೀನಿಗೆ **ಚಕ್ಕುಬಂದಿ : ಪೂರ್ವಕ್ಕೆ :** ಚಾನಲ್ ರಸ್ತೆ, **ಪಶ್ಚಿಮಕ್ಕೆ :** ಹೊಂಡ, **ಉತ್ತರಕ್ಕೆ :** ಇದೇ ಸರ್ವೆ ನಂಬರ್ ಪೈಕಿ ಮಾರಾಟ ಮಾಡಿರುವ 1-25 ಗುಂಟೆ ಜಮೀನು, **ದಕ್ಷಿಣಕ್ಕೆ :** ಜಿ.ಎಂ.ರಾಮಚಂದ್ರಪ್ಪ ಇವರ ಜಮೀನು.

ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ, ದಿನಾಂಕ : 13.12.2023 ರಂದು ಕೊಡಲ್ಪಟ್ಟಿದೆ.

ಅರ್ಜಿದಾರರ ಪರ ವಕೀಲರು
**ಸಹಿ/- (ಬಿ.ಬಿ. ರಾಮಪ್ಪ)**
ವಕೀಲರು, ದಾವಣಗೆರೆ

ನ್ಯಾಯಾಲಯದ ಆದೇಶದ ಮೇರೆಗೆ,
**ಸಹಿ /- ಮುಖ್ಯ ಆಡಳಿತಾಧಿಕಾರಿ**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದಾವಣಗೆರೆ.

# ಬೆಳಗಾವಿ ಘಟನೆ : ಸಂಸದರ ತಂಡ ರವಾನಿಸಿದ ಜೆ.ಪಿ.ನಡ್ಡಾ

## ಇಂದು ರಾಜ್ಯಾದ್ಯಂತ ಬಿಜೆಪಿಯಿಂದ ಪ್ರತಿಭಟನೆ



ಬೆಂಗಳೂರು, ಡಿ. 15 - ಬೆಳಗಾವಿಯ ವಂಟಮೂರಿ ಗ್ರಾಮದಲ್ಲಿ ನಡೆದ ಘಟನೆಯನ್ನು ಬಿಜೆಪಿ ರಾಷ್ಟ್ರೀಯ ಘಟಕ ತೀವ್ರವಾಗಿ ಪರಿಗಣಿಸಿ ಪರಿಸ್ಥಿತಿ ಅಧ್ಯಯನಕ್ಕೆ ಸಂಸದರ ತಂಡವನ್ನು ಕರ್ನಾಟಕಕ್ಕೆ ಕಳುಹಿಸುತ್ತಿದೆ.

ಬುಡಕಟ್ಟು ಮಹಿಳೆಯನ್ನು ಬೆತ್ತಲೆಯಾಗಿ ಮೆರವಣಿಗೆ ಮಾಡಿರುವ ಹೇಯ ಘಟನೆಯನ್ನು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ತೀವ್ರವಾಗಿ ಖಂಡಿಸಿ, ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದಲೂ ಮಹಿಳೆಯರ ವಿರುದ್ಧ ಇಂತಹ ಘಟನೆಗಳು ಆಗಿಂದಾಗ್ಗೆ ನಡೆಯುತ್ತಿವೆ ಎಂದಿದ್ದಾರೆ.

ಇದು ರಾಷ್ಟ್ರದೆಲ್ಲೆಡೆ ಕಾಂಗ್ರೆಸ್ ಸರ್ಕಾರಗಳ ಬೇಜವಾಬ್ದಾರಿ ವರ್ತನೆಯನ್ನು ಬಹಿರಂಗ ಪಡಿಸುತ್ತದೆ ಎಂದಿರುವ ಅವರು, ಕರ್ನಾಟಕದಲ್ಲಿ ನಡೆದಿರುವ ಘಟನೆ ಬಗ್ಗೆ ಸತ್ಯ ಶೋಧನೆ ಮಾಡಲು ಐವರ ಸಮಿತಿಯನ್ನು ಕಳುಹಿಸುತ್ತಿದೆ.

ಸಮಿತಿಯಲ್ಲಿ ಸಂಸದರಾದ ಅಪರಾಜಿತ್ ಸಾರಂಗಿ, ಸುನೀತಾ ದುಗ್ಗಲ್, ರಂಜಿತಾ ಕೊಪ್ಲಿ, ಲಾಕೆಟ್ ಚಟರ್ಜಿ ಅಲ್ಲದೆ ಕೇಂದ್ರ ಸಚಿವೆ ಆಶಾ ಲಾಕ್ರಾ ಅವರು ಇದ್ದು, ಸಂತ್ರಸ್ತೆಯನ್ನು ಭೇಟಿ ಮಾಡಲಿದ್ದಾರೆ.

ಈ ಮಧ್ಯೆ ಬೆಳಗಾವಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಂಟಮೂರಿ ಗ್ರಾಮದಲ್ಲಿ ನಡೆದ ಘಟನೆ ದೇಶಾದ್ಯಂತ ಚರ್ಚೆಗೆ ಒಳಪಟ್ಟಿದೆ, ಪರಿಶಿಷ್ಟ ಜಾತಿ ಮಹಿಳೆಯನ್ನು ಬೆತ್ತಲೆ ಮಾಡಿ ಕಂಬಕ್ಕೆ ಕಟ್ಟಿಹಾಕಿ ಥಳಿಸಿದ್ದು ಖಂಡನಾರ್ಹ ಮತ್ತು ಖೇದಕರ ಎಂದರು.

ಘಟನೆಯ ಸಂತ್ರಸ್ತೆಯನ್ನು ಇದುವರೆಗೆ ಮುಖ್ಯಮಂತ್ರಿ ಭೇಟಿ ಮಾಡಿಲ್ಲ, ಗೃಹ ಸಚಿವರು ಹೊರತುಪಡಿಸಿ ಬೇರೆ ಯಾರೂ ಭೇಟಿ ಕೊಟ್ಟಿಲ್ಲ, ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ಚಾಟಿ ಬೀಸಿದೆ, ಪೊಲೀಸ್ ಗಸ್ತು ಯಾಕೆ ಇರಲಿಲ್ಲ, ರಾಜ್ಯ ಸರ್ಕಾರ ಇಂಥ ಘಟನೆ ಆಗದಂತೆ ತಡೆಯಲು ಏನು ಕ್ರಮ ಕೈಗೊಂಡಿದೆ ಎಂದು ಕೇಳಿದೆ.

ರಾಜ್ಯ ಸರ್ಕಾರವು ಘಟನೆಯನ್ನು ಗಂಭೀರವಾಗಿ ಪರಿಗಣಿಸಿಲ್ಲ, ಘಟನೆ ಖಂಡಿಸಿ ನಾಳೆ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಬಿಜೆಪಿ ದೊಡ್ಡ ಪ್ರತಿಭಟನೆ ನಡೆಸಲಿದೆ. ದೊಡ್ಡ ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸುತ್ತಾರೆ ಎಂದರು.

# ದಾವಣಗೆರೆಯ ಹೆಮ್ಮೆಯ ವಿದ್ಯಾರ್ಥಿ 'ಇಸ್ರೋ'ದ ವೈಜ್ಞಾನಿಕ ಇಂಜಿನಿಯರ್ ಶಿವಕುಮಾರ್ ಎಸ್.ಪಾಟೀಲ್



**ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ವಿಜ್ಞಾನ ಪದವಿ ಪೂರ್ವ ಕಾಲೇಜಿನಲ್ಲಿನ ಇಂದಿನ ಕಾರ್ಯಕ್ರಮದಲ್ಲಿ ಶಿವಕುಮಾರ್ ಎಸ್. ಪಾಟೀಲ್ ಅವರಿಂದ ವಿಶೇಷ ಉಪನ್ಯಾಸ**

ದಾವಣಗೆರೆ ಬಾಪೂಜಿ ವಿದ್ಯಾಸಂಸ್ಥೆಯ ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ವಿಜ್ಞಾನ ಪದವಿ ಪೂರ್ವ ಕಾಲೇಜು ವತಿಯಿಂದ ದಿ. ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಸ್ಮರಣಾರ್ಥವಾಗಿ 15ನೇ ವಿಜ್ಞಾನ ವಿಚಾರ ಸಂಕಿರಣ ಹಾಗೂ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಗಣಿತ ಮತ್ತು ವಿಜ್ಞಾನ ರಸಪ್ರಶ್ನೆ ಕಾರ್ಯಕ್ರಮವು ಇಂದು ನೆರವೇರುತ್ತಿದ್ದು, ಇದರ ಪ್ರಧಾನ ಉಪನ್ಯಾಸಕರಾಗಿ ಪ್ರತಿಷ್ಠಿತ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ವಿಜ್ಞಾನಿಗಳಾಗಿರುವ ಶಿವಕುಮಾರ್ ಎಸ್.ಪಾಟೀಲ್ ಅವರು 'ಸೂರ್ಯ ಮತ್ತು ಚಂದ್ರನೆಡೆಗೆ ಭಾರತೀಯರ ಪಯಣ' ವಿಷಯವಾಗಿ ಮಾತನಾಡಲಿದ್ದಾರೆ.

ಮೂಲತಃ ಬಾಗಲಕೋಟೆ ಜಿಲ್ಲೆಯ ಕೂಡಲ ಸಂಗಮದವರಾದ ಶಿವಕುಮಾರ್ ಅವರು, ಕುವೆಂಪು ವಿಶ್ವವಿದ್ಯಾನಿಲಯದ ರ‍್ಯಾಂಕ್ ವಿದ್ಯಾರ್ಥಿಯಾಗಿ ದಾವಣಗೆರೆಯ ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿಯಲ್ಲಿ ಪದವಿಯನ್ನು ಪೂರೈಸಿದ್ದಾರೆ.

ಜಾರ್ಖಂಡ್‌ನ ರಾಂಚಿಯ ಬಿರ್ಲಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಸ್ನಾತಕೋತ್ತರ ಪದವಿಯಲ್ಲಿ ಮೊದಲ ರ‍್ಯಾಂಕ್‌ಗಳಿಸಿರುವ ಇವರು, 1998 ರಲ್ಲಿ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಇಸ್ರೋಗೆ ವೈಜ್ಞಾನಿಕ ಇಂಜಿನಿಯರ್ ಆಗಿ ಸೇರಿದವರು. ಆರಂಭದಲ್ಲಿ ಇಸ್ರೋ ಉಪಗ್ರಹಗಳ ಪವರ್ ಸಬ್ ಸಿಸ್ಟಮ್‌ಗಳ ವಿಶ್ವಾಸಾರ್ಹತೆ, ಪರೀಕ್ಷೆ ಮತ್ತು ಮೌಲ್ಯಮಾಪನಗಳ ಇಂಜಿನಿಯರಾಗಿ ಉತ್ತಮ ಕೆಲಸ ನಿರ್ವಹಿಸಿ, ಸುಮಾರು 30ಕ್ಕೂ ಹೆಚ್ಚು ಉಪಗ್ರಹಗಳಾದ ಇನ್ಸಾಟ್-2ಇ, ಇನ್ಸಾಟ್-3ಎ, 3ಇ, ಟಿಇಎಸ್, ಐ ಆರ್ ಎಸ್-ಪಿ ಎಸ್/ಪಿ ಜಿ, ಕಾರ್ಟೋಸ್ಯಾಟ್-2ಎ ನಿಂದ 2ಇ ವರೆಗೆ ವಿದ್ಯುತ್ ಉಪ ವ್ಯವಸ್ಥೆಯ ಅನುಷ್ಠಾನಕ್ಕೆ ಕೊಡುಗೆ ನೀಡಿದ್ದಾರೆ.

ಪ್ರಸ್ತುತ ಇವರು ಸಿಸ್ಟಮ್ ಇಂಜಿನಿಯರಿಂಗ್ ಮತ್ತು ಮ್ಯಾನುಫ್ಯಾಕ್ಚರಿಂಗ್ ಗ್ರೂಪಿನ ಪವರ್ ಸಿಸ್ಟಮ್ ರಿಯಲೈಸೇಶನ್ ಮತ್ತು ಟೆಸ್ಟ್ ಹಾಗೂ ಮೌಲ್ಯಮಾಪನ ವಿಭಾಗದ ಮುಖ್ಯಸ್ಥರಾಗಿದ್ದು, ರಿಮೋಟ್ ಸೆನ್ಸಿಂಗ್, ಸಂವಹನ, ವೈಜ್ಞಾನಿಕ ಮತ್ತು ಗಗನ್ಯಾನ್ ಸರಣಿಯ ಬಾಹ್ಯಾಕಾಶ ನೌಕೆಗಳಿಗೆ ಪವರ್ ಎಲೆಕ್ಟ್ರಾನಿಕ್ಸ್ ಉಪವ್ಯವಸ್ಥೆಯ ಸಾಕ್ಷಾತ್ಕಾರಕ್ಕೆ ಜವಾಬ್ದಾರರಾಗಿದ್ದಾರೆ.

ಈ ಎಲ್ಲಾ ಉಪಗ್ರಹಗಳ ಯಂತ್ರಾಂಶವನ್ನು ಬಾಹ್ಯ ಕೈಗಾರಿಕೆಗಳ ಬೆಂಬಲ ಬಳಸಿಕೊಂಡು ನಿರ್ಮಿಸಲಾಗುತ್ತಿದ್ದು, ಇವರು 2018ರಲ್ಲಿ ಫ್ರೆಂಚ್ ಗಯಾನದ ಕುರು ನಿಂದ ಉಡಾವಣೆಯಾದ ಜಿಸ್ಯಾಟ್-17 ಸಂವಹನ ಉಪಗ್ರಹದ ಉಡಾವಣಾ ಅಭಿಯಾನದಲ್ಲೂ ಭಾಗವಹಿಸಿದವರಾಗಿದ್ದಾರೆ. ಇವರು ಆಂಧ್ರಪ್ರದೇಶದ ಭಾರತೀಯ ಬಾಹ್ಯಾಕಾಶ ಬಂದರು ಶ್ರೀಹರಿಕೋಟದಲ್ಲಿ ನಡೆಸಿದ ಅನೇಕ ಉಡಾವಣೆ ಅಭಿಯಾನಗಳಲ್ಲಿ ಭಾಗವಹಿಸಿದ್ದು, ಐತಿಹಾಸಿಕ ವೈಜ್ಞಾನಿಕ ಕಾರ್ಯಾಚರಣೆಗಳಾದ ಚಂದ್ರಯಾನ-1, 2 ಹಾಗೂ 3, ಮಾರ್ಸ್ ಆರ್ಬಿಟರ್ ಮಿಷನ್ ಮತ್ತು ಆದಿತ್ಯ ಎಲ್‌ಒನ್ ಉಪಗ್ರಹಗಳಿಗೆ ವಿದ್ಯುತ್ ಉಪ ವ್ಯವಸ್ಥೆಯನ್ನು ತಲುಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

ಈ ಕಾರ್ಯಾಚರಣೆಗಳಲ್ಲಿನ ಎಲ್ಲಾ ಉಪ ವ್ಯವಸ್ಥೆಗಳ ಕಾರ್ಯಕ್ಷಮತೆಯು ನಿರೀಕ್ಷೆಯಂತೆ ಕಾರ್ಯನಿರ್ವಹಿಸಿದ್ದು, ತುಂಬಾ ತೃಪ್ತಿಯನ್ನು ಅಷ್ಟೇ ಅಲ್ಲ ಭಾರತ ಮತ್ತು ಭಾರತೀಯರಿಗೆ ವಿಶ್ವದಲ್ಲಿ ಯಶಸ್ಸಿನ ಕೀರ್ತಿಯನ್ನು ತಂದುಕೊಟ್ಟಿದೆ. ಇದು ಪ್ರತಿಯೊಬ್ಬ ಭಾರತೀಯನಿಗೂ ಹೆಮ್ಮೆಯ ವಿಷಯವಾಗಿದ್ದು, ಇಸ್ರೋದ ವಿಜ್ಞಾನಿಗಳ ಈ ಅಮೋಘ ಕಾರ್ಯಾಚರಣೆಯಲ್ಲಿ ದಾವಣಗೆರೆಯ ವಿದ್ಯಾರ್ಥಿ ಶಿವಕುಮಾರ್ ಎಸ್.ಪಾಟೀಲ್ ಅವರ ಪಾತ್ರವೂ ಮಹತ್ವದ್ದಾಗಿದೆ ಎಂಬುದು ದಾವಣಗೆರೆಗೂ ಹೆಮ್ಮೆಯ ವಿಷಯವಾಗಿದೆ.

ದಾಖಲೆ ಸಮಯದಲ್ಲಿ ಜಿ ಸ್ಯಾಟ್ 12 ಉಪಗ್ರಹವನ್ನು ಯಶಸ್ವಿಯಾಗಿ ಉಡಾವಣೆ ಮಾಡಿದ್ದಕ್ಕಾಗಿ ಇವರು ಟೀಮ್ ಎಕ್ಸಲೆನ್ಸ್ ಪ್ರಶಸ್ತಿಯನ್ನು ಸಹ ಪಡೆದಿದ್ದು, ಮಾಸ್ಟರ್ ಆಫ್ ಇಂಜಿನಿಯರಿಂಗ್‌ನಲ್ಲಿ ಅತ್ಯಧಿಕ ಅಂಕಗಳನ್ನು ಗಳಿಸಿದ್ದಕ್ಕಾಗಿ 2007ರಲ್ಲಿ ಕೊಲ್ಕತ್ತಾದ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರ್ಸ್ ಇಂಡಿಯಾದಿಂದ 'ಗ್ಲಾಸ್ಗೋ ಔಲ್ಡ್' ವಿದ್ಯಾರ್ಥಿ ಪ್ರಶಸ್ತಿಯನ್ನೂ ಸಹ ಪಡೆದಿದ್ದಾರೆ.

ರಾಷ್ಟ್ರೀಯ, ಅಂತರರಾಷ್ಟ್ರೀಯ ನಿಯತ ಕಾಲಿಕೆಗಳು ಮತ್ತು ಸಮ್ಮೇಳನಗಳಲ್ಲಿ ಸುಮಾರು 10 ತಾಂತ್ರಿಕ ಪ್ರೌಢ ಪ್ರಬಂಧಗಳನ್ನು ಮಂಡಿಸಿದ್ದಾರೆ. ಶಿವಕುಮಾರ್ ಎಸ್. ಪಾಟೀಲ್ ಅವರು, ಇಂದು ನಡೆಯಲಿರುವ ಈ ವಿಜ್ಞಾನ ವಿಚಾರ ಸಂಕಿರಣದಲ್ಲಿ ಗುತ್ತೂರು ಸರ್ಕಾರಿ ಪ್ರೌಢ ಶಾಲೆಯ ವಿಜ್ಞಾನ ಶಿಕ್ಷಕರಾದ ಶ್ರೀಧರಮಯ್ಯ ಅವರು 'ಪರೀಕ್ಷೆ ಒಂದು ಹಬ್ಬ, ಸಂಭ್ರಮಿಸೋಣ' ಎಂಬ ವಿಷಯವಾಗಿಯೂ ಮಾತನಾಡಲಿದ್ದು, ನಿವೃತ್ತ ಮುಖ್ಯೋಪಾಧ್ಯಾಯರಾದ ಟಿ.ಎಂ.ಶರಣಪ್ಪನವರು, ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಗಣಿತ ಮತ್ತು ವಿಜ್ಞಾನ ರಸಪ್ರಶ್ನೆ ಸ್ಪರ್ಧೆಯನ್ನು ಸಹ ನಡೆಸಿಕೊಡಲಿದ್ದಾರೆ.

ಕಾಲೇಜು ಆವರಣದ ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಸಭಾಂಗಣದಲ್ಲಿ ಈ ವಿಜ್ಞಾನ ವಿಚಾರ ಸಂಕಿರಣದ ಉದ್ಘಾಟನೆಯನ್ನು ಕಾಲೇಜಿನ ಪ್ರಾಚಾರ್ಯ ಪ್ರೊ.ಎಂ.ಪಿ.ರುದ್ರಪ್ಪನವರ ಅಧ್ಯಕ್ಷತೆಯಲ್ಲಿ ಬಾಪೂಜಿ ವಿದ್ಯಾಸಂಸ್ಥೆಯ ಆಡಳಿತ ಮತ್ತು ಶೈಕ್ಷಣಿಕ ನಿರ್ದೇಶಕರಾದ ಡಾ.ಎಂ.ಜಿ.ಈಶ್ವರಪ್ಪ ಅವರು ನೆರವೇರಿಸಲಿದ್ದು, ಮುಖ್ಯ ಅತಿಥಿಗಳಾಗಿ ಬಾಪೂಜಿ ವಿದ್ಯಾಸಂಸ್ಥೆಯ ಖಜಾಂಚಿ ಎ.ಎಸ್.ನಿರಂಜನ ಹಾಗೂ ಸಮಾರೋಪ ಕಾರ್ಯಕ್ರಮದಲ್ಲಿ ಎಲೈಟ್ ಒಲಂಪಿಯಾಡ್ ಪ್ರೋಗ್ರಾಮ್ ಗೋಣಿವಾಡದ ನಿರ್ದೇಶಕ ಜೆ.ಪದ್ಮನಾಭ ಭಾಗವಹಿಸಲಿದ್ದಾರೆ.

**- ಹೆಚ್.ಬಿ.ಮಂಜುನಾಥ,**
ಹಿರಿಯ ಪತ್ರಕರ್ತ

# ಮಲಬಾರ್ ಗೋಲ್ಡ್‌ನಲ್ಲಿ ಆರ್ಟಿಸ್ರಿ ಬ್ರಾಂಡೆಡ್ ಜ್ಯುವೆಲ್ಲರಿ ಶೋ



ದಾವಣಗೆರೆ, ಡಿ. 15 - ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್‌ರವರ ಆರ್ಟಿಸ್ರಿ ಬ್ರಾಂಡೆಡ್ ಜ್ಯುವೆಲ್ಲರಿ ಶೋ ಚಿನ್ನ, ವಜ್ರ ಮತ್ತು ಅಮೂಲ್ಯ ರತ್ನಾಭರಣಗಳ ವಿಶಿಷ್ಟ ಪ್ರದರ್ಶನವನ್ನು ನಗರದ ಮಂಡಿಪೇಟೆ ಶೋರೂಂನಲ್ಲಿ ಇಂದು ಏರ್ಪಡಿಸಲಾಗಿತ್ತು.

ಮುಖ್ಯ ಅತಿಥಿಗಳಾದ ಪ್ರಿಯಾ ಗೌಡ, ಶ್ರೇಯಾ ನಾಯ್ಕ್, ಅಮಂಶೂ ಪಾಟೀಲ್, ಡಾ. ಸ್ವಾತಿ ಮಹೇಂದರ್‌ಕರ್, ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಗ್ರಾಹಕರ ಉಪಸ್ಥಿತಿಯಲ್ಲಿ ಉದ್ಘಾಟಿಸಲಾಗಿತ್ತು.

ಸೂಕ್ಷ್ಮಾತೀತ ಕುಸುರಿ ಕೆಲಸಗಳಿಂದ ನಿರ್ಮಿತ ಆಭರಣಗಳು ಕುಶಲಕರ್ಮಿಗಳ ಕೌಶಲ್ಯವನ್ನು ಪ್ರತಿಪಾದಿಸುತ್ತವೆ. ಪ್ರತಿ ಆಭರಣವು ಅವರ ನೈಪುಣ್ಯತೆ ಮತ್ತು ಕುಶಲತೆಗೆ ಮೆರುಗು ನೀಡಿ ಈ ಪ್ರದರ್ಶನದ ವಿಷಯವಾದ ಪ್ರತಿ ಆಭರಣದಲ್ಲೂ ಕಲೆಯಿದೆ ಎಂಬುದಕ್ಕೆ ಸಾಕ್ಷಿಯಾಗಿದೆ. ಆರ್ಟಿಸ್ರಿ ಶೋ ಇಂದಿನಿಂದ ಇದೇ ದಿನಾಂಕ 18ರ ವರೆಗೆ ನಡೆಯಲಿದೆ.

ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಬರುವ ಲಾಭದಲ್ಲಿನ ಶೇ.5 ರಷ್ಟು ಹಣವನ್ನು ಸಾಮಾಜಿಕ ಕಾರ್ಯಗಳಿಗೆ ಬಳಸುತ್ತಿದೆ. ಇದರಲ್ಲಿ ಪ್ರಮುಖವಾಗಿ ಶಿಕ್ಷಣ, ಆರೋಗ್ಯ, ಮಹಿಳಾ ಸಬಲೀಕರಣ, ಬಡವರಿಗೆ ಮನೆಗಳ ನಿರ್ಮಾಣ ಮತ್ತು ರಕ್ಷಣಾ ವಾತಾವರಣವನ್ನು ಸೃಷ್ಟಿಸುವ ಕಾರ್ಯಗಳಿಗೆ ಈ ಹಣವನ್ನು ವಿನಿಯೋಗಿಸುತ್ತಿದೆ.

ಜ್ಯುವೆಲ್ಲರಿ ಶೋನಲ್ಲಿ ಶೋರೂಂ ಹೆಡ್ ಬೇಸಿಲ್ ರಾಜನ್ ಮತ್ತು ಇತರೆ ಮ್ಯಾನೇಜ್‌ಮೆಂಟ್ ಸದಸ್ಯರು ಉಪಸ್ಥಿತರಿದ್ದರು.

# ಸಚಿವರು, ಶಾಸಕರ ಪ್ರಮಾಣ ವಚನ ಪ್ರಶ್ನಿಸುವ ಅರ್ಜಿ ತಳ್ಳಿ ಹಾಕಿದ ಹೈಕೋರ್ಟ್

ಬೆಂಗಳೂರು, ಡಿ. 15 – ರಾಜ್ಯದ ಒಂಭತ್ತು ಸಚಿವರು ಹಾಗೂ 37 ಶಾಸಕರು ಪ್ರಮಾಣ ವಚನ ಸ್ವೀಕರಿಸಿದ್ದು ನಿಗದಿತ ಸ್ವರೂಪದಲ್ಲಿ ಇರಲಿಲ್ಲ ಎಂದು ದಾಖಲಾಗಿದ್ದ ಅರ್ಜಿಯನ್ನು ಕರ್ನಾಟಕ ಹೈಕೋರ್ಟ್ ತಳ್ಳಿ ಹಾಕಿದೆ.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಜಮೀರ್ ಅಹಮದ್ ಖಾನ್, ಕೆ.ಎನ್. ರಾಜಣ್ಣ ಮತ್ತಿತರರು ನಿಗದಿತ ಸ್ವರೂಪದಲ್ಲಿ ಪ್ರಮಾಣ ವಚನ ಸ್ವೀಕರಿಸಿಲ್ಲ. ಪ್ರಮಾಣ ವಚನ ಸ್ವೀಕಾರವನ್ನು ಅಸಂವಿಧಾನಿಕ ಎಂದು ಘೋಷಿಸಬೇಕೆಂದು ಅರ್ಜಿ ದಾಖಲಿಸಲಾಗಿತ್ತು.

ದೇವರ ಹೆಸರಿನಲ್ಲಿ ಮಾತ್ರ ಪ್ರಮಾಣ ವಚನ ಸ್ವೀಕರಿಸಬೇಕಿತ್ತು. ಆದರೆ, ಈ ಶಾಸಕರು ಹಾಗೂ ಸಚಿವರು ಮತದಾರರು ಇಲ್ಲವೇ ಇತರೆ ವ್ಯಕ್ತಿಗಳ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ ಎಂದು ಅರ್ಜಿದಾರರು ವಾದ ಮಂಡಿಸಿದ್ದರು.

ಆದರೆ, ಈ ಅರ್ಜಿ ತಳ್ಳಿ ಹಾಕಿರುವ ಹೈಕೋರ್ಟ್, ಇದೇನು ಸಂವಿಧಾನದ ಮೂಲ ವಿಷಯಕ್ಕೆ ಸಂಬಂಧಿಸಿದ್ದಲ್ಲ. ನಿಮಗೇನಾದರೂ ಅವರ ಬಗ್ಗೆ ಅಸಂತೋಷ ಇದ್ದರೆ, ಮುಂದಿನ ಬಾರಿ ಅವರು ಚುನಾಯಿತರಾಗದಂತೆ ನೋಡಿಕೊಳ್ಳಿ ಎಂದು ಅರ್ಜಿದಾರರಿಗೆ ತಿಳಿಸಿದೆ.

# ಹೊಸ ಜಾತಿ ಗಣತಿಗೆ ವೀರಶೈವ ಸಭಾ ಒತ್ತಾಯ

**(1ನೇ ಪುಟದಿಂದ)** ಮನವಿಯಲ್ಲಿ ಹೇಳಲಾಗಿದೆ.

ಕರ್ನಾಟಕದಲ್ಲಿರುವ ಹಲವರು ತಮ್ಮ ಜಾತಿಯ ಕುರಿತಂತೆ ಸ್ವಯಂ ಘೋಷಣೆ ಮಾಡಿಕೊಂಡಿದ್ದಾರೆ. ಆದರೆ , ನಿಜವಾಗಿಯೂ ಅವರು ಆ ಜಾತಿ, ಸಮುದಾಯಕ್ಕೆ ಸೇರಿದವರೇ ಎಂಬ ಸತ್ಯಾಸತ್ಯತೆ ಅರಿಯಲು ಯಾವುದೇ ಪರಿಶೀಲನೆ ಆಗಿಲ್ಲ. ಹೀಗಾಗಿ ಈ ಸಮೀಕ್ಷೆಯಲ್ಲಿ ಸಂಗ್ರಹಿಸಿರುವ ಮಾಹಿತಿಯಲ್ಲೇ ದೋಷವಿದೆ ಎಂದು ತಿಳಿಸಲಾಗಿದೆ.

ಪ್ರತಿ 10 ವರ್ಷಗಳಿಗೆ ಒಮ್ಮೆ ಜನಗಣತಿ ನಡೆಸಲಾಗುತ್ತದೆ. ಈಗಾಗಲೇ ರಾಜ್ಯದಲ್ಲಿ ನಡೆದಿರುವ ಸಾಮಾಜಿಕ, ಆರ್ಥಿಕ ಸ್ಥಿತಿಗತಿಯ ಸಮೀಕ್ಷೆ 8 ವರ್ಷದಷ್ಟು ಹಳೆಯದಾಗಿದೆ. ಇದನ್ನು ಯಥಾವತ್ ಅಂಗೀಕರಿಸುವುದು ಸೂಕ್ತವಲ್ಲ ಎಂದೂ ಮನವಿಯಲ್ಲಿ ಹೇಳಲಾಗಿದೆ.

ಸಮ ಸಮಾಜದ ಪರಿಕಲ್ಪನೆಯನ್ನು ಜಗತ್ತಿಗೆ ನೀಡಿದ್ದೇ ವೀರಶೈವ ಲಿಂಗಾಯತ ಸಮುದಾಯ. ನಾವು ಯಾರ ಹಕ್ಕನ್ನೂ ಕಸಿದುಕೊಳ್ಳುವವರಲ್ಲ. ಎಲ್ಲರಿಗೂ ಸಾಮಾಜಿಕ ನ್ಯಾಯ ದೊರೆಯಬೇಕು ಎಂಬುದು ನಮ್ಮ ತತ್ವ ಹಾಗೂ ಬದ್ಧತೆ. ಆದರೆ, ಈಗಾಗಲೇ ರಾಜ್ಯದಲ್ಲಿ ನಡೆದಿರುವ ಸಾಮಾಜಿಕ, ಆರ್ಥಿಕ ಸಮೀಕ್ಷೆ ಅಸಮರ್ಪಕವಾಗಿದೆ. ಇದನ್ನು ಅಂಗೀಕರಿಸಿದರೆ ಸಮುದಾಯಕ್ಕೆ ಅಷ್ಟೇ ಅಲ್ಲದೇ ಸಮಾಜದ ವಂಚಿತರು, ಶೋಷಿತರು, ಮಧ್ಯಮ ವರ್ಗದ ಆರ್ಥಿಕ ದುರ್ಬಲರಿಗೆ ಘೋರ ಅನ್ಯಾಯವಾಗುತ್ತದೆ ಎಂದು ತಿಳಿಸಲಾಗಿದೆ.

ವಿಧಾನಸಭಾ ಅಧಿವೇಶನ ನಡೆಯುವ ವೇಳೆಯೂ ಶಾಸಕ ಶಾಮನೂರು ಶಿವಶಂಕರಪ್ಪ ಅವರು ವೀರಶೈವ ಲಿಂಗಾಯತ ಸಮುದಾಯದ ಸಚಿವರು ಮತ್ತು ಶಾಸಕರಿಂದ ಸಹಿ ಸಂಗ್ರಹಿಸಿ, ಪತ್ರವನ್ನು ಮುಖ್ಯಮಂತ್ರಿಗೆ ನೀಡಿದ್ದಾರೆ.

# ದೇವರಬೆಳಕೆರೆ ತಾಪಂ ಇಓ ಭೇಟಿ



ಮಲೇಬೆನ್ನೂರು, ಡಿ.15- ದೇವರಬೆಳಕೆರೆ ಗ್ರಾಮದ ಗ್ರಾ.ಪಂ. ಕಚೇರಿಗೆ ಶುಕ್ರವಾರ ಆಗಮಿಸಿದ್ದ ಹರಿಹರ ತಾ.ಪಂ. ನೂತನ ಇಓ ರಮೇಶ್ ಅವರು, ಡಿಜಿಟಲ್ ಗ್ರಂಥಾಲಯಕ್ಕೂ ಭೇಟಿ ನೀಡಿ, ನಿರ್ವಹಣೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ತಾ.ಪಂ. ಸಹಾಯಕ ನಿರ್ದೇಶಕ ಜಿ.ಆರ್.ಸುನೀಲ್, ಗ್ರಾ.ಪಂ. ಅಧ್ಯಕ್ಷ ಶ್ರೀಮತಿ ಸೀತಮ್ಮ, ಆರ್.ಆರ್.ತಿಪ್ಪೇಶ್, ಗ್ರಾ.ಪಂ. ಸದಸ್ಯರಾದ ಐ.ಎಸ್.ಮಲ್ಲಿಕಾರ್ಜುನ್, ಬಿ.ಪಿ. ವಾಗೀಶ್, ಗ್ರಾ.ಪಂ. ಎಸ್‌ಡಿಎ ಯಶೋಧ, ಗ್ರಂಥಾಲಯದ ಮೇಲ್ವಿಚಾರಕ ಎಸ್.ಎಫ್.ಗಣೇಶ್ ಈ ವೇಳೆ ಹಾಜರಿದ್ದರು.

# ಮಲೇಬೆನ್ನೂರಿನಲ್ಲಿ ರಕ್ತದಾನ ಶಿಬಿರ



ಮಲೇಬೆನ್ನೂರು, ಡಿ.15- ಇಲ್ಲಿನ ಸುನ್ನಿ ಜಾಮೀಯಾ ಶಾದಿ ಮಹಲ್‌ನಲ್ಲಿ ಶುಕ್ರವಾರ ಭಾರತೀಯ ರೆಡ್ ಕ್ರಾಸ್ ಸಂಸ್ಥೆ (ದಾವಣಗೆರೆ) ಹಾಗೂ ಹೆಚ್‌ಡಿಎಫ್‌ಸಿ ಬ್ಯಾಂಕ್ (ದಾವಣಗೆರೆ) ಮತ್ತು ಬೈತ್ ಉಲ್ ಮಾಲ್ ಲೈಫ್‌ಲೈನ್ ಇಮದಾದ್ (ಮಲೇಬೆನ್ನೂರು) ಇವರುಗಳ ಸಂಯುಕ್ತಾಶ್ರಯದಲ್ಲಿ ರಕ್ತದಾನ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಈ ವೇಳೆ 50ಕ್ಕೂ ಹೆಚ್ಚು ಯುವಕರು ರಕ್ತದಾನ ಮಾಡಿ ಮಾನವೀಯತೆ ಮೆರೆದರು. ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ದಾವಣಗೆರೆ ನಿರ್ದೇಶಕರಾದ ಮೊಹಮದ್ ಇನಾಯತ್‌ವುಲ್ಲಾ, ಡಿ.ಎನ್.ಶಿವಾನಂದ್, ಬೈತ್ ಉಲ್‌ಮಾಲ್ ಲೈಫ್ ಲೈನ್ ಇಮದಾದ್ ಸಂಸ್ಥೆಯ ಎಂ.ಬಿ.ದಾದಾಪೀರ್, ಸೈಯದ್ ಸೈಫುಲ್ಲಾ, ಹಜರತ್ ಅಲಿ, ಮುಸ್ತಾಫ್ ದೊಡ್ಡಮನಿ, ಮುಬಾರಕ್ ಖಾನ್, ಜಫರುಲ್ಲಾ, ವೈದ್ಯಾಧಿಕಾರಿ ಡಾ. ಪಿ.ಕೆ.ಬಸವರಾಜ್, ಆಪ್ತ ಸಮಾಲೋಚಕರಾದ ಎನ್.ಜಿ.ಶಿವಕುಮಾರ್, ಆರ್.ವಿನಾಯಕ, ಕೆ.ಗಿರೀಶ್, ಜ್ಯೋತಿ, ಪದ್ಮ ಹೆಚ್‌ಡಿಎಫ್‌ಸಿ ಬ್ಯಾಂಕಿನ ರಾಘವೇಂದ್ರ ವರ್ಣೇಕರ್ ಈ ವೇಳೆ ಹಾಜರಿದ್ದರು.

# ಹೋರಾಟ ರಾಜ್ಯ ಸಾರಿಗೆಗೆ ಗೆಲುವು

**(1ನೇ ಪುಟದಿಂದ)** ಎಂಬ ಹೆಸರು ಬಳಸಲು ಯಾವುದೇ ಕಾನೂನು ನಿರ್ಬಂಧವಿಲ್ಲ ಎಂದು ಹೇಳಿದೆ. ಕೆ.ಎಸ್.ಆರ್.ಟಿ.ಸಿ. ಎಂಬ ಹೆಸರು ತನಗಷ್ಟೇ ಇರಬೇಕು ಎಂದು ಕೇರಳ ಸಾರಿಗೆ ಸಂಸ್ಥೆ ದಾಖಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ತಳ್ಳಿ ಹಾಕಿದೆ.

ಕರ್ನಾಟಕ ಸಾರಿಗೆ ಸಂಸ್ಥೆಯು 42 ವರ್ಷಗಳಿಂದ ಈ ಹೆಸರು ಬಳಸುತ್ತಿದೆ. ಇದು ಕೇರಳ ಸಾರಿಗೆ ಸಂಸ್ಥೆಗೂ ತಿಳಿದಿದೆ. ಈಗ ಕೆ.ಎಸ್.ಆರ್.ಟಿ.ಸಿ. ಬಳಸುವಂತಿಲ್ಲ ಎಂದು ಹೇಳಲಾಗದು ಎಂದು ಹೈಕೋರ್ಟ್ ತಿಳಿಸಿದೆ.


**ವಿದ್ಯಾನಗರ ದಾಟಿ ಹೊಸ ಬನಶಂಕರಿ ಲೇಔಟ್‌ನಲ್ಲಿ ಸೈಟುಗಳು ಮಾರಾಟಕ್ಕಿವೆ**
30x40, 30x40 West ಅಕ್ಕ-ಪಕ್ಕ, 40 ಅಡಿ ರೋಡಿಗಿದೆ. 30x50 West, 40x60 Corner, 40x60 West.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟ್ ಮಾರಾಟಕ್ಕೆ (KHB)**
ತುಂಗಭದ್ರಾ ಬಡಾವಣೆ ಬೈಪಾಸ್
40x60 ದಕ್ಷಿಣ 40 ಅಡಿ ರಸ್ತೆಗೆ (70 ಲಕ್ಷ) 30x40 ದಕ್ಷಿಣ (35 ಲಕ್ಷ) 20x30 ಪೂರ್ವ (16 ಲಕ್ಷ)
ಕಿರಣ್ ಭೂಸ್ನೂರ್ (ಏಜೆಂಟ್)
98440 63409, 97315 63409
ಮನೆ ಕಟ್ಟಲು ತುಂಬಾ ಚೆನ್ನಾಗಿದೆ

**ಸೈಟುಗಳು ಮಾರಾಟಕ್ಕಿವೆ**
ಪಿ.ಬಿ. ರೋಡಿಗೆ ಹತ್ತಿರ ಶನೇಶ್ವರ ದೇವಸ್ಥಾನ ಹಿಂಭಾಗದಲ್ಲಿ 30x50, 30x50 South, 40 ಅಡಿ ರೋಡಿಗಿದೆ, 30x40, 30x40 West ಅಕ್ಕ-ಪಕ್ಕ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬಾಡಿಗೆಗೆ ಇದೆ**
ಗ್ರೌಂಡ್ ಫ್ಲೋರ್ 30x50 ಹಾಲ್ ಆಫೀಸ್, ಕೋಚಿಂಗ್, ಬ್ಯಾಂಕ್, ಕೆಫೆಗೆ ಉಪಯೋಗಿಸಬಹುದು.
99725 77991, 91486 52424

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಮನೆ ಬಾಡಿಗೆಗೆ / ಲೀಸ್‌ಗೆ ಇವೆ**
ಸಿಂಗಲ್ ಬೆಡ್‌ರೂಮ್ ಡಬಲ್ ಬೆಡ್ ರೂಮ್ ಮನೆಗಳು ವಿದ್ಯಾನಗರ ತರಳಬಾಳು ಬಡಾವಣೆ, ಶಿವಕುಮಾರ ಸ್ವಾಮಿ ಬಡಾವಣೆ, ಆಂಜನೇಯ ಬಡಾವಣೆಯಲ್ಲಿ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಬಾಡಿಗೆಗೆ**
ಹಳೇ ಪಿ.ಬಿ. ರಸ್ತೆ, ಶ್ರೀಗಂಧ ಲಾಡ್ಜ್ ಪಕ್ಕದಲ್ಲಿ
1. ಮೊದಲನೇ ಮಹಡಿ - 4000 ಅಡಿ
2. ಎರಡನೇ ಮಹಡಿ - 4000 ಅಡಿ
3. Terrace Floor - 4000 ಅಡಿ
4. Basement - 4000 ಅಡಿ
ಸಂಪರ್ಕಿಸಿ : ಮೊ.
94480 28103

**ಈ ಕೆಲಸಕ್ಕೆ ವಿಚಾರಿಸಿ**
E- ಸ್ವತ್ತು, ಖಾತೆ ಬದಲಾವಣೆ, ಕಂದಾಯ ಕಟ್ಟುವುದು, ಕಳೆದಿರುವುದು, ಲೇಔಟ್ ಪ್ಲಾನ್, ಅಲಿನೇಷನ್ ಕಾಪಿ, ಕಳೆದಿರುವ ಸೈಟು, ಮನೆಯ ಹಳೆ ದಾಖಲೆ, ಬಿಲ್ಡಿಂಗ್ ಲೈಸೆನ್ಸ್, ಆಸ್ತಿಗಳ ನೋಂದಣಿ, ಕನ್‌ಸ್ಟ್ರಕ್ಷನ್‌ಗಳಿಗೆ, ಸೈಟುಗಳು ಜೋಡಣೆ & ವಿಂಗಡಿಸುವಿಕೆಗೆ ವಿಚಾರಿಸಿ :
ಕಿರಣ್ ಭೂಸ್ನೂರ್ (ಏಜೆಂಟ್)
98440 63409

**ಮನೆ ಬಾಡಿಗೆಗೆ ಇದೆ**
ಹೊಂಡದ ಸರ್ಕಲ್‌ನ ಖಂಡಪ್ಪನ ಗಲ್ಲಿಯಲ್ಲಿ 13x45 ಅಳತೆಯ ಒಂದನೇ ಮಹಡಿ ಮನೆ ಸೋಲಾರ್, ನೀರು ಸೌಲಭ್ಯವಿರುವ ಮನೆ ಬಾಡಿಗೆಗೆ ಇದೆ.
94480 47506

**ಹುಡುಗರು ಬೇಕಾಗಿದ್ದಾರೆ**
Xerox ಅಂಗಡಿಯಲ್ಲಿ ಕೆಲಸ ಮಾಡಲು ನಾಲ್ವರು ಹುಡುಗರು ಬೇಕಾಗಿದ್ದಾರೆ. ರಾಂ & ಕೋ ಸರ್ಕಲ್ ಹತ್ತಿರ, ಕಂಪ್ಯೂಟರ್ ಜ್ಞಾನವುಳ್ಳವರಿಗೆ ಆದ್ಯತೆ.
70221 58935

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟುಗಳು ಮಾರಾಟಕ್ಕಿವೆ**
50x80 East, Rate - 2800/-, 30x40 East, 30x50 West, 40x60 East, 40x60 North, 30x50 West, 60 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಜಮೀನುಗಳು ಮಾರಾಟಕ್ಕಿವೆ**
ಬುಳ್ಳಾಪುರ ಹತ್ತಿರ 2 ಎಕರೆ 12 ಗುಂಟೆ ಗದ್ದೆ ಮಾರಾಟಕ್ಕಿದೆ. 2.30 ಗುಂಟೆ ಲೋಕಿಕೆರೆ ರಸ್ತೆಗೆ ಹೊಂದಿಕೊಂಡಿರುವ ಜಮೀನು ಮಾರಾಟಕ್ಕಿದೆ. ಓಬಜ್ಜಿಹಳ್ಳಿ ಹತ್ತಿರ 2 ಎಕರೆ ಗದ್ದೆ ಮಾರಾಟಕ್ಕಿದೆ.
ಎಸ್. ಯಲ್ಲೋಜಿರಾವ್ ಏಜೆಂಟರು
97418 11694

**ಮನೆಗಳು ಮಾರಾಟಕ್ಕಿವೆ**
30x40 ಉತ್ತರ ಮನೆ ಡುಪ್ಲೆಕ್ಸ್ ಹೊಸಮನೆ ಮಾರಾಟಕ್ಕಿದೆ. 35x47 ಸೈಟ್ ಆಂಜನೇಯ ಬಡಾವಣೆ 44x60 ಎಂ.ಸಿ.ಸಿ. ಬಿ ಬ್ಲಾಕ್ 30x40 ಶಿರಮಗೊಂಡನಹಳ್ಳಿ ಹತ್ತಿರ. ಹರಿಹರ ಬೈಪಾಸ್ ಹತ್ತಿರ, 100x100 ಕಮರ್ಷಿಯಲ್ ಉತ್ತರ ಪಶ್ಚಿಮ ಸೈಟ್ ಮಾರಾಟಕ್ಕಿದೆ.
ಎಸ್. ಯಲ್ಲೋಜಿರಾವ್ ಏಜೆಂಟರು
97418 11694

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಸೈಟುಗಳು ಮಾರಾಟಕ್ಕಿವೆ**
1) ಡಾಲರ್ಸ್ ಕಾಲೋನಿ (40x51) ಪಶ್ಚಿಮ
2) ಕುಂದುವಾಡ ಸೈ. ನಂ. 44 (30x50) ಪಶ್ಚಿಮ, ನೈಋತ್ಯ ಮೂಲೆ
3) ಕುಂದುವಾಡ ಸೈಟ್ ನಂ. 43 (30x50) ಪಶ್ಚಿಮ (ಅಕ್ಕ-ಪಕ್ಕ)
97404 47907, 95359 04911

**ಹೈವೇ ಪಕ್ಕ ಸೈಟ್‌ಗಳು ಮಾರಾಟಕ್ಕಿವೆ**
USK ಲೇಔಟ್ ನಲ್ಲಿ 30x60 ಪೂರ್ವ ಮುಖದ ಪೆಟ್ರೋಲ್ ಬಂಕ್ ಹತ್ತಿರ ಹೊಸ ಲೇಔಟ್‌ನಲ್ಲಿ 30x40 ಉತ್ತರ ದಿಕ್ಕಿನ ಸೈಟುಗಳು. ಜೈನ್ ಲೇಔಟ್‌ನಲ್ಲಿ 30x40 ಪೂರ್ವ ದಿಕ್ಕಿನ ಜೋಡಿ ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ.
99029 9615, 98446 33119

**WANTED**
Boys & Girls required for billing work at
*Food Mart Supermarket*
Davangere.
Quli : Any Degree
Mob : 98864 63531

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆ ಸುತ್ತ-ಮುತ್ತ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ.
ಸಂಬಳ : 9000 ದಿಂದ 10,000 ರೂಪಾಯಿ.
ಊಟ, ವಸತಿ, ESI, PF ಸೌಲಭ್ಯವಿರುತ್ತದೆ.
ಜಿ.ಎಸ್. ಸೆಕ್ಯೂರಿಟಿ
89047 67479

**ತಕ್ಷಣ ಬೇಕಾಗಿದ್ದಾರೆ**
ನುರಿತ ಹಾಗೂ ಅನುಭವವುಳ್ಳ ಕಂಪ್ಯೂಟರ್ ಆಪರೇಟರ್ ಟ್ಯಾಲಿ ಬಿಲ್ಲಿಂಗ್‌ಗಾಗಿ ಬೇಕಾಗಿದ್ದಾರೆ. ಸಂಪರ್ಕಿಸಿ :
9448202879
99726 61122

**ಬೇಕರಿ - ಬಾಡಿಗೆಗಿದೆ**
ಬೇಕರಿ ಉತ್ಪನ್ನಗಳನ್ನು ಮಾಡುವ, ಕುಕ್ಕಿಂಗ್ ಮಷಿನ್, ಓವನ್, ಜನರೇಟರ್, ಹಿಟ್ಟು ಕಲಸುವ ಯಂತ್ರಗಳೊಂದಿಗೆ ಜಾಗ ಸಹಿತ ಬಾಡಿಗೆಗಿದೆ. ಸಂಪರ್ಕಿಸಿ :
94491-76944, 90084-94427

**ಬೇಕಾಗಿದ್ದಾರೆ**
ಕೆಲಸಕ್ಕೆ 20-25 ವರ್ಷ ವಯಸ್ಸಿನ ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ :
93805 83672

**ಸುಸಜ್ಜಿತ ಹೋಟೆಲ್ ಕೊಡುವುದಿದೆ/ಬಾಡಿಗೆಗಿದೆ**
ದಾವಣಗೆರೆಯ ಪ್ರತಿಷ್ಠಿತ ಬಡಾವಣೆಯಲ್ಲಿ ವೆಜ್ ಅಂಡ್ ನಾನ್ ವೆಜ್ ಹೋಟೆಲ್, ತಿಂಡಿ ತಿನಿಸುಗಳು, ಚಾಟ್ಸ್, ಕೆಫೆ ತಕ್ಷಣ ನಡೆಸಿಕೊಂಡು ಹೋಗಲು ಎಲ್ಲಾ ಅನುಕೂಲತೆಯುಳ್ಳ ಹೋಟೆಲ್ ಮಾರಾಟಕ್ಕಿದೆ (ಕಟ್ಟಡ ಹೊರತುಪಡಿಸಿ)/ಬಾಡಿಗೆಗಿದೆ. ಸಂಪರ್ಕಿಸಿ:
77600 05504 / 99864 45843
What's app : 8105676876

**ಡ್ರೈವರ್ ಗಳು ಬೇಕಾಗಿದ್ದಾರೆ**
ನಗರದ ಪ್ರತಿಷ್ಠಿತ ಶಾಲೆಗೆ ಅನುಭವವುಳ್ಳ ಡ್ರೈವರ್‌ಗಳು, ಅಟೆಂಡರ್ ಹಾಗೂ ಆಯಾ ಬೇಕಾಗಿದ್ದಾರೆ.
98444-33059

**COSDERM HAIR & SKIN CARE WELLNESS CENTRE DAVANAGERE**
**URGENTLY STAFF REQUIRED**
Counsellor, Marketing manager, Nurse's, Therapist (Male, Female), House keeping (Male, Female), Dietitian
for more information
76192-57443, 81975-72499

**ಬೋರ್‌ವೆಲ್ ಪಾಯಿಂಟ್**
ಅಂತರ್ಜಲ ಸಂಶೋಧನೆ (Ground Water)
ಬೋರ್‌ವೆಲ್ ಪಾಯಿಂಟ್‌ಗಾಗಿ
ಸಂಪರ್ಕಿಸಿ
ಎಂ.ಟಿ. ಬಸವರಾಜು ಎಂ.ಎಸ್ಸಿ
ಭೂ ವಿಜ್ಞಾನಿಗಳು
94492 02888, 86608 03384

**ನೇರ ಪರೀಕ್ಷೆ ಕಟ್ಟಲು/ರೆಗ್ಯುಲರ್ ಪ್ರವೇಶಕ್ಕಾಗಿ**
**SSLC ನೇರ ಪರೀಕ್ಷೆ**
IInd PUC/Senior Secondary, Arts/Commerce/Science
B.Sc.-Agriculture, B.Tech All branches, D.Pharma, B.Ed., PhD regular
B.A., B.com., B.Sc., M.A., M.Com., MBA, MLIB, Correspondence.
ಆಸಕ್ತರು ಪೋಟೋ-8, ಆಧಾರ್ ಕಾರ್ಡ್ ಹಾಗೂ ಮಾರ್ಕ್ಸ್ ಕಾರ್ಡ್‌ನೊಂದಿಗೆ ಸಂಪರ್ಕಿಸಿರಿ.
SS Global Institute for Higher Education
1982-1ನೇ ಮಹಡಿ, ಅನ್ವಯ ಆಯುರ್ವೇದಿಕ್ ಆಸ್ಪತ್ರೆ, ಶ್ರೀ ಸಾಯಿಬಾಬಾ ದೇವಸ್ಥಾನ ಹತ್ತಿರ, ಎಂಸಿಸಿ 'ಎ' ಬ್ಲಾಕ್, ದಾವಣಗೆರೆ-04.
72593 59861/99863 45266

**ಹೊಸ ಮನೆ ಮಾರಾಟಕ್ಕಿದೆ**
ಮಹಾಲಕ್ಷ್ಮಿ ಬಡಾವಣೆ, ಶಿವಗಂಗಾ ಕಲ್ಯಾಣ ಮಂಟಪದ ಹತ್ತಿರ 30x50 ಸೈಟ್‌ನಲ್ಲಿ ಪಶ್ಚಿಮ ದಿಕ್ಕಿನ 2 ಬೆಡ್ ರೂಂನ ಹೊಸ ಮನೆ ಮಾರಾಟಕ್ಕೆ ಇದೆ.
98448 82366

**FLAT FOR LEASE**
2 BHK, North facing
1325 Sq.ft.
Address : AM Apartment, Nainika Prime Rose, Vidyanagar City Bus Last Stop, Davanagere.
89519 38228

**ಬಾಡಿಗೆಗೆ ಇದೆ**
2 BHK ಮತ್ತು 3 BHK ಮನೆ ಅಥವಾ ಆಫೀಸ್‌ಗೆ ಯೋಗ್ಯವಾಗದವು ಹಾಗೂ ಮಳಿಗೆ ಮುನ್ಸಿಪಲ್ ನೀರಿನ ಸೌಕರ್ಯವಿರುತ್ತದೆ.
#319, ಪೆವಿಲಿಯನ್ ರಸ್ತೆ, ಸ್ಟೇಡಿಯಂ ಹತ್ತಿರ, ಪಿ.ಜೆ. ಬಡಾವಣೆ
(ಡಾ. ಪ್ರೇಮಲೀಲಾ ಹಿರೇಮಠ, ಅವರ ಮನೆ)
63625 57966

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ.
Sales Girls needed for inner wear store women's paradise, AVK College Road, Davanagere.
96204 53208

**ಅಕೌಂಟೆಂಟ್ ಬೇಕಾಗಿದ್ದಾರೆ**
ಐಗೂರಿನಲ್ಲಿರುವ ಫ್ಯಾಕ್ಟರಿಗೆ ಬಿ.ಕಾಮ್ ಆಗಿರುವ ಅನುಭವವುಳ್ಳ ಅಕೌಂಟೆಂಟ್ ಬೇಕಾಗಿದ್ದಾರೆ. ಆಕರ್ಷಕ ವೇತನ ನೀಡಲಾಗುವುದು.
99860-35969

**ಬೇಕಾಗಿದ್ದಾರೆ**
ಆಫೀಸ್ ಮ್ಯಾನೇಜ್ ಮೆಂಟ್ ಮತ್ತು ಕಂಪ್ಯೂಟರ್ ಬಿಲ್ಲಿಂಗ್‌ಗೆ ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ PUC ಅಥವಾ Degree. ಸಂಪರ್ಕಿಸಿ :
99027 71879

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**Reputed Footware Company showroom**
Requires Sales Executuve-1 Post.
Qual : SSLC/PUC
LIBERTY SHOES LTD.,
Opp. SS mall, Shamanur Road, Davangere.
99019 44554, 98801 56060

**ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
ಜನತಾ ಖಾದಿ ಭಂಡಾರ,
ಮಹಿಳಾ ಸಮಾಜ ಕಾಂಪ್ಲೆಕ್ಸ್,
ಅಶೋಕ ರೋಡ್, ದಾವಣಗೆರೆ.

**WANTED**
Receptionist
Photographer
LEWA MAKEUP STUDIO AND ACADEMY
78924 68118

**COSDARM HAIR & SKIN CARE INSTITUTE**
ಉಚಿತ ಉಚಿತ ಉಚಿತ
ಸೌಂದರ್ಯ ಮತ್ತು ಕೂದಲು ರಕ್ಷಣೆ ತರಗತಿಗಳು
ಪ್ರವೇಶ ತೆರೆಯಲಾಗಿದೆ
ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
76192 57443
81975 72499 C/A

**WANTED**
Marketing Executives any degree, fresher/ Experienced. Contact :
VAHIN GROUPS DAVANGERE.
93805 83672

**SMART CITY CABS DAVANAGERE**
Minimum 4km Rs - 99/-
Above per km Rs - 25/-
waiting charges per hours Rs - 100/- and 24 service will be available.
Ph : 08192 255555
94811 79933, 99868 18205

**3 BHK FOR RENT**
Ground Floor
#1926 A/3, Taralabalu Ext. Vidyanagar, 1st Bus Stop behind Opp. Coffee Day. Davanagere.
99019 03072

**ಶಕೀರಾ ಬ್ಯೂಟಿ ಪಾರ್ಲರ್/ಸಲೂನ್**
**Shakeera Beauty Parlour/Salon**
ಕೆಲಸಕ್ಕೆ ಬೇಕಾಗಿದ್ದಾರೆ
ಬ್ಯೂಟಿ ಪಾರ್ಲರ್‌ನಲ್ಲಿ ಕೆಲಸಕ್ಕಾಗಿ ಬೇಕಾಗಿದ್ದಾರೆ.
ಬ್ಯೂಟಿಷಿಯನ್ - 2, ಸಹಾಯಕರು - 2
ಸಂಪರ್ಕಿಸಿ : 93420 19013
#741/4, 10th Main, P.J. Extension Opposite Modi Compound, Davanagere-2.

**ಸ್ವಾಮಿ ಅಯ್ಯಪ್ಪ ಟ್ರಾವೆಲ್ಸ್**
ಕಾಶಿ ಪ್ರವಾಸ 09.02.2024 ರಿಂದ 19.02.2024ರವರೆಗೆ
ಕಾಶಿ, ಅಯೋಧ್ಯೆ, ಪ್ರಯಾಗರಾಜ್, ಆಗ್ರಾ, ಮಥುರಾ, ದೆಹಲಿ. ಕಾಶಿ ಪ್ರವಾಸಕ್ಕೆ ಕೇವಲ 20 ಸೀಟುಗಳು ಇವೆ. ಆಸಕ್ತಿಯುಳ್ಳವರು ವಿಚಾರಿಸಿ :
94485 33928, 90086 26473

**WANTED**
• Vendor,
• Cashier & Billing,
• Waiter
• Ladies for wash
98861 56688


**AVOID MOSQUITOES**
Mosquito Net For Doors & Windows
SRI GOWRI ENTERPRISES
# 7C2, 4th Cross, Near Shaneshwara Temple, Karur Industrial Area, P.B. Road, Davangere-6
72049 94628

**ಸೈಟ್, ಮನೆ, ಹೊಲ ಬೇಕಾದಲ್ಲಿ ಸಂಪರ್ಕಿಸಿ.**
ಸರ್ಕಾರಿ ನೌಕರರ ಬಡಾವಣೆಯ ಬಿ ಬ್ಲಾಕ್‌ನಲ್ಲಿ 30x50 ಪೂರ್ವ, 30x40 ಪೂರ್ವ, ಎಸ್.ಎಸ್. ಬಡಾವಣೆಯ ಬಿ ಬ್ಲಾಕ್‌ನಲ್ಲಿ 40x60 ದಕ್ಷಿಣ & 40x60 ಪೂರ್ವ, 40x60 ಪಶ್ಚಿಮ, ಶ್ರೀ ಸಾಮಾನ್ಯದಲ್ಲಿ 30x43 ಉತ್ತರ 40 ಅಡಿ ರಸ್ತೆಗೆ ಬೈಪಾಸ್ ಸರ್ವೀಸ್ ರಸ್ತೆಗೆ ಕುಬೇರ ಹೋಟೆಲ್ ಹತ್ತಿರ 30x55 ದಕ್ಷಿಣ (ಕಮರ್ಷಿಯಲ್) ಸೈಟ್ ಮಾರಾಟಕ್ಕೆ ಇದೆ. -
ಸಂಪರ್ಕಿಸಿ. ಸುರೇಶ್ ಪಿ.ಎಸ್. ಶಾಮನೂರು
84314 00907

**COMMERCIAL COMPLEX FOR RENT**
Ground Floor - 600 Sq.ft
First Floor 1700 Sq.ft
Second Floor 1700 Sq.ft
with lift facility in chetan Hotel Road, Davanagere.
79752 35107

**COMMERCIAL SPACE FOR RENT**
1200 sq. ft. 5 to 6 rooms with washroom at Saibaba Temple Road, MCC A block, Davangere. It can be used for Commercial purposes such as office, godown, educational institute, clinic, health club, etc.
9844259303, 9844859343, 9986946030

# 18 ರಂದು ಶ್ರೀ ವಿಶ್ವಬಂಧು ಮರುಳಸಿದ್ಧೇಶ್ವರ ದೇವಸ್ಥಾನದಲ್ಲಿ ಸಹಸ್ರ ದೀಪೋತ್ಸವ



ದಾವಣಗೆರೆ, ಡಿ. 15- ನಗರದ ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಸಮುದಾಯ ಭವನದ ಆವರಣದಲ್ಲಿರುವ ಶ್ರೀ ವಿಶ್ವಬಂಧು ಮರುಳಸಿದ್ದೇಶ್ವರ ದೇವಸ್ಥಾನದಲ್ಲಿ ಇದೇ ದಿನಾಂಕ 18 ರ ಸೋಮವಾರ ಸಂಜೆ 7.30ಕ್ಕೆ 16 ನೇ ವರ್ಷದ ಕಾರ್ತಿಕೋತ್ಸವದ ಪ್ರಯುಕ್ತ ಸಹಸ್ರ ದೀಪೋತ್ಸವ ಹಾಗೂ ಸಾಂಸ್ಕೃತಿಕ ವೈಭವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸಲಿದ್ದಾರೆ. ಅಂದು ಸಂಜೆ 6.30 ಕ್ಕೆ ತರಳಬಾಳು ಬಡಾವಣೆಯ ಶಿವಕುಮಾರಸ್ವಾಮಿ ಮಹಾಮಂಟಪದಲ್ಲಿರುವ ಶ್ರೀ ಮರುಳಸಿದ್ದೇಶ್ವರ ದೀಪೋತ್ಸವ ಕಾರ್ಯಕ್ರಮಕ್ಕೆ ಜಗದ್ಗುರುಗಳು ಚಾಲನೆ ನೀಡಲಿದ್ದಾರೆ.

ನಂತರ ಕಲ್ಯಾಣ ಮಂಟಪದಲ್ಲಿ ತರಳಬಾಳು ಪ್ರೌಢಶಾಲೆ, ಶ್ರೀ ಮಾಗನೂರು ಬಸಪ್ಪ ಪ್ರೌಢಶಾಲೆ, ಶ್ರೀ ಕೊಂಡಜ್ಜಿ ಬಸಪ್ಪ ಪ್ರೌಢಶಾಲೆ, ತರಳಬಾಳು ಆಂಗ್ಲ ಮಾಧ್ಯಮ ಪ್ರೌಢಶಾಲೆ (ಎಲೇಬೇತೂರು) ಮತ್ತು ಶ್ರೀ ತುಳಸಿ ಮಹಿಳಾ ಸಂಘ (ಸಿದ್ಧವೀರಪ್ಪ ಬಡಾವಣೆ) ಇವರಿಂದ ಸಾಂಸ್ಕೃತಿಕ ವೈಭವ ಕಾರ್ಯಕ್ರಮ ಏರ್ಪಡಿಸಲಾಗಿದೆ.

# ಅಸಂಘಟಿತ ಕಾರ್ಮಿಕರಿಗೆ ಇ-ಶ್ರಮ್ ಕಾರ್ಡ್ ವಿತರಣೆ



ದಾವಣಗೆರೆ,ಡಿ. 15 - ಕಾರ್ಮಿಕ ಇಲಾಖೆ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಕರ್ನಾಟಕ ರಾಜ್ಯ ಕಟ್ಟಡ ಕಟ್ಟುವ ಮತ್ತು ಕಲ್ಲು ಒಡೆಯುವ ಕಾರ್ಮಿಕರ ಸಂಘ ಹಾಗೂ ಎಐಟಿಯುಸಿ ಇವರ ಸಹಯೋಗದಲ್ಲಿ ಆವರಗೆರೆಯ ಪಿ. ಬಸವನಗೌಡ ಬಡಾವಣೆಯ ಸರ್ಕಾರಿ ಪ್ರಾಥಮಿಕ ಶಾಲೆ ಮುಂಭಾಗದಲ್ಲಿ ಕಾನೂನು ಅರಿವು ಕಾರ್ಯಕ್ರಮ ಹಾಗೂ ಅಸಂಘಟಿತ ಕಾರ್ಮಿಕರಿಗೆ ಇ-ಶ್ರಮ್ ಕಾರ್ಡ್ ವಿತರಣಾ ಕಾರ್ಯಕ್ರಮವನ್ನು ಇಂದು ಏರ್ಪಡಿಸಲಾಗಿತ್ತು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀಮತಿ ರಾಜೇಶ್ವರಿ ಎನ್. ಹೆಗಡೆ ಇವರು ಉದ್ಘಾಟನೆಯನ್ನು ನೆರವೇರಿಸಿ ಮಾತನಾಡುತ್ತಾ, ರಾಷ್ಟ್ರದ ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸಲು ಹಲವು ಕಾಯ್ದೆಗಳನ್ನು ಮತ್ತು ಯೋಜನೆಗಳನ್ನು ಜಾರಿಗೆ ತರಲಾಗಿದ್ದು, ಕಾರ್ಮಿಕರು ಸಂಘಟಿತರಾಗುವ ಮೂಲಕ ಅವುಗಳ ಪ್ರಯೋಜನಗಳನ್ನು ಪಡೆದುಕೊಳ್ಳಬೇಕೆಂದು ತಿಳಿಸಿದರು.

ಭಾರತದಲ್ಲಿ ಶೇ. 90ಕ್ಕೂ ಹೆಚ್ಚು ಕಾರ್ಮಿಕರು ಅಸಂಘಟಿತ ವಲಯದಲ್ಲಿ ಉದ್ಯೋಗಿಗಳಾಗಿದ್ದಾರೆ ಎಂದು ವರದಿಗಳು ತಿಳಿಸಿವೆ. ಕೃಷಿ ಕಾರ್ಮಿಕರು, ಕಟ್ಟಡ ಗುತ್ತಿಗೆದಾರರು, ಗೃಹ ಕೆಲಸ ಮತ್ತು ಸಣ್ಣ ಪ್ರಮಾಣದ ಉದ್ಯಮಗಳು ಸೇರಿದಂತೆ ವಿವಿಧ ಕೈಗಾರಿಕೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರನ್ನು ಈ ವರ್ಗಕ್ಕೆ ಸೇರಿಸಲಾಗಿದೆ ಎಂದರು. ಅಸಂಘಟಿತ ವಲಯಕ್ಕೆ ಯಾವುದೇ ಉದ್ಯೋಗ ಭದ್ರತೆ ಇಲ್ಲ ಮತ್ತು ಆರೋಗ್ಯ ವಿಮೆ ಪಿಂಚಣಿಗಳು, ಅಂಗವೈಕಲ್ಯದಂತಹ ಸಂದರ್ಭದಲ್ಲಿ ತೊಂದರೆಗೊಳಗಾಗುತ್ತಾರೆ. 2008ರ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆಯು ವಿವಿಧ ಸಾಮಾಜಿಕ ಭದ್ರತೆಗಳನ್ನು ಒದಗಿಸಿದೆ ಎಂದು ತಿಳಿಸಿದರು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮ. ಕರೆಣ್ಣವರ ಮಾತನಾಡುತ್ತಾ, ಕೃಷಿ ಕಾರ್ಮಿಕರು ಇ-ಶ್ರಮ್ ಕಾರ್ಡ್‌ಗಳನ್ನು ನೋಂದಣಿ ಮಾಡಿಸಿಕೊಳ್ಳುವ ಮೂಲಕ ಅದರ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳಬೇಕು, ದೇಶದ ಪ್ರಗತಿಗೆ ಅಸಂಘಟಿತ ಕಾರ್ಮಿಕರ ಶ್ರಮವೂ ಕಾರಣವಾಗಿದ್ದು, ಅವರ ಶ್ರಮಕ್ಕೆ ತಕ್ಕಂತೆ ಅವರಿಗೆ ಸೌಲಭ್ಯಗಳನ್ನು ಒದಗಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್. ಹೆಚ್. ಅರುಣ್‌ಕುಮಾರ್ ಮಾತನಾಡಿ, ಕಾರ್ಮಿಕ ಇಲಾಖೆಯು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಮತ್ತು ಕಾರ್ಮಿಕ ಸಂಘಟನೆಗಳ ಜೊತೆಗೂಡಿ ಜನರ ಮನೆ ಬಾಗಿಲಿಗೆ ಸರ್ಕಾರದ ಯೋಜನೆಗಳ ಬಗ್ಗೆ ಅರಿವನ್ನು ಮೂಡಿಸಿ ಅವರನ್ನು ನೋಂದಣಿ ಮಾಡಿಸಿ, ಫಲಾನುಭವಿಗಳಾಗಲು ಶ್ರಮಿಸುತ್ತಿರುವುದು ತುಂಬಾ ಶ್ಲಾಘನೀಯ ಕಾರ್ಯವೆಂದು ಪ್ರಶಂಸಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕರ್ನಾಟಕ ರಾಜ್ಯ ಕಟ್ಟಡ ಕಾರ್ಮಿಕ ಸಂಘದ ರಾಜ್ಯಾಧ್ಯಕ್ಷ ಹೆಚ್.ಜಿ. ಉಮೇಶ್ ಆವರಗೆರೆ ಅವರು ಕಾರ್ಮಿಕ ಸಂಘಟನೆಯು ಕಾರ್ಮಿಕ ಇಲಾಖೆಯ ಜೊತೆಗೂಡಿ ಅಸಂಘಟಿತ ಕಾರ್ಮಿಕರಿಗೆ ಇ-ಶ್ರಮ್ ಕಾರ್ಡ್ ವಿತರಣೆ ಮಾಡುತ್ತಿದೆ. ಆ ಮೂಲಕ ಸಮ ಸಮಾಜದ ಆಶಯವನ್ನು ಸಾಕಾರಗೊಳಿಸಲಾಗುತ್ತಿದೆ ಎಂದು ತಿಳಿಸಿದರು.

ಸಮಾರಂಭದಲ್ಲಿ ಜಿಲ್ಲಾ ವಕೀಲರ ಸಂಘದ ಸಹ ಕಾರ್ಯದರ್ಶಿ ಎ.ಎಸ್. ಮಂಜುನಾಥ್, ಮಾಜಿ ಮೇಯರ್ ಜಯಮ್ಮ ಗೋಪಿನಾಥ್, ಕರ್ನಾಟಕ ರಾಜ್ಯ ಕಟ್ಟಡ ಕಾರ್ಮಿಕ ಸಂಘಟನೆಯ ಜಿಲ್ಲಾಧ್ಯಕ್ಷ ಕಾಂ|| ವಿ. ಲಕ್ಷ್ಮಣ, ಜಿಲ್ಲಾ ಕಾರ್ಮಿಕ ಅಧಿಕಾರಿ ಇಬ್ರಾಹಿಂ ಸಾಬ್ ಮಾತನಾಡಿದರು.

ಸಮಾರಂಭದ ಅಧ್ಯಕ್ಷತೆಯನ್ನು ಬಳ್ಳಾರಿ ವಿಭಾಗದ ಸಹಾಯಕ ಕಾರ್ಮಿಕ ಆಯುಕ್ತರಾದ ವೀಣಾ ಎಸ್.ಆರ್. ವಹಿಸಿದ್ದರು. ಕಾರ್ಯಕ್ರಮದಲ್ಲಿ ಪಿ.ಬಿ. ಬಸವನಗೌಡ ಬಡಾವಣೆಯ ನಿವಾಸಿಗಳಾದ ಮಂಜುನಾಥ್, ವಕೀಲರಾದ ವಿಜಯಕುಮಾರ್ ಡಿ.ಎಸ್. ಮನೋಜ್ ಮತ್ತು ಸ್ಥಳೀಯ ಮುಖಂಡರು ಭಾಗವಹಿಸಿದ್ದರು.

## 19 ರಂದು ಕದಳಿ ವೇದಿಕೆ ಸಭೆ

ದಾವಣಗೆರೆ, ಡಿ. 15- ಕದಳಿ ಮಹಿಳಾ ವೇದಿಕೆಯಿಂದ ಇದೇ ದಿನಾಂಕ 19ರ ಮಂಗಳವಾರ ಬೆಳಿಗ್ಗೆ ನಡೆಯುವ 149ನೇ ಕಮ್ಮಟದಲ್ಲಿ ಸರ್ವ ಸದಸ್ಯರ ಸಾಮಾನ್ಯ ಸಭೆ, ದತ್ತಿ ಉಪನ್ಯಾಸ, ಶರಣ ಒಕ್ಕಲಿಗ ಮುದ್ದಣ್ಣ ಮತ್ತು ಶರಣ ಮಾದಾರ ಚೆನ್ನಯ್ಯ ಸ್ಮರಣೆ, ಗೌರವಾರ್ಪಣೆ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಶಾಮನೂರು ಶಿವಶಂಕರಪ್ಪ ಸಭಾಭವನದಲ್ಲಿ ಈ ಕಾರ್ಯಕ್ರಮ ನಡೆಯಲಿದ್ದು, ಕದಳಿ ಮಹಿಳಾ ವೇದಿಕೆಯ ಸಲಹಾ ಸಮಿತಿಯ ಸದಸ್ಯರಾದ ಶ್ರೀಮತಿ ಉಮಾ ವೀರಭದ್ರಪ್ಪ ಅವರು ಅಧ್ಯಕ್ಷತೆ ವಹಿಸಲಿದ್ದಾರೆ.

ಲಿಂ. ಪಟೇಲ್ ಜಿ. ಜಯಪ್ಪ ಮತ್ತು ಶ್ರೀಮತಿ ಸುಂದರಮ್ಮ ಜಯಪ್ಪ ಇವರ ದತ್ತಿ ಕಾರ್ಯಕ್ರಮ ನಡೆಯಲಿದೆ.

## ಸಾಸ್ವೇಹಳ್ಳಿಯಲ್ಲಿ ಇಂದು ಜನತಾದರ್ಶನ

ಮುಖ್ಯಮಂತ್ರಿಗಳ ಮಹತ್ವಾಕಾಂಕ್ಷೆಯ ಜನತಾ ದರ್ಶನ ಕಾರ್ಯಕ್ರಮ ಇಲ್ಲಿನ ನೀರಾವರಿ ಇಲಾಖೆಯ ಆವರಣದಲ್ಲಿ ಇಂದು ನಡೆಯಲಿದೆ ಎಂದು ತಹಶೀಲ್ದಾರ್ ಪಟ್ಟರಾಜೇಗೌಡ ತಿಳಿಸಿದ್ದಾರೆ. ಬೆಳಿಗ್ಗೆ 10-30ಕ್ಕೆ ಶಾಸಕ ಡಿ.ಜೆ.ಶಾಂತನಗೌಡ ಕಾರ್ಯಕ್ರಮದ ವೇದಿಕೆ ಉದ್ಘಾಟನೆ ಮಾಡಲಿದ್ದು, ಜಿಲ್ಲಾಧಿಕಾರಿ ಡಾ. ಎಂ.ವಿ.ವೆಂಕಟೇಶ್ ಸೇರಿದಂತೆ ಜಿಲ್ಲಾ ಹಂತದ ಎಲ್ಲಾ ಇಲಾಖೆಯ ಅಧಿಕಾರಿಗಳು ಹಾಗೂ ಹೊನ್ನಾಳಿ ತಾಲ್ಲೂಕು ಮಟ್ಟದ ಎಲ್ಲಾ ಇಲಾಖೆ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿರಲಿದ್ದಾರೆ.

## ಖೋ-ಖೋ ತಂಡಕ್ಕೆ ವಿದ್ಯಾರ್ಥಿ ವೇಣುಗೋಪಾಲ್



ದಾವಣಗೆರೆ, ಡಿ. 15 - ಇದೇ ದಿನಾಂಕ 26 ರಿಂದ 30ರವರೆಗೆ ಕೇರಳ ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ನಡೆಯಲಿರುವ ದಕ್ಷಿಣ ವಲಯ ಅಂತರ ವಿಶ್ವವಿದ್ಯಾನಿಲಯಗಳ ಖೋ-ಖೋ ಪಂದ್ಯಾವಳಿಗಳಲ್ಲಿ ಭಾಗವಹಿಸಲಿರುವ ದಾವಣಗೆರೆ ವಿಶ್ವವಿದ್ಯಾನಿಲಯದ ಖೋ-ಖೋ ತಂಡಕ್ಕೆ ಚಾಣಕ್ಯ ಪ್ರಥಮ ದರ್ಜೆ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ವಿದ್ಯಾರ್ಥಿ ಎಸ್. ವೇಣುಗೋಪಾಲ್ ಆಯ್ಕೆಯಾಗಿದ್ದಾರೆ.

## ರಾಣೇಬೆನ್ನೂರು ಗ್ರಾಮಾಂತರದಲ್ಲಿ ಇಂದು ವಿದ್ಯುತ್ ಇಲ್ಲ

ರಾಣೇಬೆನ್ನೂರು, ರಟ್ಟಿಹಳ್ಳಿ, ಹಿರೇಕೆರೂರು ಮತ್ತು ಬ್ಯಾಡಗಿ ತಾಲ್ಲೂಕಿನ ವ್ಯಾಪ್ತಿಗೆ ಬರುವ ಎಲ್ಲಾ ಪಂಪ್‌ಸೆಟ್ ಫೀಡರ್‌ಗಳಿಗೆ ಇಂದು ಬೆಳಿಗ್ಗೆ 11ರಿಂದ ಮಧ್ಯಾಹ್ನ 4 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

## ಕೃಷಿ ಸ್ವ-ಉದ್ಯೋಗ ಮಾಹಿತಿ



ಹರಪನಹಳ್ಳಿ

ಹರಪನಹಳ್ಳಿ, ಡಿ. 15 - ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯಿಂದ ಸಂಘದ ಸದಸ್ಯರಿಗೆ ಉಚ್ಚಂಗಿದುರ್ಗದ ಗುಡ್ಡದ ಮೇಲೆ ಕೃಷಿ ಹಾಗೂ ಸ್ವಉದ್ಯೋಗದ ಬಗ್ಗೆ ಮಾಹಿತಿಯನ್ನು ಸಂಸ್ಥೆಯ ಅಧಿಕಾರಿ ನೀಲಪ್ಪ ನೀಡಿದರು. ಈ ಸಂದರ್ಭದಲ್ಲಿ ಈ ಸಂಸ್ಥೆಯ ಕೃಷಿ ಮೇಲ್ವಿಚಾರಕ ಬಸವರಾಜ್, ಸೇವಾ ಪ್ರತಿನಿಧಿ ಮಂಜುಳಾ, ಸಂಘದ ಸದಸ್ಯರು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ವಿಜ್ಞಾನ ವಿಚಾರ ಸಂಕಿರಣ, ರಸಪ್ರಶ್ನೆ ಸ್ಪರ್ಧೆ

ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ವಿಜ್ಞಾನ ಪದವಿ ಪೂರ್ವ ಕಾಲೇಜಿನಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ ದಿ. ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಇವರ ಸ್ಮರಣಾರ್ಥ 15ನೇ ವಿಜ್ಞಾನ ವಿಚಾರ ಸಂಕಿರಣ ಹಾಗೂ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಗಣಿತ ಮತ್ತು ವಿಜ್ಞಾನ ರಸ ಪ್ರಶ್ನೆ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿದೆ.

ಕಾಲೇಜಿನ ಪ್ರಾಚಾರ್ಯ ಪ್ರೊ. ಎಂ.ಪಿ. ರುದ್ರಪ್ಪ ಅಧ್ಯಕ್ಷತೆಯಲ್ಲಿ ಜರುಗುವ ಕಾರ್ಯಕ್ರಮವನ್ನು ಬಾಪೂಜಿ ವಿದ್ಯಾಸಂಸ್ಥೆಯ ಆಡಳಿತ ಮತ್ತು ಶೈಕ್ಷಣಿಕ ನಿರ್ದೇಶಕ ಡಾ. ಎಂ.ಜಿ. ಈಶ್ವರಪ್ಪ ಉದ್ಘಾಟಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಇಸ್ರೋ ವಿಜ್ಞಾನಿ ಶಿವಕುಮಾರ್ ಎಸ್.ಪಾಟೀಲ್, ಬಾಪೂಜಿ ವಿದ್ಯಾಸಂಸ್ಥೆಯ ಖಜಾಂಚಿ ಎ.ಎಸ್. ನಿರಂಜನ, ಶಿಕ್ಷಕ ಎಂ.ಎನ್. ಶ್ರೀಧರ ಮಯ್ಯ ಪಾಲ್ಗೊಳ್ಳಲಿದ್ದು, ನಂತರ ಬೆಳಿಗ್ಗೆ 11 ರಿಂದ ವಿಚಾರ ಸಂಕಿರಣಗಳು ನಡೆಯಲಿವೆ.

## ಇಂದು ಡಾ. ಹೆಗಡೆ ಶಿಬಿರ

ದಾವಣಗೆರೆ, ಡಿ. 15- ಶಿರಸಿಯ ವೇದ ವೆಲ್ನೆಸ್ ಸೆಂಟರ್, ನಿಸರ್ಗ ಮನೆ ಮುಖ್ಯಸ್ಥ ಡಾ.ವೆಂಕಟ ರಮಣ ಹೆಗಡೆ ಶಿರಸಿ ಅವರು ನಾಳೆ ದಿನಾಂಕ 16 ರ ಶನಿವಾರ ಮತ್ತು 17ರ ಭಾನುವಾರ ಬೆಳಿಗ್ಗೆ 10 ರಿಂದ ಸಂಜೆ 6ರವರೆಗೆ ನಗರದ ಎಸ್.ಎಲ್.ಎನ್. ಕಾನ್ವೆಂಟ್‌ನಲ್ಲಿ ಉಚಿತ ಸಂದರ್ಶನ, ಮುಖತಃ ಭೇಟಿ ಮಾಡಲಿದ್ದಾರೆ.

ಅಲ್ಫಾ ನ್ಯಾಚುರಲ್ ಆಹಾರ ಔಷಧಿಗಳೂ ಶಿಬಿರದಲ್ಲಿ ಲಭ್ಯವಿವೆ. ವಿವರಕ್ಕೆ ಸಂಪರ್ಕಿಸಿ : 8073320479, 8970822508.

## ನಾಡಿದ್ದು ಈಶ್ವರ-ವಿನಾಯಕ ದೇವಸ್ಥಾನದ ಕಾರ್ತಿಕೋತ್ಸವ

ದಾವಣಗೆರೆ, ಡಿ.15- ಶಿವಕುಮಾರ ಸ್ವಾಮಿ ಬಡಾವಣೆಯ ಈಶ್ವರ ವಿನಾಯಕ ಟ್ರಸ್ಟ್‌ನ ಕಾರ್ತಿಕೋತ್ಸವದ ಪ್ರಯುಕ್ತ ಸಹಸ್ರ ದೀಪೋತ್ಸವ ಇದೇ ದಿನಾಂಕ 18 ರ ಸೋಮವಾರ ನಡೆಯಲಿದೆ.

## ಕದರಮಂಡಲಗಿಯಲ್ಲಿ ಇಂದು ಕಾರ್ತಿಕೋತ್ಸವ

ರಾಣೇಬೆನ್ನೂರು ತಾಲ್ಲೂಕಿನ ಸುಕ್ಷೇತ್ರ ಕದರಮಂಡಲಗಿ ಶ್ರೀ ಆಂಜನೇಯ (ಕಾಂತೇಶ) ಸ್ವಾಮಿಯ ಮಹಾಕಾರ್ತಿಕೋತ್ಸವ ಇಂದು ರಾತ್ರಿ 8.30 ಕ್ಕೆ ಪ್ರಾರಂಭವಾಗಲಿದೆ. ನಾಳೆ ಭಾನುವಾರ ರಾತ್ರಿ 10 .30 ಕ್ಕೆ ತೆಪ್ಪೋತ್ಸವ ನಡೆಯಲಿದೆ.

## ಕೊಮಾರನಹಳ್ಳಿಯಲ್ಲಿ ನಾಳೆ ಕನಕ ಜಯಂತಿ



ಮಲೇಬೆನ್ನೂರು, ಡಿ. 15- ಕೊಮಾರನಹಳ್ಳಿ ಗ್ರಾಮದಲ್ಲಿ ಕನಕ ಬ್ರಿಗೇಡ್ ವತಿಯಿಂದ ನಾಡಿದ್ದು ದಿನಾಂಕ 17ರ ಭಾನು ವಾರ ಸಂಜೆ 5 ಗಂಟೆಗೆ ದಾಸ ಶ್ರೇಷ್ಠ ಶ್ರೀ ಭಕ್ತ ಕನಕ ದಾಸರ 536ನೇ ಜಯಂತ್ಯೋತ್ಸವವನ್ನು ಹಮ್ಮಿಕೊಳ್ಳಲಾಗಿದೆ ಎಂದು ಗ್ರಾಮದ ಜಿ. ಸುನೀಲ್, ಯು. ಅಣ್ಣಪ್ಪ ತಿಳಿಸಿದ್ದಾರೆ.

## ನಗರದಲ್ಲಿ 18ರಿಂದ ಸಂತೋಷದ ಕಾರ್ಯಾಗಾರ



ದಾವಣಗೆರೆ, ಡಿ.15-ಗುರುದೇವ ಶ್ರೀ ರವಿಶಂಕರ್ ಅವರ ಆರ್ಟ್ ಆಫ್ ಲಿವಿಂಗ್ ಆಶ್ರಯದಲ್ಲಿ 18 ವರ್ಷ ಮೇಲ್ಪಟ್ಟವರಿಗೆ ಸಂತೋಷದ ಕಾರ್ಯಾಗಾರ (ಸುದರ್ಶನ ಕ್ರಿಯೆ) ಡಾ. ಬಾಣಾಪುರಮಠ ಮಕ್ಕಳ ಆಸ್ಪತ್ರೆಯ 2ನೇ ಮಹಡಿಯಲ್ಲಿ ಇದೇ ದಿನಾಂಕ 18ರಿಂದ 23ರವರೆಗೆ ಬೆಳಿಗ್ಗೆ ಮತ್ತು ಸಂಜೆ 2 ಬ್ಯಾಚುಗಳಲ್ಲಿ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ : 99005 01877, 77601 55659.

## ಪಾಕ್ : ಉಗ್ರರ ದಾಳಿಗಳಲ್ಲಿ ಐವರು ಪೊಲೀಸರ ಸಾವು

ಪೇಷಾವರ, ಡಿ. 15 – ಪಾಕಿಸ್ತಾನದ ವಾಯುವ್ಯ ಭಾಗದಲ್ಲಿರುವ ಪೊಲೀಸ್ ಪ್ರಾಂತೀಯ ಕೇಂದ್ರ ಕಚೇರಿ ಹಾಗೂ ಚೆಕ್ ಪೋಸ್ಟ್ ಮೇಲೆ ನಡೆಸಲಾದ ದಾಳಿಗಳಲ್ಲಿ ಐವರು ಪೊಲೀಸರು ಹತರಾಗಿದ್ದಾರೆ.

ಮೂರು ದಿನಗಳ ಹಿಂದಷ್ಟೇ ಇದೇ ಖೈಬರ್ ಪಖ್ತುಂಖ್ವ ಪ್ರಾಂತ್ಯದ ಮೇಲೆ ನಡೆಸಲಾದ ಉಗ್ರವಾದಿ ದಾಳಿಯಲ್ಲಿ 23 ಸೈನಿಕರು ಹತರಾಗಿದ್ದರು.

ಖೈಬರ್ ಪಖ್ತುಂಖ್ವದ ಟ್ಯಾಂಕ್ ಜಿಲ್ಲೆಯಲ್ಲಿ ನಡೆದ ಮೊದಲ ದಾಳಿಯಲ್ಲಿ ಮೂವರು ಪೊಲೀಸರು ಹತರಾಗಿದ್ದಾರೆ ಹಾಗೂ ಮೂವರು ಇತರರು ಗಾಯಗೊಂಡಿದ್ದಾರೆ. ಈ ದಾಳಿಯಲ್ಲಿ ಭಾಗಿಯಾಗಿದ್ದ ನಾಲ್ವರು ಉಗ್ರರನ್ನು ಹೊಡೆದುರುಳಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಇನ್ನೊಂದು ದಾಳಿಯಲ್ಲಿ ಪೊಲೀಸ್ ಹಾಗೂ ಭದ್ರತಾ ಪಡೆಗಳು ನಲ್ಲಾ ಬಾರಾ ತೆಹಸಿಲ್‌ನಲ್ಲಿ ಹೊಂದಿದ್ದ ಠಾಣೆಯ ಮೇಲೆ ದಾಳಿ ನಡೆಸಲಾಗಿದೆ. ಈ ದಾಳಿಯಲ್ಲಿ ಇಬ್ಬರು ಭದ್ರತಾ ಸಿಬ್ಬಂದಿ ಸಾವನ್ನಪ್ಪಿದ್ದಾರೆ ಮತ್ತು ಆರು ಜನ ಗಾಯಗೊಂಡಿದ್ದಾರೆ.

## ಉಳುಪಿನಕಟ್ಟೆಯಲ್ಲಿ ಇಂದು ರಾಷ್ಟ್ರೀಯ ವಿಜ್ಞಾನ ಸಮಾವೇಶ

ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್‌ನ ಜಿಲ್ಲಾ ಸಮಿತಿ, ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಇವರ ಸಂಯುಕ್ತಾಶ್ರಯದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಆನಗೋಡು ಬಳಿಯ ಉಳುಪಿನ ಕಟ್ಟೆಯ ಉಪಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ 31 ನೇ ಜಿಲ್ಲಾ ಮಟ್ಟದ ರಾಷ್ಟ್ರೀಯ ವಿಜ್ಞಾನ ಸಮಾವೇಶ ನಡೆಯಲಿದೆ.

ಜಿಲ್ಲಾಧಿಕಾರಿ ಡಾ.ವೆಂಕಟೇಶ್ ಎಂ.ವಿ ಕಾರ್ಯಕ್ರಮ ಉದ್ಘಾಟಿಸು ವರು. ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್‌ನ ಗೌರವಾಧ್ಯಕ್ಷ ಡಾ.ಜೆ.ಟಿ.ರಾಜ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ.ಇಟ್ನಾಳ್, ಬಿಐಇಟಿ ನಿರ್ದೇಶಕ ಪ್ರೊ.ವೈ.ವೃಷಭೇಂದ್ರಪ್ಪ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕ ಜಿ.ಕೊಟ್ರೇಶ್, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ವಿಜ್ಞಾನ ವಿಷಯ ಪರಿವೀಕ್ಷಕರಾದ ಆರ್.ಟಿ.ವಸಂತಕುಮಾರಿ, ಬಾಪೂಜಿ ಚೈಲ್ಡ್ ಹೆಲ್ತ್ ಇನ್‌ಸ್ಟಿಟ್ಯೂಟ್ ಮತ್ತು ರಿಸರ್ಚ್ ಸೆಂಟರ್‌ನ ಮಕ್ಕಳ ಮತ್ತು ನವಜಾತ ಶಿಶುಗಳ ತಜ್ಞೆ ಡಾ.ಮಾನಸ.ಕೆ.ಬಿ ಶಿವಮೊಗ್ಗದ ಆ್ಯಡ್ ಶಾಪ್ ಇ-ರಿಟೇಲ್ ರಾಘವೇಂದ್ರ.ಹೆಚ್ ಭಾಗವಹಿಸುವರು.

## ಮಲೇಬೆನ್ನೂರು ಸುತ್ತಮುತ್ತ ಇಂದು ವಿದ್ಯುತ್ ವ್ಯತ್ಯಯ

ಮಲೇಬೆನ್ನೂರು, ದೇವರಬೆಳಕೆರೆ, ಭಾನುವಳ್ಳಿ ಮತ್ತು ನಂದಿಗುಡಿ ವಿದ್ಯುತ್ ವಿತರಣಾ ಕೇಂದ್ರಗಳಿಗೆ ವಿದ್ಯುತ್ ಪೂರೈಸುವ ಮಾರ್ಗಗಳಲ್ಲಿ ತ್ರೈ-ಮಾಸಿಕ ನಿರ್ವಹಣೆ ಕೆಲಸ ಇರುವುದರಿಂದ ಇಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆವರೆಗೆ ಮಲೇಬೆನ್ನೂರು ಹೋಬಳಿ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಬೆಸ್ಕಾಂ ಅಧಿಕಾರಿಗಳು ತಿಳಿಸಿದ್ದಾರೆ.

## ನಾಳೆ ವಿಕರವೇಯಿಂದ ರಾಜ್ಯೋತ್ಸವ

ದಾವಣಗೆರೆ, ಡಿ. 15- ವಿಶ್ವ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ಇದೇ ದಿನಾಂಕ 17 ರ ಭಾನುವಾರ ಸಂಜೆ 6 ಗಂಟೆಗೆ ನಗರದ ಶಿವಯೋಗಾಶ್ರಮದ ಆವರಣದಲ್ಲಿ 68 ನೇ ಕನ್ನಡ ರಾಜ್ಯೋತ್ಸವ ಹಾಗೂ ಸುವರ್ಣ ಸಂಭ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ಸಂಘಟನಾ ಕಾರ್ಯದರ್ಶಿ ಸಂತೋಷ್ ದೊಡ್ಡಮನಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಶ್ರೀ ಬಸವಪ್ರಭು ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಕಾರ್ಯಕ್ರಮ ಉದ್ಘಾಟಿಸುವರು. ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಶಾಮನೂರು ಶಿವಶಂಕರಪ್ಪ ಅವರು ಭುವನೇಶ್ವರಿ ದೇವಿ ಭಾವಚಿತ್ರ ಅನಾವರಣ ಮಾಡಲಿದ್ದಾರೆ.

ಟೈಲರ್‌ಗಳಿಗೆ ಕಾರ್ಮಿಕ ಕಾರ್ಡುಗಳನ್ನು ವೀಣಾ ಅವರು ವಿತರಣೆ ಮಾಡಲಿದ್ದು, ವಿವಿಧ ಶಾಲೆಗಳ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ. ಹಾಸ್ಯ ಕಲಾವಿದ ಕೋಗಳಿ ಕೊಟ್ರೇಶ್ ಅವರಿಂದ ಹಾಸ್ಯ ಕಾರ್ಯಕ್ರಮ ಹಾಗೂ ಭಾರತಿ ವಾದ್ಯ ವೃಂದದವರಿಂದ ರಸ ಸಂಜೆ ಕಾರ್ಯಕ್ರಮ ನಡೆಯಲಿದೆ.

ಪತ್ರಿಕಾಗೋಷ್ಠಿಯಲ್ಲಿ ವೇದಿಕೆ ಪದಾಧಿಕಾರಿಗಳಾದ ಅಮ್ಜದ್ ಅಲಿ, ಎಂ. ರವಿ, ನಾಗರಾಜ್ ಗೌಡ, ಕೆ.ಹೆಚ್. ಮೆಹಬೂಬ್, ಬಾಬುರಾವ್, ದಯಾನಂದ್, ರಾಮಣ್ಣ ತೆಲಿಗಿ, ಸಿದ್ದೇಶ್, ಗಿರಿಧರ್, ಗಿರೀಶ್ ಮತ್ತಿತರರು ಉಪಸ್ಥಿತರಿದ್ದರು.

## ಕಿರಾಣಿ ಅಂಗಡಿ ಮೇಲೆ ದಾಳಿ : ಮದ್ಯ ವಶ



ಜಗಳೂರು, ಡಿ.15- ತಾಲ್ಲೂಕಿನ ಸಿದ್ದಮ್ಮನಹಳ್ಳಿ ಗ್ರಾಮದ ಮಂಜುನಾಥ್ ಎಂಬ ವ್ಯಕ್ತಿಗೆ ಸೇರಿದ ಕಿರಾಣಿ ಅಂಗಡಿ ಮೇಲೆ ಹರಿಹರ ವಲಯ ಹಾಗೂ ದಾವಣಗೆರೆ ವಲಯ 1 ಮತ್ತು 2ರ ಅಧಿಕಾರಿ ಹಾಗೂ ಸಿಬ್ಬಂದಿಗಳು ದಾಳಿ ನಡೆಸಿ ರೂ.10,110 ಮೌಲ್ಯದ ಅಕ್ರಮ ಮಾರಾಟದ ಮದ್ಯ ವಶಪಡಿಸಿಕೊಳ್ಳಲಾಗಿದೆ.

ಜಿಲ್ಲಾ ಅಬಕಾರಿ ಉಪಾಯುಕ್ತರ ನೇತೃತ್ವದಲ್ಲಿ ದಾಳಿ ನಡೆಸಲಾಗಿದ್ದು, ಒಂದು ಲೀಟರ್ ಸಾಮರ್ಥ್ಯದ 76 ನೀರಿನ ಬಾಟಲಿಗಳಲ್ಲಿ 76 ಲೀಟರ್ ಸೇಂದಿ, ಒರಿಜಿನಲ್ ಚಾಯ್ಸ್ ವಿಸ್ಕಿಯ 90 ಮಿಲಿಯ 48 ಟೆಟ್ರೋಪ್ಯಾಕೆಟ್ ಮತ್ತು 500 ಮಿಲಿಯ ಪವರ್ ಕೂಲ್ 6 ಟಿನ್‌ಗಳನ್ನು ಇಲಾಖೆ ವಶಕ್ಕೆ ಪಡೆದು ಆರೋಪಿಯಾದ ಮಂಜುನಾಥ್‌ನನ್ನು ನೋಟಿಸ್ ನೀಡಿ ಬಿಡುಗಡೆಗೊಳಿಸಲಾಗಿದೆ ಎಂದು ಜಿಲ್ಲಾ ಅಬಕಾರಿ ಉಪಾಯುಕ್ತರಾದ ಸ್ವಪ್ನ ಆರ್.ಎಸ್ ತಿಳಿಸಿದ್ದಾರೆ.

## ಪ್ರಾದೇಶಿಕ ತಾರತಮ್ಯ ನಿವಾರಣೆಗೆ ಶಾಸಕ ಕೋಳಿವಾಡ ಒತ್ತಾಯ



ರಾಣೇಬೆನ್ನೂರು, ಡಿ. 15 - ಬೆಂಗಳೂರು ಜಿಲ್ಲೆಯಲ್ಲಿ ಏಳು ಸಾವಿರ ಬೃಹತ್ ಕೈಗಾರಿಕೆಗಳಿವೆ. ಹಾವೇರಿ ಜಿಲ್ಲೆಯಲ್ಲಿ ಏಳು ಕೈಗಾರಿಕೆಗಳಿವೆ. ಈ ತಾರತಮ್ಯ ಹೋಗಲಾಡಿಸಬೇಕು. ಉತ್ತರ ಕರ್ನಾಟಕದ ಪ್ರತ್ಯೇಕ ಕೂಗು ಅಡಗಿಸಲು ಈ ಭಾಗದ ಎಲ್ಲಾ ಜಿಲ್ಲೆಗಳ ಅಭಿವೃದ್ಧಿಗೆ ಸರ್ಕಾರ ತೀವ್ರ ಗಮನಹರಿಸಬೇಕು ಎಂದು ಬೆಳಗಾವಿಯಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲಿ ಇಂದು ರಾಣೇಬೆನ್ನೂರು ಶಾಸಕ ಪ್ರಕಾಶ ಕೋಳಿವಾಡ ಸರ್ಕಾರಕ್ಕೆ ತೀವ್ರ ಒತ್ತಡ ಹೇರಿದರು.

ಕೈಗಾರಿಕೆ ಸ್ಥಾಪಿಸಲು ಅಗತ್ಯ ಸೌಕರ್ಯಗಳು ರಾಣೇಬೆನ್ನೂರಿನಲ್ಲಿವೆ. ಆ ದಿಶೆಯಲ್ಲಿ ಬಹಳಷ್ಟು ಕೈಗಾರಿಕೋದ್ಯಮಿಗಳನ್ನು ಸಂಪರ್ಕಿಸಿದ್ದೇನೆ. ನನ್ನ ಈ ಪ್ರಯತ್ನಕ್ಕೆ ಸರ್ಕಾರ ಸಾತ್ ನೀಡಬೇಕು. ಇಲ್ಲಿನ ಕೃಷ್ಣಮೃಗ ಅಭಯಾರಣ್ಯವನ್ನು ಅಭಿವೃದ್ಧಿ ಪಡಿಸಿ ಪ್ರವಾಸೋದ್ಯಮ ಬೆಳವಣಿಗೆಗಳು ಪ್ರೋತ್ಸಾಹ ನೀಡುವಂತೆ ಪ್ರಕಾಶ ಕೋಳಿವಾಡ ಸಭಾಪತಿಗಳ ಮೂಲಕ ಸರ್ಕಾರಕ್ಕೆ ಒತ್ತಾಯಿಸಿದರು.

## ರಾಣೇಬೆನ್ನೂರು : ನಗರಸಭೆ ವಾರ್ಡ್ 22ಕ್ಕೆ 6 ಅಭ್ಯರ್ಥಿಗಳ ನಾಮಪತ್ರ ಸಲ್ಲಿಕೆ

ರಾಣೇಬೆನ್ನೂರು, ಡಿ. 15 - ಸ್ಥಳೀಯ ನಗರಸಭೆ ವಾರ್ಡ್ 22ಕ್ಕೆ (ಹಿಂದುಳಿದ ಪ್ರವರ್ಗ 2ಎ ಮಹಿಳೆ ಮೀಸಲು) ಡಿ.27ರಂದು ನಡೆಯಲಿರುವ ಚುನಾವಣೆಯಲ್ಲಿ ಸ್ಪರ್ಧಿಸಲು ನಾಮಪತ್ರ ಸಲ್ಲಿಸಲು ಕೊನೆಯ ದಿನವಾದ ಶುಕ್ರವಾರ 6 ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ.


**ನಾಮಪತ್ರ ಸಲ್ಲಿಸಿದವರ ವಿವರ:** ತ್ರಿವೇಣಿ ನಾರಾಯಣಸಾ ಪವಾರ (ಭಾರತೀಯ ಜನತಾ ಪಕ್ಷ), ಸುರೇಖಾ ಅಣ್ಣಪ್ಪ ಕಂಬಳಿ, ಸುಧಾ ರಾಜು ಗೊಂದಕರ(ಕಾಂಗ್ರೆಸ್ ಪಕ್ಷ), ಸಂಗೀತಾ ಅಶೋಕ ಮಡಿವಾಳರ (ಜೆಡಿಎಸ್), ರೇಖಾ ಯುವರಾಜ ಬಾರಾಟಕ್ಕೆ, ಕವಿತಾ ಶ್ರೀನಿವಾಸ ಹುಟ್ಟಿ (ಪಕ್ಷೇತರ) ಚುನಾವಣಾ ಅಧಿಕಾರಿಗೆ ತಮ್ಮ ನಾಮಪತ್ರ ಸಲ್ಲಿಸಿದರು.


**JOB VACANCY**

**Work : Office work**
(System work 2D Auto Cadd Planning, Excel 3D Planning)
**Qualification :**
Diploma in Civil (or) B.E Civil
**Work Timing : 10 : 00 AM to 6 : 00 PM**
**Contact No : 81234 03512**

**ಮಳಿಗೆ ಬಾಡಿಗೆಗೆ ಇದೆ**

ಪಿ.ಜೆ. ಬಡಾವಣೆ, 4ನೇ ಮೇನ್, 4ನೇ ಕ್ರಾಸ್,
ರಾಂ ಅಂಡ್ ಕೋ ಸರ್ಕಲ್ ಹತ್ತಿರ,
**475** ಚದುರ ಅಡಿ ಇರುವ ಗ್ರೌಂಡ್ ಫ್ಲೋರ್ ಮತ್ತು
**475** ಚದುರ ಅಡಿ ಇರುವ ಮೊದಲನೇ ಮಹಡಿ
ಇರುವ ಹೊಸ ಕಟ್ಟಡದ ಮಳಿಗೆ ಬಾಡಿಗೆಗೆ ಇದೆ.
ಸಂಪರ್ಕಿಸಿ. 93434 99999




ದಿನಾಂಕ 16-12-2023ರ ಶನಿವಾರ ಸಂಜೆ 6 ಗಂಟೆಗೆ
ಸ್ಥಳ : ಶಿವಯೋಗಾಶ್ರಮ ಮಂದಿರ, ಜಯದೇವ ಸರ್ಕಲ್, ದಾವಣಗೆರೆ.

ಉದ್ಘಾಟನೆ : **ಡಾ. ಶಾಮನೂರು ಶಿವಶಂಕರಪ್ಪನವರು**
ಶಾಸಕರು, ದಾವಣಗೆರೆ ದಕ್ಷಿಣ, ಮಾಜಿ ಸಚಿವರು
ಅಥಿತಿ : **ಶ್ರೀ ಬಿ.ಸಿ. ಪಾಟೀಲ್,** ನಟ, ನಿರ್ಮಾಪಕ, ಮಾಜಿ ಸಚಿವರು
ಅಧ್ಯಕ್ಷತೆ : **ಶ್ರೀ ಸುರಭಿ ಶಿವಮೂರ್ತಿ,** ಅಧ್ಯಕ್ಷರು, ಸಿನಿಮಾ ಸಿರಿ, ದಾವಣಗೆರೆ.
✦ **ಡಾ|| ಬಿ.ಎಸ್. ನಾಗಪ್ರಕಾಶ್,** ಸಂಸ್ಥಾಪಕ ಅಧ್ಯಕ್ಷರು
✦ **ಟಿ.ಎಂ. ಪಂಚಾಕ್ಷರಯ್ಯ,** ನಿಕಟಪೂರ್ವ ಅಧ್ಯಕ್ಷರು
✦ **ಎಂ.ಜಿ. ಜಗದೀಶ್,** ಪ್ರಧಾನ ಕಾರ್ಯದರ್ಶಿ
✦ **ಹೆಚ್.ವಿ. ಮಂಜುನಾಥಸ್ವಾಮಿ,** ಖಜಾಂಚಿ
ಹಾಗೂ ಸರ್ವ ಸದಸ್ಯರು, ಸಿನಿಮಾ ಸಿರಿ, ದಾವಣಗೆರೆ.
ಗಾಯಕರು : ಎಂ.ಜಿ. ಜಗದೀಶ್, ಆರ್.ಟಿ. ಮೃತ್ಯುಂಜಯ, ಹೇಮಂತ್‌ಕುಮಾರ್, ಸಂಗೀತಾ ರಾಘವೇಂದ್ರ, ಕು|| ಶೋಭಾ, ನೇತ್ರಾ, ರುದ್ರಾಕ್ಷಿ ಬಾಯಿ
ಉಚಿತ ಪ್ರವೇಶ ಸರ್ವರಿಗೂ ಆದರದ ಸುಸ್ವಾಗತ
ಶುಭ ಕೋರುವವರು : **ಟಿ. ರುದ್ರೇಶ್,** ಮೊ. : 98865 62715
C/o. **ವಿಜಯ ಸ್ಟೀಲ್ ಸಪ್ಲೈಸ್,** #6 & 7,
ಪೂಜಾ ಹೋಟೆಲ್ ಎದುರು, ಪಿ.ಬಿ. ರಸ್ತೆ, ದಾವಣಗೆರೆ. ಮೊ. : 99000 56968




ದಾವಣಗೆರೆ ಜಿ|| ತಾ|| **ಬಾವಿಹಾಳ್** ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ
**ಶ್ರೀ ಕರಿಯಮ್ಮ ದೇವಿ ದೇವಸ್ಥಾನದ ಕಳಸಾರೋಹಣ ಮತ್ತು ಕುಂಭಮೇಳ ಕಾರ್ಯಕ್ರಮದ ಆಹ್ವಾನ ಪತ್ರಿಕೆ**
ದಿನಾಂಕ 17-12-2023ನೇ ಭಾನುವಾರ, ಸಮಯ : ಸಂಜೆ 3 ಗಂಟೆಗೆ
ಸ್ಥಳ : ಬಾವಿಹಾಳ್ ಗ್ರಾಮ, ದಾವಣಗೆರೆ ತಾ||, ಜಿ||.

ದಿವ್ಯ ಸಾನ್ನಿಧ್ಯ :
ಶ್ರೀ ಮದುಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ ಶ್ರೀ ತರಳಬಾಳು ಜಗದ್ಗುರು ಶ್ರೀ ಶ್ರೀ ಶ್ರೀ 1108 ಪರಮಪೂಜ್ಯ
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ, ಸಿರಿಗೆರೆ.

ಶ್ರೀ ಶ್ರೀಗಳವರ ಆಗಮನ : ಸಂಜೆ 3 ಗಂಟೆಗೆ
ಬಾವಿಹಾಳ್ ಗ್ರಾಮಸ್ಥರಿಂದ ಶ್ರೀಗಳಿಗೆ ಸ್ವಾಗತ.

ಮುಖ್ಯ ಅತಿಥಿಗಳು :
ಡಾ|| ಶಾಮನೂರು ಶಿವಶಂಕರಪ್ಪನವರು
ಶಾಸಕರು, (ವಿಧಾನಸಭೆ) ದಾವಣಗೆರೆ ದಕ್ಷಿಣ ವಲಯ.
ಶ್ರೀ ಎಸ್. ಎಸ್. ಮಲ್ಲಿಕಾರ್ಜುನ್‌ರವರು
ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು
ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರು
ಶ್ರೀ ಜಿ.ಎಂ. ಸಿದ್ದೇಶ್ವರರವರು, ಮಾನ್ಯ ಸಂಸದರು, ದಾವಣಗೆರೆ.
ಶ್ರೀ ಕೆ.ಎಸ್. ಬಸವಂತಪ್ಪ, ಶಾಸಕರು, (ವಿಧಾನಸಭೆ) ಮಾಯಕೊಂಡ ಕ್ಷೇತ್ರ.

ವಿಶೇಷ ಆಹ್ವಾನಿತರು :
ಶ್ರೀ ಬಸವರಾಜ ಶಿವಗಂಗಾ, ಶಾಸಕರು, (ವಿಧಾನಸಭೆ) ಚನ್ನಗಿರಿ ಕ್ಷೇತ್ರ.
ಶ್ರೀ ಬಿ.ಪಿ. ಹರೀಶ್, ಶಾಸಕರು, (ವಿಧಾನಸಭೆ) ಹರಿಹರ ಕ್ಷೇತ್ರ.
ಶ್ರೀ ಎಂ. ಚಂದ್ರಪ್ಪ, ಶಾಸಕರು, (ವಿಧಾನಸಭೆ) ಹೊಳಲ್ಕೆರೆ ಕ್ಷೇತ್ರ.
ಪ್ರೊ. ಲಿಂಗಣ್ಣ, ಮಾಜಿ ಶಾಸಕರು, ಮಾಯಕೊಂಡ
ಶ್ರೀ ಬಸವರಾಜನಾಯ್ಕ, ಮಾಜಿ ಶಾಸಕರು, ಮಾಯಕೊಂಡ.
ಶ್ರೀ ಎಂ.ಪಿ. ರೇಣುಕಾಚಾರ್ಯ, ಮಾಜಿ ಶಾಸಕರು, ಹೊನ್ನಾಳಿ.
ಶ್ರೀಮತಿ ಆಶಾ ನಾಗರಾಜ್, ಅಧ್ಯಕ್ಷರು, ಗ್ರಾಮ ಪಂಚಾಯಿತಿ, ನರಗನಹಳ್ಳಿ.
ಶ್ರೀ ಕಲ್ಲೇಶಪ್ಪನವರು, ಸದಸ್ಯರು, ಗ್ರಾಮ ಪಂಚಾಯಿತಿ, ಬಾವಿಹಾಳ್.
ಶ್ರೀಮತಿ ಮೀನಾಕ್ಷಮ್ಮ, ಸದಸ್ಯರು, ಗ್ರಾಮ ಪಂಚಾಯಿತಿ, ಬಾವಿಹಾಳ್.
ಶ್ರೀಮತಿ ಅಕ್ಕಮ್ಮ, ಸದಸ್ಯರು, ಗ್ರಾಮ ಪಂಚಾಯಿತಿ, ಬಾವಿಹಾಳ್.

ಸರ್ವರಿಗೂ ಆದರದ ಸುಸ್ವಾಗತ ಬಯಸುವವರು :
ಶ್ರೀ ಕರಿಯಮ್ಮದೇವಿ ದೇವಸ್ಥಾನ ಸಮಿತಿ ಹಾಗೂ ಬಾವಿಹಾಳ್ ಗ್ರಾಮಸ್ಥರು

# ನಗರದಲ್ಲಿ ಇಂದು ಸಂಗೀತ ಸಂಜೆ

ದಾವಣಗೆರೆ, ಡಿ.15- ಸಿನಿಮಾ ಸಿರಿ ಸಂಸ್ಥೆಯಿಂದ ನಗರದ ಶಿವಯೋಗಾಶ್ರಮ ಮಂದಿರದ ಆವರಣದಲ್ಲಿ ನಾಳೆ ದಿನಾಂಕ 16ರ ಸಂಜೆ 6 ಗಂಟೆಗೆ ಜೊತೆ-ಜೊತೆಯಲಿ ಹೆಸರಿನಲ್ಲಿ ಸುಮಧುರ ಸಂಗೀತ ಸಂಜೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಿನಿಮಾ ಸಿರಿ ಅಧ್ಯಕ್ಷ ಸುರಭಿ ಶಿವಮೂರ್ತಿ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿನಿಮಾ ಸಿರಿ ಸಂಸ್ಥೆಯ 25ನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ಹಾಗೂ ಕರ್ನಾಟಕ ಸುವರ್ಣ ಸಂಭ್ರಮ ಆಚರಣೆಯ ಪ್ರಯುಕ್ತ ನಟರಾದ ದಿ. ಶಂಕರ್ ನಾಗ್ ಹಾಗೂ ಅನಂತನಾಗ್ ಸಹೋದರರ ಚಲನ ಚಿತ್ರಗಳ ಸುಮಧುರ ಹಾಡು ಗಳನ್ನು ಪ್ರಸ್ತುತ ಪಡಿಸಲಾಗುವುದು ಎಂದು ಹೇಳಿದರು.

ಕಾರ್ಯಕ್ರಮದ ಉದ್ಘಾಟನೆಯನ್ನು ಶಾಸಕ ಶಾಮನೂರು ಶಿವಶಂಕರಪ್ಪ ನೆರವೇರಿಸುವರು. ಮುಖ್ಯ ಅತಿಥಿಗಳಾಗಿ ನಟ ಹಾಗೂ ಮಾಜಿ ಸಚಿವ ಬಿ.ಸಿ. ಪಾಟೀಲ್ ಆಗಮಿಸಲಿದ್ದಾರೆ. ಸಿನಿಮಾ ಸಿರಿ ಸಂಸ್ಥೆಯಿಂದ ಇಲ್ಲಿಯವ ರೆಗೂ ಸುಮಾರು 49 ಕಾರ್ಯಕ್ರಮ ಗಳನ್ನು ಆಯೋಜಿಸಲಾಗಿದೆ. ಇದೇ ವೇಳೆ ಸ್ಥಳೀಯ ಕಲಾವಿದರಾದ ಎಂ.ಜಿ. ಜಗದೀಶ್, ಆರ್.ಟಿ. ಮೃತ್ಯುಂಜಯ, ಹೇಮಂತ್ ಕುಮಾರ್, ಸಂಗೀತಾ ರಾಘವೇಂದ್ರ, ಶೋಭಾ, ನೇತ್ರಾ, ರುದ್ರಾಕ್ಷಿಬಾಯಿ ಅವರುಗಳು ಸುಮಾರು 25 ಚಿತ್ರಗೀತೆಗಳನ್ನು ಹಾಡಲಿದ್ದಾರೆ. ಕಾಲಾನುಕ್ರಮದಲ್ಲಿ ಕಳೆದ ವಾರ ನಿಧನರಾದ ಹಿರಿಯ ನಟಿ ದಿ. ಲೀಲಾವತಿಯವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಸಾಲಿಗ್ರಾಮ ಗಣೇಶ ಶೆಣೈ, ಎಂ.ಜಿ. ಜಗದೀಶ್, ಹೆಚ್.ವಿ. ಮಂಜುನಾಥಸ್ವಾಮಿ, ಕಣಕುಪ್ಪಿ ಮುರುಗೇಶ್, ರುದ್ರೇಶ್, ಡಾ. ನಾಗಪ್ರಕಾಶ್ ಮತ್ತಿತರಿದ್ದರು.



### ಶಂಕರ್‌ನಾಗ್ ಸ್ಮಾರಕಕ್ಕೆ ಪ್ರಯತ್ನ

ಕನ್ನಡ ನಾಡು ಕಂಡ ಅದ್ಭುತ ನಟ, ನಿರ್ದೇಶಕ ಶಂಕರ್ ನಾಗ್ ಅವರು ದಾವಣಗೆರೆ ಸಮೀಪದ ಆನಗೋಡಿನಲ್ಲಿ ನಡೆದ ರಸ್ತೆ ಅಪಘಾತದಲ್ಲಿ ನಿಧನರಾಗಿದ್ದರು. ಅವರ ಸ್ಮರಣಾರ್ಥ ಆನಗೋಡಿನಲ್ಲಿ ಶಂಕರ್ ನಾಗ್ ಸ್ಮಾರಕ ನಿರ್ಮಾಣಕ್ಕೆ ಸಿನಿಮಾ ಸಿರಿಯಿಂದ ಪ್ರಯತ್ನಿಸಲಾಗುವುದು ಎಂದು ಸುರಭಿ ಶಿವಮೂರ್ತಿ ಹೇಳಿದರು.

## ವಿನಯ್‌ಕುಮಾರ್‌ಗೆ ಎಸ್ಸೆಸ್ ಆಶೀರ್ವಾದ



ದಾವಣಗೆರೆ, ಡಿ. 15- ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರನ್ನು ಇನ್‌ಸೈಟ್ಸ್ ಐಎಎಸ್ ಸಂಸ್ಥೆಯ ಸಂಸ್ಥಾಪಕರೂ, ಕಾಂಗ್ರೆಸ್ ಯುವ ಮುಖಂಡರೂ ಆದ ಜಿ.ಬಿ. ವಿನಯ್ ಕುಮಾರ್ ಅವರು ಭೇಟಿ ಮಾಡಿ ಆಶೀರ್ವಾದ ಪಡೆದರು. ಇದೇ ವೇಳೆ ಎಸ್ಸೆಸ್ ಅವರನ್ನು ಗೌರವಿಸಿದ ಸಂದರ್ಭ.

# ಹಿಮೋಫಿಲಿಯಾಕ್ಕೆ ಮುಂದುವರೆದ ರಾಷ್ಟ್ರಗಳಲ್ಲಿ ದೊರೆಯುವ ಚಿಕಿತ್ಸೆ ನಮ್ಮಲ್ಲೂ ಸಿಗುವಂತಾಗಬೇಕು

ದಾವಣಗೆರೆ, ಡಿ.15- ಹಿಮೋಫಿಲಿಯಾ ಕಾಯಿಲೆಗೆ ಮುಂದುರೆದ ರಾಷ್ಟ್ರಗಳಲ್ಲಿ ಸಿಗುತ್ತಿರುವ ಔಷಧೋಪಚಾರ ನಮ್ಮ ದೇಶದಲ್ಲಿಯೂ ದೊರೆಯುವಂತಾಗಬೇಕು ಎಂದು ಹಿಮೋ ಫಿಲಿಯಾ ಪೀಡಿತ ವಿದ್ಯಾರ್ಥಿಗಳು ಹೇಳಿದರು.

ನಗರದ ಕರ್ನಾಟಕ ಹಿಮೋಫಿಲಿಯಾ ಸೊಸೈಟಿ ವತಿಯಿಂದ ಐದು ದಿನಗಳ ಕಾಲ ಹಮ್ಮಿಕೊಳ್ಳಲಾಗಿದ್ದ 'ಬ್ಲೂ ಬೆಲ್' ಹಿಮೋಫಿಲಿಯಾ ಯೂತ್ ಕ್ಯಾಂಪ್-2023ರ ಅಂಗವಾಗಿ ಶುಕ್ರವಾರ ಹಮ್ಮಿಕೊಳ್ಳಲಾಗಿದ್ದ 'ಮಾಧ್ಯಮದವರೊಂದಿಗೆ ಸಂವಾದ' ಕಾರ್ಯಕ್ರಮದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಹಿಮೋಫಿಲಿಯಾ ಪೀಡಿತ ವಿದ್ಯಾರ್ಥಿಗಳು ಪಾಲ್ಗೊಂಡು ಅನಿಸಿಕೆಗಳನ್ನು ಹಂಚಿಕೊಂಡರು.

'ಶಿಕ್ಷಕರು ಹೊಡೆಯಲು ಬಂದರೆ ನನಗೆ ಹಿಮೋಫಿಲಿಯಾ ಇದೆ. ಹೊಡೆಯ ಬೇಡಿ ಎಂದು ಸತ್ಯ ಹೇಳಿದರೆ ನನ್ನನ್ನು ಪ್ರತ್ಯೇಕಿಸಿ ನೋಡುತ್ತಾರೆ ಎಂಬ ಭಯ. ಇತ್ತ ಹೊಡೆತ ತಿಂದರೆ ರಕ್ತಸ್ರಾವದ ಭಯ' ಎಂದು ವಿದ್ಯಾರ್ಥಿಯೊಬ್ಬ ತನ್ನ ಸಂಕಷ್ಟ ತೋಡಿಕೊಂಡ.

ಹಿಮೋಫಿಲಿಯಾ ಇದ್ದೂ ಕೆಲವರು ಸಾಧನೆ ಮಾಡಿದ್ದಾರೆ. ಅಂತವರಿಂದ ಮಾರ್ಗ ದರ್ಶನ ಅಥವಾ ಆತ್ಮ ವಿಶ್ವಾಸ ಮೂಡಿಸುವ ಅಗತ್ಯವಿದೆ. ಆ ಕೆಲಸವನ್ನು ಸರ್ಕಾರ ಅಥವಾ ಸಂಘ-ಸಂಸ್ಥೆಗಳು ಮಾಡಲಿ ಎಂಬುದು ಮತ್ತೋರ್ವ ವಿದ್ಯಾರ್ಥಿಯ ಆಶಯವಾಗಿತ್ತು.

ಕಾಯಿಲೆ ಇದ್ದವರಿಗೆ ಉದ್ಯೋಗದಲ್ಲೂ ಮೀಸಲಾತಿ ಸಿಕ್ಕರೆ ಉತ್ತಮ ಉದ್ಯೋಗ ಕಂಡು ಕೊಳ್ಳಬಹುದು ಎಂಬ ಮಾತು ಕೇಳಿ ಬಂತು. ಶಿಕ್ಷಣಕ್ಕಿಂತ ಮೊದಲು ನಮಗೆ ಸರಿಯಾದ ಚಿಕಿತ್ಸೆ ಬೇಕು. ಅನುಕಂಪಕ್ಕಿಂತ ಅವಕಾಶ ಕೊಡಬೇಕು ಎಂದಿದ್ದು ಮತ್ತೋರ್ವ ವಿದ್ಯಾರ್ಥಿ.



ಚಿಕ್ಕಮಕ್ಕಳಲ್ಲಿ ಹಿಮೋಫಿಲಿಯಾ ಇರುವುದೇ ಗೊತ್ತಾಗಿರುವುದಿಲ್ಲ. ಆದ್ದರಿಂದ ಕಾಯಿಲೆಯ ಲಕ್ಷಣಗಳು ಕಂಡಾಕ್ಷಣ ಗುರುತಿಸಿ, ಚಿಕಿತ್ಸೆ ನೀಡುವಂತಾಗಲು ಮಾಧ್ಯಮಗಳ ಮೂಲಕ ಅರಿವು ಮೂಡಿಸುವ ಅಗತ್ಯ ಹೆಚ್ಚಾಗಿದೆ ಎಂದು ವಿದ್ಯಾರ್ಥಿಯ ಸಲಹೆಯಾಗಿತ್ತು.

ಸಂವಾದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಹಿಮೋಫಿಲಿಯಾ ಸೊಸೈಟಿ ಅಧ್ಯಕ್ಷ ಡಾ.ಸುರೇಶ್ ಹನಗವಾಡಿ, ಪ್ರತಿ ಹತ್ತು ಸಾವಿರದಲ್ಲಿ ಒಬ್ಬರು ಹಿಮೋಫಿಲಿಯಾದಿಂದ ಬಳಲುತ್ತಿದ್ದಾರೆ. ಪ್ರಪಂಚದಾದ್ಯಂತ 4 ಲಕ್ಷ ಹಿಮೋಫಿಲಿಯಾ ರೋಗಿಗಳಿದ್ದು, ಶೇ.25ರಷ್ಟು ಜನ ಭಾರತ ದೇಶದಲ್ಲಿದ್ದಾರೆ. ಪ್ರತಿ ವರ್ಷ 1500 ಹೊಸ ರೋಗಿಗಳು ಪತ್ತೆಯಾಗುತ್ತಿದ್ದಾರೆ ಎಂದು ಹೇಳಿದರು.

ಮುಂದುವರೆದ ದೇಶಗಳಲ್ಲಿ ಹಿಮೋಫಿಲಿಯಾ ರೋಗಿಗಳಿಗೆ ಮೊದಲೇ ರಕ್ತ ಸ್ರಾವವಾಗದಂತೆ ತಡೆಯಲು ಚುಚ್ಚುಮದ್ದುಗಳನ್ನು ನೀಡಲಾಗುತ್ತಿದೆ. ಅಂತಹ ವ್ಯವಸ್ಥೆ ನಮ್ಮಲ್ಲೂ ಬಂದರೆ ರೋಗಿಗಳು ಯಾವುದೇ ಭಯವಿಲ್ಲದೆ ಸದೃಢ ಜೀವನ ನಡೆಸಬಹುದಾಗಿದೆ ಎಂದರು.

5 ದಿನಗಳ ಈ ಶಿಬಿರದಲ್ಲಿ ವ್ಯಕ್ತಿತ್ವ ವಿಕಸನ ತರಬೇತಿ, ಭೌತಿಕ ಚಿಕಿತ್ಸಾ ತರಬೇತಿ, ಮನೋ ಸಾಮಾಜಿಕ ಸಮಸ್ಯೆಗಳು, ಶೈಕ್ಷಣಿಕ ಮಾರ್ಗದರ್ಶನ, ವೃತ್ತಿ ಮಾರ್ಗದರ್ಶನ, ವೈವಾಹಿಕ ಜೀವನದ ಬಗ್ಗೆ ಸಲಹೆ, ಸರ್ಕಾರದಿಂದ ಸಿಗುವ ಸಾಮಾಜಿಕ ಸೌಲತ್ತುಗಳ ಬಗ್ಗೆ ಮಾಹಿತಿ, ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ಸಿಗುವ ವಿದ್ಯಾರ್ಥಿ ವೇತನದ ಮಾಹಿತಿ ನೀಡಲಾಗುತ್ತಿದೆ ಎಂದು ಹೇಳಿದರು.

ಸೊಸೈಟಿಯ ಆಡಳಿತಾಧಿಕಾರಿ ಡಾ. ಮೀರಾ ಹನಗವಾಡಿ ಪತ್ರಕರ್ತರುಗಳಾದ ಕೆ.ಎನ್. ಮಲ್ಲಿಕಾರ್ಜುನ ಮೂರ್ತಿ, ಮಂಜುನಾಥ ಕಾಡಜ್ಜಿ, ಡಿ.ಎಂ. ಮಹೇಶ್, ವೈದ್ಯರುಗಳಾದ ಡಾ.ಕಿರಣ್ ಕುಮಾರ್, ಡಾ. ರವಿಕುಮಾರ್ ಹಿಮೋಫಿಲಿಯಾ ಸೊಸೈಟಿಯ ಸಿಬ್ಬಂದಿ ವರ್ಗದವರು ಈ ಸಂದರ್ಭದಲ್ಲಿದ್ದರು

## ಭದ್ರಾ ಮೇಲ್ದಂಡೆ ಜಗಳೂರು ಶಾಖಾ ಕಾಲುವೆ ಪ್ರಗತಿಯಲ್ಲಿ

ಜಗಳೂರು, ಡಿ.15- ವಿಧಾನ ಪರಿಷತ್ ಸದಸ್ಯ ಚಿದಾನಂದ್ ಎಂ. ಗೌಡ ಅವರು ಭದ್ರಾ ಮೇಲ್ದಂಡೆ ಯೋಜನೆಯ ಪ್ರಗತಿಯ ಬಗ್ಗೆ ಕೇಳಲಾದ ಪ್ರಶ್ನೆಗೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೀಡಿರುವ ಲಿಖಿತ ಉತ್ತರದಲ್ಲಿ ಭದ್ರಾ ಮೇಲ್ದಂಡೆ ಯೋಜನೆ ಪ್ರಗತಿ ಹಾಗೂ ಹಣಕಾಸಿನ ಮಾಹಿತಿಯನ್ನು ನೀಡಿದ್ದಾರೆ. ಈ ಉತ್ತರದಲ್ಲಿ ಜಗಳೂರು ಶಾಖಾ ಕಾಲುವೆ ಅಡಿಯಲ್ಲಿ 13.200 ಹೆಕ್ಟೇರ್ ಕ್ಷೇತ್ರಕ್ಕೆ ಹನಿ ನೀರಾವರಿ ಕಲ್ಪಿಸುವ, ಕೆರೆಗಳನ್ನು ತುಂಬಿಸುವ ಯೋಜನೆಗೆ 1568.91 ಕೋಟಿ ರೂಪಾಯಿ ಮೊತ್ತದ ಕಾಮಗಾರಿಗಳನ್ನು 2 ಪ್ಯಾಕೇಜ್‌ಗಳಲ್ಲಿ ಕೈಗೆತ್ತಿಕೊಳ್ಳಲಾಗಿದ್ದು ಕಾಮಗಾರಿಗಳು ಪ್ರಗತಿಯಲ್ಲಿವೆ ಎಂದು ಉತ್ತರ ನೀಡಿದ್ದಾರೆ.

## ನೀಲಾನಹಳ್ಳಿಯಲ್ಲಿ ಇಂದು ಕಡೆ ಕಾರ್ತಿಕ



ದಾವಣಗೆರೆ ತಾಲ್ಲೂಕು ನೀಲಾನ ಹಳ್ಳಿ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಇಂದು ಸಂಜೆ ಕಡೆ ಕಾರ್ತಿಕೋತ್ಸವ ಜರುಗಲಿದೆ ಎಂದು ದೇವಸ್ಥಾನದ ಕನ್ವೀನರ್ ಎನ್.ಎಂ. ಆಂಜನೇಯ ಗುರೂಜಿ ತಿಳಿಸಿದ್ದಾರೆ.

# ಸೈನಿಕರ ಕಲ್ಯಾಣ ನಿಧಿ ಹೆಚ್ಚು ಸಂಗ್ರಹಿಸಲು ಒತ್ತು



### ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್

ದಾವಣಗೆರೆ, ಡಿ.15- ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆ ಅಂಗ ವಾಗಿ ಸೈನಿಕರ ಕಲ್ಯಾಣ ನಿಧಿಯನ್ನು ಈ ವರ್ಷವೂ ದಾವಣಗೆರೆಯಿಂದ ಹೆಚ್ಚು ಸಂಗ್ರಹಿಸಲಾಗುತ್ತದೆ ಎಂದು ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ. ತಿಳಿಸಿದರು.

ಅವರು ಶುಕ್ರವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆ ಅಂಗವಾಗಿ ಸೈನಿಕರ ಕಲ್ಯಾಣ ನಿಧಿಯನ್ನು ಸಂಗ್ರಹಿಸಲು ಧ್ವಜ ಬಿಡುಗಡೆ ಮಾಡಿ ಮಾತನಾಡಿದರು.

ಸೈನಿಕರು ದೇಶ ರಕ್ಷಣೆಯಲ್ಲಿ ತಮ್ಮ ನಿಸ್ವಾರ್ಥ ಸೇವೆ ಸಲ್ಲಿಸುತ್ತಾರೆ. ಈ ವೇಳೆ ಮರಣವನ್ನೂ ಹೊಂದಬಹುದು ಮತ್ತು ಗಾಯಾಳುಗಳಾಗಬಹುದು. ಸೈನಿಕರಿಗೆ ಮತ್ತು ಇವರ ಕುಟುಂಬದವರಿಗೆ ನೆರವಾಗಲು ಸೈನಿಕರ ಕಲ್ಯಾಣ ನಿಧಿ ಸಹಕಾರಿಯಾಗಲಿದೆ ಎಂದು ಹೇಳಿದರು.

ಸೈನಿಕ್ ವೆಲ್‌ಫೇರ್ ಬೋರ್ಡ್ ಎನ್ನುವುದು ನಮ್ಮ ದೇಶದ ಸೈನಿಕರ ಅಭಿವೃದ್ಧಿಗಾಗಿ ರಚನೆಯಾಗಿರುವ ಒಂದು ವಿಶೇಷ ಘಟಕವಾಗಿದೆ. ಸೈನಿಕರ ಕಲ್ಯಾಣ ನಿಧಿಗೆ ಕಳೆದ ವರ್ಷ ದಾವಣಗೆರೆ ಜಿಲ್ಲೆಯಿಂದ ಹೆಚ್ಚು ನಿಧಿಯನ್ನು ಸಂಗ್ರಹಿಸಲಾಗಿತ್ತು. ಇದಕ್ಕಾಗಿ ಡಿಸೆಂಬರ್ 7 ರಂದು ರಾಜ್ಯಪಾಲರು ಗೌರವಿಸಿ, ಸನ್ಮಾನಿಸಿದ್ದರು. ಈ ಬಾರಿಯೂ ಜಿಲ್ಲೆಯ ಎಲ್ಲಾ ಇಲಾಖೆ ಯವರು ಹೆಚ್ಚಿನ ಪ್ರಮಾಣದಲ್ಲಿ ಧನಸಹಾಯ ಮಾಡಿ ಸೈನಿಕರ ಅಭಿವೃದ್ಧಿಗೋಸ್ಕರ ಧ್ವಜ ನಿಧಿಯನ್ನು ಸಂಗ್ರಹಿಸಬೇಕಾಗಿದೆ ಎಂದರು.

ಜಿ.ಪಂ. ಸಿಇಓ ಸುರೇಶ್ ಇಟ್ನಾಳ್ ಮಾತನಾಡಿ, ದೇಶದ ಗಡಿಯಲ್ಲಿ ಸೈನಿಕರು ಸೆಣಸುವ ಮೂಲಕ ನಮ್ಮೆಲ್ಲ ರನ್ನು ರಕ್ಷಿಸುವರು. ಕಳೆದ ವರ್ಷದಂತೆ ಎಲ್ಲಾ ಇಲಾಖೆಗಳ ಸಹಕಾರದಿಂದ ಹೆಚ್ಚಿನ ಪ್ರಮಾಣದಲ್ಲಿ ಸೈನಿಕರ ಕಲ್ಯಾಣ ನಿಧಿಯನ್ನು ಸಂಗ್ರಹಿಸಲಾಗುತ್ತದೆ ಎಂದರು.

ಅಪರ ಜಿಲ್ಲಾಧಿಕಾರಿ ಪಿ.ಎನ್.ಲೋಕೇಶ್, ಸೈನಿಕ ಕಲ್ಯಾಣ ಮಂಡಳಿ ಹಾಗೂ ಪುನರ್ವಸತಿ ಇಲಾಖೆ ಉಪನಿರ್ದೇಶಕ ಡಾ. ಸಿ.ಎ.ಹಿರೇಮಠ, ಜಿಲ್ಲಾ ಮಾಜಿ ಸೈನಿಕರ ಸಂಘದ ಉಪಾಧ್ಯಕ್ಷ ಮಹೇಂದ್ರಕರ್, ಕಾರ್ಯದರ್ಶಿ ಮಂಜುನಾಥ ಪಿಸಾಳೆ, ಸಂಘದ ನಿರ್ದೇಶಕರಾದ ಮಾಲಗೌಡ ಪಾಟೀಲ್, ಬಿ.ವಿ.ಚಂದ್ರಪ್ಪ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

## ಷೇರು ಪೇಟೆಯಲ್ಲಿ ಹೆಚ್ಚಿದ ಉತ್ಸಾಹ : 71 ಸಾವಿರ ದಾಟಿದ ಸೂಚ್ಯಂಕ

ನವದೆಹಲಿ, ಡಿ. 15 – ಕಳೆದ 3 ದಿನಗಳಲ್ಲಿ ಷೇರು ಮಾರುಕಟ್ಟೆಯಲ್ಲಿ ಉತ್ಸಾಹ ಕಂಡು ಬಂದಿದ್ದು, ಮುಂಬೈ ಷೇರು ಸೂಚ್ಯಂಕ 71 ಸಾವಿರಗಳ ಗಡಿ ದಾಟಿದೆ. ಅಮೆರಿಕದ ಕೇಂದ್ರ ಬ್ಯಾಂಕ್ ಬಡ್ಡಿ ದರಗಳನ್ನು ಯಥಾಸ್ಥಿತಿಯಲ್ಲಿ ಉಳಿಸಿಕೊಂಡಿರುವ ಜೊತೆಗೆ, ಮುಂದಿನ ವರ್ಷ ಬಡ್ಡಿ ದರ ಕಡಿತ ಮಾಡುವ ಸೂಚನೆ ನೀಡಿದೆ. ನಿರಂತರವಾಗಿ ಷೇರುಪೇಟೆಗೆ ವಿದೇಶಿ ಹೂಡಿಕೆ ಹರಿದು ಬರುತ್ತಿದೆ. ಶುಕ್ರವಾರ ಮುಂಬೈ ಷೇರುಸೂಚ್ಯಂಕ 969.55 ಅಂಕಗಳ ಏರಿಕೆ ಕಂಡು 71,483.75ರ ಹಂತಕ್ಕೆ ತಲುಪಿದೆ. 3 ದಿನಗಳಲ್ಲಿ ಬಿ.ಎಸ್.ಇ. ಸೂಚ್ಯಂಕ 1,932.72 ಅಂಕಗಳ ಏರಿಕೆ ಕಂಡಿದೆ. ಇದು ಶೇ.2.77ರ ಏರಿಕೆಯಾಗಿದೆ.


## ಬನ್ನಿ ಮಹಾಂಕಾಳಿ ದೇವಸ್ಥಾನದಲ್ಲಿ ಸಂಭ್ರಮದ ದೀಪೋತ್ಸವ



ದಾವಣಗೆರೆ, ಡಿ. 15 - ನಗರದ ಆಂಜನೇಯ ಬಡಾವಣೆಯ 19ನೇ ಕ್ರಾಸ್‌ನಲ್ಲಿರುವ ಬನ್ನಿ ಮಹಾಕಾಳಿ ದೇವಸ್ಥಾನ ಅಭಿವೃದ್ಧಿ ಸಮಿತಿ ವತಿಯಿಂದ ಶುಕ್ರವಾರ ಸಂಜೆ ಶ್ರೀ ಬನ್ನಿ ಮಹಾಕಾಳದೇವಿಯ 11ನೇ ವರ್ಷ ಕಡೆಯ ಕಾರ್ತಿಕ ಮತ್ತು ದೀಪೋತ್ಸವ ಮಹೋತ್ಸವು ಇಂದು ವಿಜೃಂಭಣೆಯಿಂದ ನಡೆಯಿತು

ಈ ಸಂದರ್ಭದಲ್ಲಿ ಶ್ರೀ ಕ್ಷೇತ್ರ ಬಿದ್ದಹನುಮಪ್ಪನಹಟ್ಟಿ ಕಂಚಿಕೇರಿಯ ಶ್ರೀ ಬಸವರಾಜ ಗುರೂಜಿ, ಪ್ರೇರಣ ಹೆಲ್ತ್ ಕೇರ್ ಕ್ಲಿನಿಕ್ ಲ್ಯಾಬೋರೇಟರಿಯ ಅನಿಲ್ ಗೌಡ್ರು ಶೀಲಾ, ಪಾಲಿಕೆ ಮಾಜಿ ಉಪ ಮಹಾಪೌರರಾದ ನಾಗರತ್ನಮ್ಮ, ಪಾಲಿಕೆ ಸದಸ್ಯರಾದ ವೀಣಾ ನಂಜಪ್ಪ, ಮಹಾದೇವಪ್ಪ, ಶಿವಮೂರ್ತಿ, ಮಾಕನೂರ ಮಲ್ಲಿಕಾರ್ಜುನ್, ಟಿ. ಬಸವರಾಜ್, ದೀಪು ಹಾಗೂ ಭಕ್ತಾಧಿಗಳು ಭಾಗವಹಿಸಿದ್ದರು.

## ಪೀಠಾರೋಹಣದ 46 ಸಂವತ್ಸರ ಪೂರೈಸಿದ ಸಾಣೇಹಳ್ಳಿ ಪಂಡಿತಾರಾಧ್ಯ ಶ್ರೀಗಳಿಗೆ ಗೌರವ ಸಮರ್ಪಣೆ



ರಾಣೇಬೆನ್ನೂರು,ಡಿ.15- ತರಳಬಾಳು ಜಗದ್ಗುರು ಶಾಖಾಮಠ ಸಾಣೇಹಳ್ಳಿಯ ಪೀಠಾಧ್ಯಕ್ಷರಾದ ಡಾ. ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಪೀಠಾರೋಹಣ ಮಾಡಿ 46 ಸಂವತ್ಸರಗಳನ್ನು ಪೂರೈಸಿದ್ದು, ರಾಣೇಬೆನ್ನೂರಿಗೆ ಆಗಮಿಸಲಿರುವ ಶ್ರೀ ಗಳಿಗೆ ಅವರ ಅಭಿಮಾನಿಗಳು ಇದೇ ದಿನಾಂಕ 25 ರಂದು ಇಲ್ಲಿನ ಸಿದ್ದೇಶ್ವರ ಸಮುದಾಯ ಭವನದಲ್ಲಿ ಭಕ್ತಿಪೂರ್ವಕ ಗೌರವ ಸಮರ್ಪಿಸಲಿದ್ದಾರೆ.

# ಭಾರತವು ಮತ್ತೊಮ್ಮೆ ಸ್ವರ್ಣಿಮ ಭಾರತವಾಗಲಿದೆ


## 'ಶರಣರು ಕಂಡ ಶಿವ' ಪ್ರವಚನ ಮಾಲೆಯಲ್ಲಿ ಬ್ರಹ್ಮಾಕುಮಾರ ಡಾ. ಬಸವರಾಜ ರಾಜಋಷಿ

ದಾವಣಗೆರೆ, ಡಿ.15- ಹಿಂಸೆ, ಭ್ರಷ್ಟಾಚಾರ, ಅಧರ್ಮ, ಅಪನಂಬಿಕೆ ಹೆಚ್ಚಾಗಿರುವ ಈ ಕಲಿಯುಗದಲ್ಲಿ ಮತ್ತೆ ಧರ್ಮ ಸ್ಥಾಪನೆಗಾಗಿ 1936ರಲ್ಲಿಯೇ ಪರಂಧಾಮದಿಂದ ಜ್ಯೋತಿರ್ಲಿಂಗ ಸ್ವರೂಪನಾದ ಪರಮಾತ್ಮ ಧರಣಿ ಮೇಲೆ ಅವತರಿಸಿದ್ದಾನೆ ಎಂದು ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯ ಹುಬ್ಬಳ್ಳಿ ಉಪ ವಲಯದ ನಿರ್ದೇಶಕ ರಾಜಯೋಗಿ ಬ್ರಹ್ಮಾಕುಮಾರ ಡಾ.ಬಸವರಾಜ ರಾಜಋಷಿ ತಿಳಿಸಿದರು.

ಇಲ್ಲಿನ ವಿದ್ಯಾನಗರದ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ಆವರಣದಲ್ಲಿ ನಡೆಯುತ್ತಿರುವ 'ಶರಣರು ಕಂಡ ಶಿವ' ಪ್ರವಚನ ಮಾಲೆಯ 11ನೇ ದಿನವಾದ ಗುರುವಾರದ ಸಮಾರಂಭದಲ್ಲಿ ಅವರು ಪ್ರವಚನ ನೀಡಿದರು.

ಈಶ್ವರೀಯ ವಿಶ್ವವಿದ್ಯಾಲಯದ ಮೂಲಕ ಪರಮಾತ್ಮ ಶಿಕ್ಷಣ ನೀಡಿ ಮಾನವರನ್ನು ಪರಿವರ್ತಿಸುವ, ಸಂಸ್ಕಾರ ಕೊಡುವ ಕೆಲಸ ಮಾಡುತ್ತಿದ್ದಾನೆ. ಇನ್ನು ಕೇವಲ 13ರಿಂದ 15 ವರ್ಷದೊಳಗೆ ಅವನ ಕಾರ್ಯವೂ ಮುಗಿದು ಹೋಗುತ್ತದೆ ಎಂದು ಹೇಳಿದರು.

ಪರಮಾತ್ಮನ ಆಜ್ಞೆ ಪ್ರಕಾರ ಮಾನವರನ್ನು ದೇವತೆಗಳನ್ನಾಗಿ ಮಾಡುವ, ಕಲಿಯುಗವನ್ನು ಸತ್ಯಯುಗವನ್ನಾಗಿ ಮಾಡುವ ಶಿಕ್ಷಣವನ್ನು ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ನೀಡಲಾಗುತ್ತಿದೆ. ತಾವೆಲ್ಲಾ ಪರಮಾತ್ಮನ ಮೇಲೆ ವಿಶ್ವಾಸವಿಟ್ಟು 108 ಗಂಟೆಗಳ ಸಮಯ ಮೀಸಲಿಟ್ಟು ಶಿಕ್ಷಣ ಪಡೆಯಿರಿ. ಆ ಮೂಲಕ ಪರಮಾತ್ಮನ ವಾಣಿಯನ್ನು ಕೇಳಿ ಅವನ ಅನುಭೂತಿ, ಅನುಭಾವ ಪಡೆಯೋಣ ಎಂದು ಕರೆ ನೀಡಿದರು.



ಯಾರನ್ನು ನಾವು ದೇವತೆಗಳು, ಮಹಾತ್ಮರು ಎಂದು ಪೂಜಿಸುತ್ತೇವೋ ಅವರೆಲ್ಲಾ ಸನಾತನ ಭಾರತದ ದೇವತೆಗಳು. ಅಂತಹ ದೇವತೆಗಳಿದ್ದ ಈ ನಾಡು ಸಮೃದ್ಧಿಯ ಬೀಡಾಗಿತ್ತು.

1250 ವರ್ಷಗಳ ಕಾಲ ಇದ್ದ ಆ ಸತ್ಯಯುಗದಲ್ಲಿ ದೇವತೆಗಳ ಆಯಸ್ಸು 150 ವರ್ಷ ಆಗಿತ್ತು. ಅವರು 8 ಜನ್ಮಗಳನ್ನು ಪಡೆದು, ನಂತರ ತ್ರೇತಾಯುಗದಲ್ಲಿ ಜನ್ಮ ಪಡೆಯುತ್ತಾರೆ. ಈ ಯುಗದಲ್ಲೂ ಆತ್ಮ ಸತ್ವ ಅವಸ್ಥೆಯಲ್ಲಿರುವುದರಿಂದ ಸಮೃದ್ಧ ಭಾರತದಲ್ಲಿ ನಾವಿರುತ್ತೇವೆ. ಅದಕ್ಕೆ ನಮ್ಮ ದೇವಾಲಗಳಲ್ಲಿರುವ ದೇವತೆಗಳ ಮೂರ್ತಿ ಹಾಗೂ ಚಿತ್ರಗಳೇ ಸಾಕ್ಷಿ. ಅವರೆಲ್ಲಾ ಹಿಂದಿನ ಅವತಾರಿ ಪುರುಷ ದೇವತೆಗಳು ಎಂದು ವಿಶ್ಲೇಷಿಸಿದರು.

ಸತ್ಯಯುಗ ಹಾಗೂ ತ್ರೇತಾಯುಗಗಳಲ್ಲಿ ಯಾವ ಯುದ್ಧವೂ ಇರಲಿಲ್ಲ. ಯಾವ ಅನ್ಯ ಧರ್ಮಗಳೂ ಇರಲಿಲ್ಲ. ದೇವತೆಗಳನ್ನು ಪೂಜಿಸುವ ಅಗತ್ಯವೂ ಇರಲಿಲ್ಲ. ಅಂತಹ ಶ್ರೇಷ್ಠವಾದ ದೇವಲೋಕ ಈ ಭಾರತ ಭೂಮಿಯಲ್ಲಿತ್ತು ಹಾಗೂ ಅದು ಸಮೃದ್ಧಿಯಾಗಿತ್ತು. ಅದೇ ಸನಾತನ ಹಾಗೂ ಪುರಾತನ ಭಾರತ ಎಂದು ಹೇಳಿದರು.

ಈ ಸತ್ಯ ಹಾಗೂ ತ್ರೇತಾಯುಗ ಮುಗಿದ ಮೇಲೆ ಭಾರತದಲ್ಲಿ ಭಕ್ತಿಯ ಮಾರ್ಗ ಪ್ರಾರಂಭವಾಯಿತು. ಆ ಸಮಯದಲ್ಲಿ ಸನಾತನ ಧರ್ಮದ ಆತ್ಮರೇ ಪುನಃ ಜನ್ಮ ಪಡೆದರು. ವಿಶ್ವದ ಬೇರೆ ಬೇರೆ ಸ್ಥಳಗಳಲ್ಲಿ ಅನೇಕ ಧರ್ಮಗಳು ಉಗಮವಾದವು. ಸತ್ಯಯುಗದಲ್ಲಿದ್ದ ದೇವತೆಗಳೇ ಅನ್ಯ ದೇಶಗಳಲ್ಲಿ ಉಪಸ್ಥಿತರಾದರು. ಸನಾತನ ದೇವೀ, ಧರ್ಮದ ವಂಶಸ್ಥರ ಉದರದಲ್ಲಿಯೇ ಜನ್ಮ ಪಡೆದರು. ಉದಾಹರಣೆಗೆ ಬುದ್ಧ, ಮಹಾವೀರ ಇತರರು.

ದ್ವಾಪರ ಯುಗದ ಆದಿಯಲ್ಲಿ ದೇವರನ್ನು ಹುಡುಕುವುದು ಆರಂಭವಾಯಿತು. ಆಗ 12 ಜ್ಯೋತಿರ್ಲಿಂಗಗಳು ಭಾರತದಲ್ಲಿ ಸ್ಥಾಪಿತವಾದವು. ಏಕೇಶ್ವರ ಉಪಾಸನೆ ಮಾಡುವ ಇತಿಹಾಸ ಭಾರತದಲ್ಲಿತ್ತು. 250 ವರ್ಷಗಳ ನಂತರ ಋಷಿಗಳು ಕಾವ್ಯಗಳನ್ನು ರಚಿಸಲಾರಂಭಿಸಿದರು. ಪುರಾಣ, ಧರ್ಮ ಗ್ರಂಥಗಳನ್ನು ರಚಿಸಿದರು. ಹಿಂದೆ ಯಾರು ಭಾರತ ಆಳಿದ್ದರೋ ಅಂತಹ ದೇವಾನು ದೇವತೆಗಳ ಬಗ್ಗೆ ಪುರಾಣ ಕಥೆಗಳನ್ನು ರಚಿಸಲಾಯಿತು ಎಂದು ತಿಳಿಸಿದರು.

ಈ ಯುಗದಲ್ಲಿ ಬಹುದೇವೋಪಾಸನೆ ಆರಂಭವಾದರೂ ಭಾರತ ಅತ್ಯಂತ ಸಮೃದ್ಧಿಯಾಗಿತ್ತು. ಈ ಸಂಪತ್ತೆಲ್ಲಾ ಸತ್ಯಯುಗದಲ್ಲಿ ಸಂಪಾದನೆಯಾಗಿದ್ದುದು. ದ್ವಾಪರ ಯುಗ ಮುಗಿದ ಮೇಲೆ ಕಲಿಯುಗದ ಆದಿಯಲ್ಲಿ ಭಾರತದ ಸಂಪತ್ತೆಲ್ಲಾ ಲೂಟಿಯಾಯಿತು. ಇದೆಲ್ಲಾ ನಮಗೆ ಇತಿಹಾಸದಿಂದ ತಿಳಿದು ಬರುತ್ತದೆ.

ಕಲಿಯುಗದಲ್ಲಿ ಸತ್ಯ ಸತ್ತು ಹೋಗುತ್ತಿದೆ. ಅನಾಗರೀಕತೆ, ಅತ್ಯಾಚಾರ, ಹಗಲು ದರೋಡೆಗಳನ್ನು ನೋಡುತ್ತಿದ್ದೇವೆ. ತಮೋ ಪ್ರಧಾನ ಅವಸ್ಥೆಯಲ್ಲಿದ್ದೇವೆ. ಸನಾತನ ಪರಂಪರೆ, ಸಂಸ್ಕೃತಿ ಕಳೆದುಕೊಳ್ಳುತ್ತಿದ್ದೇವೆ. ಯಾವಾಗ ಧರ್ಮ ಅಧೋಗತಿಗೆ ಬರುತ್ತದೋ ಆ ವೇಳೆ ನಾನು ಮತ್ತೆ ಅವತರಿಸುತ್ತೇನೆ ಎಂದು ಭಗವಂತ ಆಶ್ವಾಸನೆ ನೀಡಿದ್ದಾನೆ. ಹಾಗಾಗಿಯೇ ಭಗವಂತನ ಅವತರಣೆಯಾಗಿದೆ ಎಂದು ಪ್ರತಿಪಾದಿಸಿದರು.

ಈಶ್ವರೀಯ ವಿಶ್ವವಿದ್ಯಾಲಯದ ದಾವಣಗೆರೆ ಶಾಖೆಯ ಪ್ರಧಾನ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ನೇತೃತ್ವದಲ್ಲಿ ಸಂಸ್ಥೆಯ ವಿದ್ಯಾನಗರ ಶಾಖೆ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಗೀತಾಜಿ ಕಾರ್ಯಕ್ರಮದ ಉಸ್ತುವಾರಿ ವಹಿಸಿದ್ದರು.

**ನೇರ ಪ್ರಸಾರ :** ಸುದೀರ್ಘ ಒಂದು ತಿಂಗಳ ಕಾಲ ಪ್ರತಿದಿನ ಸಂಜೆ 6.30 ರಿಂದ 7.30ರವರೆಗೆ 1 ಗಂಟೆ ಸಮಯ ನಡೆಯುವ ಈ ಪ್ರವಚನವನ್ನು ನೇರ ಪ್ರಸಾರ ವೀಕ್ಷಿಸಲು ಯು ಟ್ಯೂಬ್ ಚಾನಲ್ಲಾದ ರಾಜಯೋಗ ಟಿವಿ ಕನ್ನಡದಲ್ಲಿ (youtube/rajayogatvkannada) ವೀಕ್ಷಿಸಬಹುದು.

## ಮಹಿಳಾ ಜಡ್ಜ್‌ಗೆ ಲೈಂಗಿಕ ಪೀಡನೆ ಸುಪ್ರೀಂ ನ್ಯಾಯಮೂರ್ತಿಗೆ ಪತ್ರ

ನವದೆಹಲಿ, ಡಿ. 15 – ಜಿಲ್ಲಾ ನ್ಯಾಯಾಧೀಶರೊಬ್ಬರಿಂದ ಲೈಂಗಿಕ ಪೀಡನೆಯಾಗುತ್ತಿದೆ ಎಂದು ಆರೋಪಿಸಿರುವ ಉತ್ತರ ಪ್ರದೇಶದ ಬಂಡ ಜಿಲ್ಲೆಯ ಮಹಿಳಾ ನ್ಯಾಯಾಧೀಶೆಯೊಬ್ಬರು, ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರಿಗೆ ಪತ್ರ ಬರೆದಿದ್ದಾರೆ.

ಪೀಡನೆಯ ಕಾರಣದಿಂದಾಗಿ ಬದುಕುವುದಕ್ಕೆ ಇಷ್ಟವಿಲ್ಲ. ಗೌರವದಿಂದ ಜೀವನ ಅಂತ್ಯಗೊಳಿಸಲು ಅನುಮತಿ ನೀಡಬೇಕು ಎಂದು ನ್ಯಾಯಾಧೀಶೆ ಪತ್ರ ಬರೆದಿದ್ದಾರೆ. ಈ ಬಗ್ಗೆ ಅಲಹಾಬಾದ್ ಹೈಕೋರ್ಟ್ ವರದಿ ನೀಡಬೇಕೆಂದು ನ್ಯಾಯಮೂರ್ತಿ ಚಂದ್ರಚೂಡ್ ತಿಳಿಸಿದ್ದಾರೆ.

ಬಾರಾಬಂಕಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಪೀಡನೆ ಎದುರಾಗಿದೆ. ಈಗ ಜೀವನದಲ್ಲಿ ಮುಂದುವರೆಯುವ ಯಾವುದೇ ಬಯಕೆ ಇಲ್ಲ. ಒಂದೂವರೆ ವರ್ಷದಿಂದ ನಡೆದಾಡುವ ಶವದಂತಾಗಿದ್ದೇನೆ. ಜೀವನದಲ್ಲಿ ಯಾವುದೇ ಅರ್ಥ ಉಳಿದಿಲ್ಲ. ಗೌರವಯುತವಾಗಿ ಜೀವನ ಅಂತ್ಯಗೊಳಿಸಲು ಅನುಮತಿ ಕೊಡಿ ಎಂದು ಮಹಿಳಾ ಜಡ್ಜ್ ಬರೆದಿರುವ ಪತ್ರ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಮಹಿಳಾ ಜಡ್ಜ್ ನೀಡಿರುವ ದೂರನ್ನು ಆಂತರಿಕ ದೂರುಗಳ ಸಮಿತಿಗೆ ವಹಿಸಲಾಗಿದೆ. ವಿಚಾರಣೆ ಯಾವ ಹಂತದಲ್ಲಿದೆ ಎಂಬ ಬಗ್ಗೆ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ವಿವರ ಕೇಳಿದ್ದಾರೆ.

## ರಾಜಸ್ಥಾನದ ಸಿಎಂ ಆಗಿ ಶರ್ಮಾ ಪ್ರಮಾಣ ವಚನ



ಜೈಪುರ, ಡಿ. 15 - ಬಿಜೆಪಿ ನಾಯಕ ಭಜನ್ ಲಾಲ್ ಶರ್ಮಾ ಅವರು ರಾಜಸ್ಥಾನದ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಅಲ್ಬರ್ಟ್ ಹಾಲ್‌ನಲ್ಲಿ ನಡೆದ ಸಮಾರಂಭದಲ್ಲಿ ದಿಯಾ ಕುಮಾರಿ ಹಾಗೂ ಪ್ರೇಮ್ ಚಂದ್ ಬೈರ್ವ ಅವರು ಉಪ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ.

ರಾಜ್ಯಪಾಲ ಕಲ್‌ರಾಜ್ ಮಿಶ್ರ ಅವರು ಪ್ರಮಾಣ ವಚನ ಬೋಧಿಸಿದ್ದಾರೆ. ಈ ಸಂದರ್ಭದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ, ಗೃಹ ಸಚಿವ ಅಮಿತ್ ಷಾ ಮತ್ತಿತರರು ಉಪಸ್ಥಿತರಿದ್ದರು.

## ಗ್ರಾಮಾಂತರ ಪ್ರದೇಶದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಮಾಯಕೊಂಡ, ಆವರಗೆರೆ, ಮೆಳ್ಳೇಕಟ್ಟೆ ಮತ್ತು ಕಾಡಜ್ಜಿ ವಿದ್ಯುತ್ ಮಾರ್ಗಗಳಲ್ಲಿ ಅಡಚಣೆ ಉಂಟಾಗುವುದರಿಂದ ಇಂದು ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಆರ್.ಎಂ.ಸಿ. ಲಿಂಕ್ ರಸ್ತೆ, ಬಿ.ಟಿ. ಲೇಔಟ್, ಗುಜರಿ ಲೈನ್, ಬಂಬೂ ಬಜಾರ್, ಮಟ್ಟಿಕಲ್, ಬಿಡಿಓ ಕಛೇರಿ, ಇಮಾಮ್ ನಗರ, ಅಮರಪ್ಪನ ತೋಟ, ಆನೆಕೊಂಡ, ಎಲ್.ಬಿ.ಎಸ್. ನಗರ. ಟಿ.ಸಿ. ಲೇಔಟ್, ಬಿಟಿ ಲೇಔಟ್, ಕೆ.ಆರ್. ರಸ್ತೆ, ಇಮಾಮ್ ನಗರ, ಆನೆಕೊಂಡ, ಐನಳ್ಳಿ ಕಾಂಪೌಂಡ್, ಎಪಿಎಂಸಿ, ಭಾರತ್ ಕಾಲೋನಿ, ಶೇಖರಪ್ಪ ನಗರ ಹೆಚ್.ಕೆ.ಆರ್. ನಗರ, ಕಬ್ಬೂರು ಬಸಾಪುರ ನಗರ, ಅಣ್ಣಾ ನಗರ, ಬಸಾಪುರ ರಸ್ತೆ, ಗೋಶಾಲೆ, ಪಿ.ಬಿ. ರಸ್ತೆ, ರವಿ ಮಿಲ್ ಹಾಗೂ ಆವರಗೆರೆ, ಹೊನ್ನೂರು, ಐಗೂರು, ಮಲ್ಲಶೆಟ್ಟಿಹಳ್ಳಿ, ತೊಳಹುಣಸೆ, ದಾವಣಗೆರೆ ವಿಶ್ವವಿದ್ಯಾಲಯ ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳು.

ಮೆಳ್ಳೇಕಟ್ಟೆ ಫೀಡರ್ ವ್ಯಾಪ್ತಿಯ ಆಲೂರು, ಬಿ.ಜಿ.ಹಳ್ಳಿ, ಸಿದ್ದನೂರು, ಮಲ್ಲಾಪುರ, ಗುಡಾಳು, ಅಣಜಿ, ಕಿತ್ತೂರು, ಕಂದನಕೋವಿ, ಮೆಳ್ಳೇಕಟ್ಟೆ ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳು. ಕಾಡಜ್ಜಿ ಫೀಡರ್ ವ್ಯಾಪ್ತಿಯ ರೆಡ್ಡಿ ಕ್ಯಾಂಪ್, ಪುಟಗನಾಳು, ಶ್ರೀರಾಮ ನಗರ, ಕಾಡಜ್ಜಿ, ಬಸವನಾಳು, ನಾಗರಕಟ್ಟೆ ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳು.

ಮಾಯಕೊಂಡ ಫೀಡರ್ ವ್ಯಾಪ್ತಿಯ ಎಲ್ಲಾ 11 ಕೆವಿ ವಿದ್ಯುತ್ ಮಾರ್ಗಗಳಿಂದ, ದಿಂಡ ದಹಳ್ಳಿ, ನರಗನಹಳ್ಳಿ, ಮಾಯಕೊಂಡ, ಬೊ ಮ್ಮೇನಹಳ್ಳಿ, ಬಾವಿಹಾಳು, ಬುಳ್ಳಾಪುರ, ಕೊಡಗನೂರು, ನಲ್ಕುಂದ, ಬಸಾಪುರ, ಅಣಬೇರು ಗ್ರಾಮಗಳು ಹಾಗೂ ಸುತ್ತಮುತ್ತ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ಬೇಕಾಗಿದ್ದಾರೆ
ಟೂನ್ಜ್
ದಾವಣಗೆರೆಯ ಪ್ರತಿಷ್ಠಿತ ಆಟಿಕೆಗಳ ಹಾಗೂ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಯುವಕ / ಯುವತಿಯರು ಬೇಕಾಗಿದ್ದಾರೆ.
TOONZ
7ನೇ ಮುಖ್ಯರಸ್ತೆ, 7ನೇ ಅಡ್ಡರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.
70199 85487
73492 47160